

ಲಂಕೇಶ್
ನವೆಂಬರ್ 11, 2009 ರೂ. 12/-

ಹೊಳೆಗೆ ಹೊಸನೀರು
ಬಿ.ಎಂ. ರಶೀದ್

ತಲೆದಂಡ



ಯಡ್ಡಿದಾ? ರೆಡ್ಡಿದಾ?



ಕ್ರಿಮಿನಲ್ ಕೇಸ್‌ನಲ್ಲಿ ಕೆಎಂಎಫ್ ಅಧ್ಯಕ್ಷ

ಶೆಟ್ಟರ್ ಮೂಗಿಗೆ ಸಿಎಂ ಕ್ಯಾರೆಟ್?



ಹವ್ಯಕರ ದಂಗೆ



ನೊಳಂಬ ಮಠ ವಿಚಿತ್ರ ಬಿಕ್ಕಟ್ಟು

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಸಮಾಜವಾದ ಬಾಲ್ಯದಲ್ಲಿದೆ– ಆದರೆ ಸಮಾಜವಾದಿಗಳಿಗೆ 75 ತುಂಬಿದೆ!

ಒಂದು ಚಳವಳಿ ತನ್ನ ಆತ್ಮಾವಲೋಕನ ಮಾಡಿಕೊಳ್ಳುವಾಗ ತನ್ನ ಸಾಧನೆಯನ್ನೂ ಮನನ ಮಾಡಿಕೊಳ್ಳಬೇಕಾದದ್ದು ಅಗತ್ಯವೇ. ಏಕೆಂದರೆ ಒಂದು ಚಳವಳಿ ತನ್ನ ಸಕಾರಾತ್ಮಕ ಶಕ್ತಿಯನ್ನು ಸದೃಢಗೊಳಿಸಿಕೊಳ್ಳುತ್ತಲೇ ತನ್ನ ಬಲಹೀನತೆಯನ್ನು ಹೋಗಲಾಡಿಸಿಕೊಳ್ಳಲು ಶ್ರಮಿಸಬೇಕು. ಆದರೆ ಎಲ್ಲೆಡೆ ಸಮಾಜವಾದಿ ಆಂದೋಲನಗಳನ್ನೂ ಒಳಗೊಂಡಂತೆ ಎಲ್ಲಾ ಬಗೆಯ ಚಳವಳಿಗಳು ಕಸುವನ್ನು ಕಳೆದುಕೊಳ್ಳುತ್ತಿದ್ದರೂ, ಸಮಾಜವಾದಿ ವಿರೋಧೀ ಶಕ್ತಿಗಳು ಎಷ್ಟೇ ತಾತ್ಕಾಲಿಕ ಮತ್ತು ಸಾಪೇಕ್ಷ ಜಯವನ್ನು ಪಡೆದುಕೊಳ್ಳುತ್ತಿದ್ದರೂ ಅದನ್ನು ಪರಿಗಣಿಸದೇ ತಮ್ಮದು "ಗೆದ್ದ ಆಂದೋಲನ"ವೆಂದು ಬಣ್ಣಿಸಿಕೊಳ್ಳುವುದು ಆ ಚಳವಳಿಯ ಸ್ಥಗಿತತೆಯನ್ನು ಅರ್ಥಾತ್ ವೃದ್ಧಾಪ್ಯವನ್ನು ಸೂಚಿಸುತ್ತದೆ.

ಒಬ್ಬ ವ್ಯಕ್ತಿಗೆ 75 ವಯಸ್ಸಾದರೆ ವೃದ್ಧಾಪ್ಯ. ಆದರೆ ಒಂದು ಚಳವಳಿಗೆ 75 ತುಂಬುವುದು ಅದರ ಪ್ರೌಢಾವಸ್ಥೆಯನ್ನು ತೋರಿಸುತ್ತದೆಯೇ ವಿನಃ ವೃದ್ಧಾಪ್ಯವನ್ನಲ್ಲ. ಆದರೆ 75 ತುಂಬಿದ ತಕ್ಷಣ ಎಲ್ಲರೂ ವೃದ್ಧರಾಗಿ ಬಿಡುವುದಿಲ್ಲ. ಹಲವು ವ್ಯಕ್ತಿಗಳು ತಮ್ಮ 75ನೇ ವಯಸ್ಸಿನಲ್ಲೂ 25ರ ಯುವಕರನ್ನೂ ನಾಚಿಸುವಂಥ ಜೀವನಾಸಕ್ತಿ ಮತ್ತು ಮಾನಸಿಕ ತಾರುಣ್ಯವನ್ನು ಉಳಿಸಿಕೊಂಡಿರುತ್ತಾರೆ. ಅದಕ್ಕೆ ತದ್ವಿರುದ್ಧವಾಗಿ ಕೆಲವು ಚಳವಳಿಗಳು 75ರ ಪ್ರೌಢಾವಸ್ಥೆಯನ್ನು ತಲುಪಿದರೂ ಬಾಲ್ಯದಿಂದ ಅಥವಾ ಬಾಲಿಶತನದಿಂದ ಹೊರ ಬಂದಿರುವುದಿಲ್ಲ.

ಚಳವಳಿ ಎಂಬ ಪದ ಅಮೂರ್ತವಾದರೂ ಅದಕ್ಕೆ ಜೀವ-ಭಾವ ತುಂಬುವವರು ಮನುಷ್ಯರೇ. ಆದ್ದರಿಂದ ಒಂದು ಚಳವಳಿ 75ನೇ ವಯಸಿನಲ್ಲಿ ಯಾವ ಅವಸ್ಥೆಯಲ್ಲಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಅದರ ನಾಯಕರ ಮನೋಧರ್ಮ ಯಾವ ವಯಸ್ಸಿನದು ಎಂಬುದೂ ಒಂದು ಅಳತೆಗೋಲಾಗಬಹುದು. ಇದು ಇತ್ತೀಚೆಗೆ ಬೆಂಗಳೂರಿನಲ್ಲಿ ನಾಡಿನ ಹಿರಿಯ ಸಮಾಜವಾದಿಗಳು ಏರ್ಪಡಿಸಿದ್ದ "ಸಮಾಜವಾದಿ ಆಂದೋಲನಕ್ಕೆ 75" ಎಂಬ ಕಾರ್ಯಕ್ರಮದಲ್ಲಿ ಇನ್ನಷ್ಟು ಸ್ಪಷ್ಟವಾಯಿತು.

ಯಾವುದೇ ವ್ಯಕ್ತಿ ಸಂಘಟನೆ ಅಥವಾ ಚಳವಳಿ ತಾರುಣ್ಯದಲ್ಲಿದೆ ಎನ್ನಲು ಅವು ಸದಾ ಚಲನೆಯಲ್ಲಿರಬೇಕು. ಅಂದರೆ ಚಲನೆಗೆ ಅಡ್ಡಿಯಾದ ತೊಡಕುಗಳನ್ನು ಗುರುತಿಸಿ ನಿವಾರಿಸಿಕೊಂಡು, ಮುಂದಿರುವ ಸವಾಲುಗಳನ್ನು ಎದುರಿಸಲು ತಯಾರಿ ಮಾಡಿಕೊಂಡಿರಬೇಕು. ಅದರ ಬದಲಿಗೆ ಹಿಂದನ್ನಾಗಲೀ, ಮುಂದನ್ನಾಗಲೀ ಸರಿಯಾಗಿ ಅರ್ಥೈಸಿಕೊಳ್ಳದೆ ತಾವು ಹಿಡಿದ ದಾರಿಯೇ ಸರಿಯಾದದ್ದು ಎಂದುಕೊಳ್ಳುವ ಯಾವುದೇ ವ್ಯಕ್ತಿ ಅಥವಾ ಚಳವಳಿಗೆ ವಯಸ್ಸಾಗಬಹುದೇ ವಿನಃ ಅವರ/ಅದರ ಬೆಳವಣಿಗೆಯಾಗುವುದಿಲ್ಲ. ಅದರ ಬೆಳವಣಿಗೆ ಸ್ಥಗಿತಗೊಂಡಿರುತ್ತದೆ. ವಯಸ್ಸು ಮಾತ್ರ ಹೆಚ್ಚಾಗುತ್ತಿರುತ್ತದೆ. ಇದು ಸಮಾಜವಾದಿ ಚಳವಳಿಯಿಂದ ಹಿಡಿದು ಮಾವೋವಾದಿ ಚಳವಳಿಯವರೆಗೆ ಎಲ್ಲದಕ್ಕೂ ಅನ್ವಯಿಸುವ ಸಾರ್ವತ್ರಿಕ ಸತ್ಯ.



ಸ್ಥಗಿತತೆ ವೃದ್ಧಾಪ್ಯದ ಮೊದಲ ಹಂತ. ಈ ಸ್ಥಗಿತತೆಯನ್ನು ಗುರುತಿಸದೆ ತಾವು ಅಂದುಕೊಂಡಿದ್ದನ್ನೆಲ್ಲಾ ಸಾಧಿಸಿಯಾಗಿದೆ ಎಂದು ಆತ್ಮವಂಚನೆ ಮಾಡಿಕೊಳ್ಳುವುದು ವೃದ್ಧಾಪ್ಯದಿಂದ ಸಾವಿನೆಡೆಗೆ/ಅವನತಿಯೆಡೆಗೆ ಇಡುವ ಮೊದಲ ಹೆಜ್ಜೆಯೂ ಆಗುತ್ತದೆ. ಒಬ್ಬ ವ್ಯಕ್ತಿಗೆ ಸಾವು ಅನಿವಾರ್ಯವೇ ಆದರೂ ಒಂದು ಚಳವಳಿ ವ್ಯಕ್ತಿಗಳೊಂದಿಗೆ ಸಾಯುವುದಿಲ್ಲ, ಸಾಯಬಾರದು. ಅದು ಕಾಲದೊಂದಿಗೆ ಮರುಹುಟ್ಟು ಪಡೆದುಕೊಳ್ಳಬೇಕೆಂದರೆ ತನ್ನ ಸ್ಥಗಿತ ಸ್ಥಿತಿಯನ್ನು ಬಿಗುಮಾನವಿಲ್ಲದೆ ಒಪ್ಪಿಕೊಂಡು ತನ್ನೊಳಗಿನ ಕೆಡುಕು-ತೊಡಕುಗಳ ವಿರುದ್ಧ ತಾನೇ ಯುದ್ಧ ಸಾರಿಕೊಳ್ಳಬೇಕು. ಆದ್ದರಿಂದಲೇ ಪ್ರಸಿದ್ಧ ರಾಜಕೀಯ ಚಿಂತಕರೊಬ್ಬರು "ಒಂದು ಚಳವಳಿ ಬೆಳೆಯುತ್ತದೋ ಇಲ್ಲವೋ ಎಂಬ ನಿರ್ಧಾರವನ್ನು ಅದು ತನ್ನ ತಪ್ಪುಗಳ ಬಗ್ಗೆ ಎಷ್ಟು ರಾಜಿರಹಿತವಾಗಿ ಯುದ್ಧ ಸಾರುತ್ತದೆ ಎಂಬುದನ್ನೇ ಆಧರಿಸಿರುತ್ತದೆ" ಎಂದು ಹೇಳುತ್ತಾರೆ.

ಇಂಥಾ ಸತ್ಯನಿಷ್ಠವಾದ ಮತ್ತು ಕಠೋರವಾದ ಆತ್ಮವಿಮರ್ಶೆಗೆ ಸಿದ್ಧವಿಲ್ಲದ ವ್ಯಕ್ತಿ ಅಥವಾ ಚಳವಳಿಗಳು ಒಂದೋ ತಾವು ಎಲ್ಲವನ್ನೂ ಸರಿ ಮಾಡಿಬಿಟ್ಟಿದ್ದೇವೆ ಎಂಬ ಭ್ರಮೆಯಿಂದ ವ್ಯವಸ್ಥೆಯೊಂದಿಗೆ ರಾಜಿಯಾಗುತ್ತವೆ. ಕೆಲವು ರಾಜಿಕೋರ ಸಮಾಜವಾದಿಗಳಂತೆ, ರಾಜಿಕೋರ ಕಮ್ಯುನಿಷ್ಟರಂತೆ. ಅಥವಾ ವಾಸ್ತವ ಸತ್ಯಗಳು ತಮ್ಮ ತಪ್ಪುಗಳನ್ನು ಮುಖಕ್ಕೆ ರಾಚುತ್ತಿದ್ದರೂ ಮೊಂಡು ಹಠಮಾರಿತನದಿಂದ ಯಾವುದೇ ತಿದ್ದುಪಡಿ ಮಾಡಿಕೊಳ್ಳದೆ ದುಸ್ಸಾಹಸಕ್ಕೆ ಕೈಹಾಕುತ್ತಾ ಹೋಗುತ್ತಾರೆ, ಕೆಲವು ಮಾವೋವಾದಿಗಳಂತೆ! ಎರಡು ಕೂಡಾ ಆತ್ಮಹತ್ಯಾಕಾರಿಯಾದದ್ದೇ! ಜನತೆಯ ಆಸಕ್ತಿಗೆ-ಸಮಾಜವಾದದ ಅಂತಿಮ ಲಕ್ಷ್ಯಕ್ಕೆ ವಿರುದ್ಧವಾದದ್ದೇ!

ಇಷ್ಟೆಲ್ಲಾ ಹೇಳಲು ಕಾರಣವಾದದ್ದು ಸಮಾಜವಾದಕ್ಕೆ 75 ತುಂಬಿದ ಹೊತ್ತಿನಲ್ಲಿ ನಾಡಿನ ಹಿರಿಯ ಸಮಾಜವಾದಿ ನಾಯಕರಾದ ಬಾಪೂ ಹೆದ್ದೂರ ಶೆಟ್ಟಿಯವರು ಅಕ್ಟೋಬರ್ 25ರಂದು 'ಪ್ರಜಾವಾಣಿ'ಯ ಸಾಪ್ತಾಹಿಕ ಪುರವಣಿಯಲ್ಲಿ ಸಮಾಜವಾದಿ ಆಂದೋಲನದ ಇತಿಹಾಸ ಮತ್ತು ಸಾಧನೆಗಳ ಬಗ್ಗೆ ಹೆಮ್ಮೆಯಿಂದ ಬರೆದುಕೊಂಡಿರುವ "ಗೆದ್ದ ಆಂದೋಲನ" ಎಂಬ ಅಗ್ರ ಲೇಖನ. ಮತ್ತು ಅಂದು ಸಮಾಜವಾದಿ ಆಂದೋಲನಕ್ಕೆ 75 ತುಂಬಿದ ನಿಮಿತ್ತ ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಇದೇ ಲೇಖನದ ಸಾರಾಂಶವನ್ನೇ ಆಧಾರವಾಗಿಟ್ಟುಕೊಂಡು ಸಮಾಜವಾದಿ ಅಧ್ಯಯನ ಕೇಂದ್ರದವರು ಪ್ರದರ್ಶಿಸಿದ ಸಾಕ್ಷ್ಯಚಿತ್ರ. ಇವೆರಡರಲ್ಲೂ ವ್ಯಕ್ತವಾಗಿರುವ ಧಾರ್ಷ್ಟ್ಯ, ಅಲ್ಪತೃಪ್ತ ಮನೋಭಾವ ಹಾಗೂ ರಾಜಕೀಯ ಸಂಕುಚಿತತೆಗಳನ್ನು ಬಹುಪಾಲು ಸಮಾಜವಾದಿಗಳು ಒಪ್ಪಲಾರರೆಂಬುದನ್ನು ಮೊದಲಿಗೆ ಗುರುತಿಸಲೇಬೇಕು. ಏಕೆಂದರೆ ಆ ತಲೆಮಾರಿನ ಹಿರಿಯ ಚಳವಳಿ ನಿರತ ರಾಜಿರಹಿತ ಸಮಾಜವಾದಿಗಳಲ್ಲೊಬ್ಬರಾಗಿದ್ದ ಕಿಷನ್ ಪಾಟ್ನಾಯಕರಂಥ ನಾಯಕರ ಅಭಿಪ್ರಾಯಗಳು ಖಂಡಿತಾ "ಗೆದ್ದ ಆಂದೋಲನ"ದ ಧೋರಣೆಯನ್ನು ಅನುಮೋದಿಸುವುದಿಲ್ಲ.

ಶೆಟ್ಟಿ ಅವರು ತಮ್ಮ ಲೇಖನದಲ್ಲಿ ತುರ್ತುಪರಿಸ್ಥಿತಿಯಲ್ಲಿ ಇಂದಿರಾಗಾಂಧಿ ತನ್ನ ಸರ್ವಾಧಿಕಾರವನ್ನು ಮರೆಮಾಚಲು ಸಂವಿಧಾನದದ ಮುನ್ನುಡಿಯ ಆಶಯಗಳಿಗೆ 'ಸಮಾಜವಾದ'ವನ್ನು ಸೇರಿಸಿದ್ದು; ಭಾರತೀಯ ಜನತಾ ಪಕ್ಷ ಸಮಾಜದಲ್ಲಿ ಮಾನ್ಯತೆ ಗಳಿಸಿಕೊಳ್ಳಲು ಕೇವಲ ಒಂದು ಅವಧಿಗೆ ತನ್ನ ಸಿದ್ಧಾಂತವನ್ನು "ಗಾಂಧಿ ಪ್ರಣೀತ ಸಮಾಜವಾದ"ವೆಂದು ಕರೆದುಕೊಂಡಿದ್ದು; ಸಶಸ್ತ್ರ ಹೋರಾಟಕ್ಕೆ ಜನ ಸಿದ್ಧರಿಲ್ಲವೆಂದು ಕಮ್ಯುನಿಸ್ಟ್ ಪಕ್ಷ ಪ್ರಜಾತಾಂತ್ರಿಕ ಮಾರ್ಗ ಹಿಡಿದದ್ದು ... ಇದೆಲ್ಲ ಸಮಾಜವಾದಿ ಆಂದೋಲನಕ್ಕೆ ಸಿಕ್ಕ ಸೈದ್ಧಾಂತಿಕ ಜಯವೆಂದು ಬೆನ್ನುತಟ್ಟಿಕೊಂಡಿರುವುದು ವಿಪರ್ಯಾಸವೇ ಸರಿ!

ಚಾರ್ವಾಕ

▸ ಶಿವಸುಂದರ್

ಕಾಲಕಾಲಕ್ಕೆ ಭಾರತದ ಆಳುವ ವರ್ಗ ತನ್ನ ಅಗತ್ಯಗಳಿಗೆ ಸಮಾಜವಾದದ ಕೆಲವು ಪದಗಳ ಅರ್ಥವನ್ನು ಕೊಂದು ಅಕ್ಷರವನ್ನು ಮಾತ್ರ ಬಳಸುತ್ತದೆ. ಅರ್ಥದ ಕೊಲೆಗೆ ಆಳದೆ ಅಕ್ಷರದ ಕೋ-ಆಪ್ಷನ್ ಅನ್ನೇ ಸಾಧನೆಯೆನ್ನತೊಡಗಿದರೆ ಏನನ್ನಬೇಕು?

ಬಾಪೂ ಹೆದ್ದೂರರ ಲೇಖನದ ಶೀರ್ಷಿಕೆಯೇ "ಗೆದ್ದ ಆಂದೋಲನ". ಅಂದರೆ ಸಮಾಜವಾದಿ ಆಂದೋಲನ ತನ್ನ ಹೋರಾಟದಲ್ಲಿ ಗೆಲುವು ಸಾಧಿಸಿ ಆಗಿದೆ ಎಂಬುದೇ ಆ ಲೇಖನದ ಸಾರಾಂಶ. ಆದ್ದರಿಂದಲೇ ಲೇಖನದ ಅಂತಿಮದಲ್ಲಿ ಅವರು "ಇಂದು ಭಾರತ ಪಾಳೆಗಾರಿಕೆ ಸಂಕೋಲೆಗಳನ್ನೆಲ್ಲಾ ಕಳಚಿಕೊಂಡು ಅಂತರರಾಷ್ಟ್ರೀಯ ಸ್ಥರದಲ್ಲಿ ತಲೆ ಎತ್ತಿ ನಡೆಯುತ್ತಾ ಹೆಚ್ಚಿನ ಸಮಾನತೆಯತ್ತ ಮುನ್ನಡೆಯುತ್ತಿರುವುದಕ್ಕೆ ಅವ್ಯಾಹತವಾಗಿ ನಡೆದುಕೊಂಡು



ಗೆದ್ದ ಆಂದೋಲನ

ಬಂದಿರುವ ಸಮಾಜವಾದಿ ಆಂದೋಲನವೂ ಒಂದು ಪ್ರಮುಖ ಕಾರಣ" ಎಂದು ಘೋಷಿಸುತ್ತಾರೆ. ಭಾರತದಲ್ಲಿ ಸಮಾಜವಾದ ಸ್ಥಾಪನೆಯಾಗಬೇಕೆಂಬ ಆಶಯದಿಂದ ಸಮಾಜವಾದಿ ಆಂದೋಲನ ದುಡಿಯುತ್ತಾ ಬಂದಿರುವುದು ನಿಜವಾದರೂ ವಾಸ್ತವವಾಗಿ ಇಂದಿನ ಭಾರತ "ಅಂತರರಾಷ್ಟ್ರೀಯ ಸ್ಥರದಲ್ಲಿ ತಲೆ ಎತ್ತಿ ನಡೆಯುತ್ತಾ ಹೆಚ್ಚಿನ ಸಮಾನತೆಯತ್ತ ಮುನ್ನಡೆಯುತ್ತಿದೆಯೇ?" ಸಮಾಜವಾದಿ ಆಂದೋಲನ ಮಾತ್ರವಲ್ಲ ಕಮ್ಯುನಿಸ್ಟರು, ಗಾಂಧೀವಾದಿಗಳು, ನಕ್ಸಲರು ಎಲ್ಲರೂ ಅವ್ಯಾಹತವಾಗಿ ತಮ್ಮ ತಮ್ಮ ಮಾರ್ಗಗಳಲ್ಲಿ ಹೋರಾಟ ನಡೆಸುತ್ತಿದ್ದರೂ, "ಮಾನವ ಅಭಿವೃದ್ಧಿ ಸೂಚ್ಯಂಕ"ದ ಪ್ರಕಾರ ಪ್ರಪಂಚದ 182 ದೇಶಗಳಲ್ಲಿ ಭಾರತದ ಸ್ಥಾನ "ಅವ್ಯಾಹತವಾಗಿ" 134ನೇ ಸ್ಥಾನದಲ್ಲೇ ಮುಂದುವರೆದಿದೆ. 60 ವರ್ಷಗಳ ನಂತರವೂ ವಿಶ್ವದ 118 ರಾಷ್ಟ್ರಗಳ ಹಸಿವಿನ ಸೂಚ್ಯಂಕದಲ್ಲಿ ಭಾರತ 94ನೇ ಸ್ಥಾನದಲ್ಲಿದೆ. ಈ ವಾಸ್ತವ ಸತ್ಯವೇ ಹೋರಾಟ ನಿರತ ಎಲ್ಲಾ ಚಳವಳಿಗಳನ್ನು ಚಿಂತೆಗೆ ಮತ್ತು ಆತ್ಮವಿಮರ್ಶೆಗೆ ಹಚ್ಚಬೇಕಿತ್ತು. ಆದರೆ ಸಮಾಜವಾದಿ ಆಂದೋಲನದ 75ನೇ ವರ್ಷವನ್ನು ಆಚರಿಸುತ್ತಿರುವ ಸಮಾಜವಾದಿಗಳಿಗೆ ಮಾತ್ರ "ಆಂದೋಲನ ಗೆದ್ದಿತು" ಎಂಬ ತೃಪ್ತಿಯನ್ನು ಕೊಡುವುದೇಕೆ?

ಜಾಗತೀಕರಣ, ಉದಾರೀಕರಣ ಪ್ರಕ್ರಿಯೆಗಳು ಪ್ರಾರಂಭವಾದ ಮೇಲೆ ದೇಶದೊಳಗೆ ಬಡವ ಮತ್ತು ಶ್ರೀಮಂತರ ನಡುವಿನ ಅಂತರ 1:10 ಇದ್ದದ್ದು 1:250 ಆಗಿದೆಯೆಂದು ಸರ್ಕಾರವೇ ಪರೋಕ್ಷವಾಗಿ ಒಪ್ಪಿಕೊಳ್ಳುತ್ತಿದೆ. ಒಂದೆಡೆ ಅಂಬಾನಿಗಳ ಲಾಭಗಳಿಕೆ ದಿನಕ್ಕೆ 30 ಕೋಟಿಯನ್ನೂ ಮೀರುತ್ತಿದ್ದರೆ ದೇಶದ ಶೇ.70ರಷ್ಟು ಗ್ರಾಮೀಣ ಬಡಜನರ ದೈನಂದಿನ ಆದಾಯ ದಿನಕ್ಕೆ 30 ರೂ.ಗಳನ್ನು ದಾಟುತ್ತಿಲ್ಲವೆಂದು ಸಂಸತ್ತಿನ ಅರ್ಜುನ್ ಗುಪ್ತಾ ಸಮಿತಿಯೇ ವರದಿ ನೀಡಿದೆ. ಈ ಪ್ರಮಾಣದ ಅಸಮಾನತೆ ಭಾರತದ ಇತಿಹಾಸದಲ್ಲೇ ಎಂದೂ ಉಂಟಾಗಿರಲಿಲ್ಲ. ಆದರೂ ನಮ್ಮ 'ಸಮಾಜವಾದಿಗಳಿಗೆ' "ಇಂದು ನಮ್ಮ ದೇಶದಲ್ಲಾಗಿರುವ ಬದಲಾವಣೆಗಳನ್ನು ಗಮನಿಸಿದರೆ ದೇಶ ಸಮಾಜವಾದಿಗಳು ತೋರಿಸಿದ ದಾರಿಯನ್ನು ತುಳಿಯುತ್ತಿದೆ ಎನ್ನುವುದು ಸ್ಪಷ್ಟ. ಇದು ಸಮಾಜವಾದಿಗಳ ದೊಡ್ಡ ಗೆಲುವು" ಎನ್ನುವಷ್ಟು ಧಾರ್ಷ್ಟ್ಯವಿದೆ!

ಈ 'ಸಮಾಜವಾದಿಗಳ' ಪ್ರಕಾರ "ಸಮಾಜವಾದಿ ಆಂದೋಲನ ಮೊದಲಿಂದ ಒತ್ತಾಯಪಡಿಸುತ್ತಿದ್ದ ಜಮೀನ್‌ದಾರಿ ಪದ್ಧತಿಯ ರದ್ಧತಿ, ಉಳುವವನಿಗೇ ಭೂಮಿಯ ಒಡೆತನ, ರೈತರು ಪಡೆದ ಸಾಲಗಳ ರದ್ಧತಿ, ಉದ್ಯೋಗ ಖಾತರಿ, ನಿರುದ್ಯೋಗ ಪರಿಹಾರ ಧನ, ಪಡಿತರ ಮೊದಲಾದ ಹಲವಾರು ಕಾರ್ಯಕ್ರಮಗಳು ಇಂದು ಜಾರಿಯಾಗಿವೆ."!! ವಾಸ್ತವವಾಗಿ ಇಂದು ಹಲವಾರು ಹೋರಾಟ ನಿರತ ಸಮಾಜವಾದಿ ನಾಯಕರೇ ಒಪ್ಪಿಕೊಳ್ಳುವಂತೆ ಭೂ-ಸುಧಾರಣೆ ಕಾಯಿದೆ - ಹಳೇ ಮೈಸೂರು ಮತ್ತು ಕರಾವಳಿ ಪ್ರಾಂತ್ಯಗಳನ್ನು ಬಿಟ್ಟರೆ - ಎಲ್ಲೆಡೆ ಪರಿಣಾಮಕಾರಿಯಾಗಿ ಜಾರಿಗೆ ಬರಲಿಲ್ಲ. ಮೂಲಭೂತವಾಗಿ ಸಮಾಜವಾದಿಗಳ ಹೋರಾಟ ಗೇಣಿ ರದ್ಧತಿಯ ವಿರುದ್ಧವಾಗಿತ್ತೇ ವಿನಃ ಭೂ ಹೀನರಿಗೆ-ದಲಿತರಿಗೆ ಭೂಮಿ ಕೊಡಿಸುವ ಚಳವಳಿಯಾಗಿರಲಿಲ್ಲ. ಅದಕ್ಕೆ ದಲಿತ ಮತ್ತು ಕಮ್ಯುನಿಸ್ಟ್ ಹಾಗೂ ನಕ್ಸಲ್ ಚಳವಳಿಗಳೇ ಬರಬೇಕಾಯ್ತು. ಆಂಧ್ರದಲ್ಲಿ, ಕೇರಳದಲ್ಲಿ ಮತ್ತು ಪ.ಬಂಗಾಳ, ಬಿಹಾರಗಳಲ್ಲಿ ದಲಿತ ರೈತ ಕೂಲಿಗಳು ಮೊದಲು ಕಮ್ಯುನಿಸ್ಟರ ನೇತೃತ್ವದಲ್ಲಿ ಮತ್ತು ಆ ನಂತರ ನಕ್ಸಲರ ನೇತೃತ್ವದಲ್ಲಿ ಭೂಮಿಗಾಗಿ ಹಿಂಸಾತ್ಮಕ ಹೋರಾಟವನ್ನೇ ನಡೆಸಬೇಕಾಯಿತೆನ್ನುವುದು ಐತಿಹಾಸಿಕ ಸತ್ಯ. ಕರ್ನಾಟಕದಲ್ಲೂ ಭೂ ಸುಧಾರಣೆ ಕಾಯಿದೆ ಜಾರಿಗೆ ಬರುವಲ್ಲಿ ದೇವರಾಜ್ ಅರಸ್ ಮತ್ತು ಹಲವು ಸಮಾಜವಾದಿಗಳ ಹೋರಾಟವೆಷ್ಟು ಕಾರಣವೋ ಕಕ್ಕಿಲ್ಲಾಯರಂಥ ಕಮ್ಯುನಿಷ್ಟರೂ ಕಾರಣ ಎಂಬುದನ್ನೂ ಮರೆಯುವಂತಿಲ್ಲ.

ಆದರೆ ಇಂದಿನ ಪ್ರಶ್ನೆ ಯಾವ ಚಳವಳಿ ಅಥವಾ ಪಕ್ಷಗಳಿಂದ ಈ ಹಿಂದೆ ಭೂ ಸುಧಾರಣಾ ಕಾಯಿದೆ ಜಾರಿಗೆ ಬಂತು ಎಂಬುದಲ್ಲ. ಆದರಿಂದ ನಿಜಕ್ಕೂ ಎಲ್ಲಾ ಭೂ ಹೀನರಿಗೂ ಭೂಮಿ ಸಿಕ್ಕಿತೇ ಎಂಬುದು ಆತ್ಮನಿರೀಕ್ಷಣೆಯ ವಿಷಯವಾಗಬೇಕಿತ್ತು. ಅಲ್ಲದೇ ಇಂದು ಜಾಗತೀಕರಣದ ಕಾಲಘಟ್ಟದಲ್ಲಿ ಮತ್ತೆ ಆ ಜಮೀನನ್ನು SEZ ಹೆಸರಿನಲ್ಲಿ ಮತ್ತು ಕಾರ್ಪೊರೇಟ್ ಫಾರ್ಮಿಂಗ್ ಹೆಸರಿನಲ್ಲಿ ಕಿತ್ತುಕೊಳ್ಳುತ್ತಿರುವಾಗ ಪರಿಣಾಮಕಾರಿ ಆಂದೋಲನವನ್ನೇ ಕಟ್ಟಲು ಆಗದಿರುವುದೇಕೆ ಎಂಬುದು ಎಲ್ಲಾ ಬಗೆಯ ಸಮಾಜವಾದಿಗಳ ಆತ್ಮಾವಲೋಕನದ ವಿಷಯವಾಗಬೇಕಿತ್ತು. ಆದರೆ ಆ ಸಾಕ್ಷ್ಯ ಚಿತ್ರದಲ್ಲಿ ಈ ಆತ್ಮಾವಲೋಕನದ ಅಂಶಗಳೇ ಇರಲಿಲ್ಲ. ಮಾತ್ರವಲ್ಲ ಈ ಸಮಾಜವಾದಿ ಆಶಯಗಳನ್ನು ಯಾವ್ಯಾವ ಇಸವಿಯಲ್ಲಿ "FULFILLED" ಮಾಡಲಾಯಿತು ಎಂಬ ಪಟ್ಟಿಯನ್ನೇ ನೀಡಲಾಗಿತ್ತು!

ಮೀಸಲಾತಿಯ ಮೂಲಕ ದಲಿತರಿಗೆ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ವಿಶೇಷ ಅವಕಾಶಗಳನ್ನು ಕಲ್ಪಿಸಿಕೊಡಲಾಯಿತು ಎಂದು ಮೀಸಲಾತಿ ನೀತಿಯ ಕ್ರೆಡಿಟ್ಟನ್ನೂ ಸಹ 1934ರ ಮೂಲ ಹೊಂದಿರುವ "ಸಮಾಜವಾದಿ ಆಂದೋಲನ"ಕ್ಕೆ ನೀಡಿಕೊಳ್ಳಲಾಗಿದೆ. ಆರ್ಥಿಕ ಕ್ಷೇತ್ರದಲ್ಲಿ ಯಾವ ಮೀಸಲಾತಿ ನೀಡಲಾಗಿದೆಯೆಂದು ಈ ನಾಯಕರೇ ಸ್ಪಷ್ಟಪಡಿಸಬೇಕು. ಮೀಸಲಾತಿ ನೀತಿ ಜಾರಿಗೆ ಬರಬೇಕೆಂಬುದು ಸಮಾಜವಾದಿ

▸▸▸14

ನೋ ಕಾಮೆಂಟ್ಸ್

"ಒಂದು ಕಡು ಬಡವರ ಸೈನ್ಯವನ್ನು ಉದ್ಯಮಪತಿಗಳ ಬೆಂಬಲ ಹೊಂದಿರುವ ಸೈನ್ಯ ಎದುರಿಸುತ್ತಿದೆ. ಹೀಗಾಗಿ ನಡೆಯುತ್ತಿರುವ ಈ ಯುದ್ಧದಲ್ಲಿ ಸಂಭವಿಸುವ ಹಿಂಸಾಚಾರಗಳ ಬಗ್ಗೆ ಕೇವಲ ನೈತಿಕ ನಿಲುವನ್ನು ಹೊಂದಿರಲು ಸಾಧ್ಯವಿಲ್ಲ. ಜನರನ್ನು ದಾರಿ ತಪ್ಪಿಸಲು ಆಳುವ ಪಕ್ಷಗಳಿಗೆ ಒಂದು ಬಗೆಯ ಕಲ್ಪಿತ ಶತ್ರುಗಳು ಬೇಕೇಬೇಕು. ಹೀಗಾಗಿಯೇ ಬಿಜೆಪಿಯು ಮುಸ್ಲಿಮರನ್ನು ಹೇಗೆ ಶತ್ರುಗಳೆಂದು ತೋರಿಸುತ್ತದೋ ಹಾಗೆ ಕಾಂಗ್ರೆಸ್ ಪಕ್ಷ ನಕ್ಸಲರನ್ನು ಶತ್ರುಗಳೆಂದು ಬಿಂಬಿಸುತ್ತದೆ."

- ಅರುಂಧತಿ ರಾಯ್



"ಭಾರತದಲ್ಲಿ ಪ್ರಜಾಪ್ರಭುತ್ವ ಉಳಿಯಲು ಜನರ ತಾಳ್ಮೆ ಕಾರಣ. ಆದರೆ ತಾಳ್ಮೆಗೂ ಒಂದು ಮಿತಿ ಇದೆ. ಅದು ಮುಗಿದು ಹೋದರೆ ಕ್ರಾಂತಿಯಾಗುತ್ತದೆ."

- ಸಂತೋಷ್ ಹೆಗ್ಡೆ

ಪ್ರೇಮ ವಿರೋಧಿಗಳ ವಿರುದ್ಧ ಲವರ್‌ಗಳ ಜಿಹಾದ್?

"ಉ.ಕನ್ನಡ, ದ. ಕನ್ನಡ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರುಗಳಲ್ಲಿ ಪ್ರತಿಶತ ಯುವಕರಿಗೆ ಕೇವಲ 80 ಯುವತಿಯರಿರುವುದು ಅಧ್ಯಯನದ ಮೂಲಕ ಗೊತ್ತಾಗಿದೆ. ಯುವತಿಯರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಲು ಪ್ರಮುಖ ಕಾರಣ 'ಲವ್ ಜಿಹಾದಿ'ಗಳ ದಾಳಿಯೇ ಆಗಿದೆ."

ಪ್ರಮೋದ್ ಮುತಾಲಿಕ್

ಕೋಮು ಡಯಾಕ್ಸೈಡ್ ಜಾಸ್ತಿ ಆಗಲು ನೀವೇ ಕಾರಣ!



"ಪರಿಸರ ಮಾಲಿನ್ಯ ಹೆಚ್ಚಾಗಲು ಮತ್ತು ಕೆರೆಗಳು ಕಣ್ಮರೆಯಾಗಲು ಹಿಂದಿನ ಸರ್ಕಾರಗಳೆ ಕಾರಣ."

ಅಶೋಕ್, ಸಾರಿಗೆ ಸಚಿವ

ಲವ್ ಜಿಹಾದ್ ಎಂಬ ಕಟ್ಟುಕತೆಯೂ... ಮನುಶಾಸ್ತ್ರ ಎಂಬ ಕಟುವಾಸ್ತವವೂ...



ಕಂಡಹಾಗೆ

■ ಗೌರಿ ಲಂಕೇಶ್

ಅದೊಂದು ಬಡ ಕುಟುಂಬ. ತಾಯಿ ಯಶೋಧ ತ್ತು ಮಗಳು ಸುಜಾತ ದಿನವಿಡೀ ಬೀಡಿ ಸುತ್ತಿ ದಿಷ್ಟು ಹಣ ಸಂಪಾದಿಸುತ್ತಿದ್ದರು. ಅದಾಗಲೇ ಜಾತಾಳಿಗೆ 28 ವರ್ಷ ವಯಸ್ಸಾಗಿತ್ತು, ಆಕೆಗೆ ಮದುವೆ ವ ಸಾಧ್ಯತೆಗಳೇ ಕ್ಷೀಣಿಸಿದ್ದವು. ಒಂದು ಆಕೆ ಒಬ್ಬನನ್ನು ಭೇಟಿಯಾದಳು. ಆತ ಗಿಂತ ಇಪ್ಪತ್ತು ವರ್ಷ ಹಿರಿಯನಾದರೂ, ಅವಳ ಜಾತಿಗೆ ಸೇರಿದ್ದ ಮತ್ತು ದಕ್ಷಿಣೆ ಇಲ್ಲದೆ ಸುಜಾತಾಳನ್ನು ಮದುವೆ ಲು ಮುಂದಾದ.



ಮೋಹನ್ ಕುಮಾರ್

ಒಂದೇ ಒಂದು ಸಮಸ್ಯೆ ಎದು ಯಿತು. ಆತನಿಗೆ ಆಗಲೇ ಒಂದು ಮುವೆ ಆಗಿತ್ತಾದ್ದರಿಂದ ಅವಳ ತಂದೆ ಯು ಆತನನ್ನು ಸುಜಾತಾ ಮದುವೆ ಕೂಡದೆಂದು ಹಟ ಹಿಡಿದರು. ಆದರೆ ಜಾತಾ ಕೇಳಲಿಲ್ಲ, ಆತ ಅಷ್ಟೊತ್ತಿಗಾಗಲೇ ಸುಜಾತಾಳಲ್ಲಿ ಬಿ ಹೋಗುತ್ತಿದ್ದ ಮದುವೆ, ಗಂಡ, ಮನೆ, ಮಕ್ಕಳು, ಾರ ಎಂಬ ಕನಸುಗಳು ಅರಳುವಂತೆ ಮಾಡಿದ್ದ. ಆ ಸುಗಳನ್ನು ತನ್ನ ಬಡ ತಂದೆ ತಾಯಿಯಿಂದ ತೀರಿಸಲಾಗುವುದಿಲ್ಲ ಎಂದು ಸುಜಾತಾ ಅರಿತಿದ್ದಳು. ನಿಗೆ ಆಗಲೇ ಹೆಂಡತಿ ಲ್ಲೇನಂತೆ, ತಾನು ನನ್ನೇ ಮದುವೆ ವೆ ಎಂದು ರಿಸಿದ ಸುಜಾತಾ ದು ದಿನ ನೊಂದಿಗೆ ಬಟೇ ೀದಳು...



ಬಲಿಯಾದ ಹುಡುಗಿಯರು

ಲೀಲಾವತಿಯ ಕತೆ ಸುಜಾತಾಳ ಕತೆಗಿಂತ ಭಿನ್ನವಾಗಿಲ್ಲ. ವರ್ಷ ವಯಸ್ಸಾಗಿದ್ದ ಲೀಲಾವತಿ ಎಸ್‌ಎಸ್‌ಎಲ್‌ಸಿ ಓದಿದ್ದರೂ ಬಡತನದಿಂದ ಬಡುಗಡೆ ಸಿಕ್ಕಿರಲಿಲ್ಲ. ದ್ದೂ ಬೀಡಿ ಸುತ್ತುವ ಕಾಯಕವೇ. ಆದರೆ ಅಲ್ಪಸ್ವಲ್ಪ ದ್ದರಿಂದ ಸ್ಥಳೀಯ ಹೋರಾಟಗಳಲ್ಲಿ ಭಾಗವಹಿಸು ದಿಟ್ಟತನ ಹೊಂದಿದ್ದಳು. ಆ ದಿಟ್ಟತನವೇ ಕೊನೆಗೆ ವೂ ಆಯಿತು. ಆನಂದ್ ಎಂಬಾತನನ್ನು ಪ್ರೀತಿಸಿದ್ದ ಾವತಿ ಆತ ತನ್ನನ್ನು ನೋಡಲು ಬರುತ್ತಾನೆಂದು ಯುವರಿಗೆ ಹೇಳಿದ್ದಳು. ಆದರೆ ಅದೇನಾಯಿತೋ , ಆತನನ್ನು ಮನೆಗೆ ಕರೆದುಕೊಂಡು ಬರುವ ಾಗಿ ಅವಳೇ ಮನೆಯಲ್ಲಿದ್ದ ಚೂರುಪಾರು ಭರಣಗಳನ್ನು ಕದ್ದು ಆನಂದನೊಂದಿಗೆ ಓಡಿಹೋದಳು. ಪಡೆದಿದ್ದ ಅಲ್ಪಸ್ವಲ್ಪ ವಿದ್ಯೆ ಕೈಯಲ್ಲೊಂದಿಷ್ಟು ಜೊತೆಯಲ್ಲಿ ಒಬ್ಬ ಗಂಡನಿದ್ದರೆ ಜಗತ್ತನ್ನೇ ರಿಸಬಹುದೆಂದು ಲೀಲಾವತಿ ಯೋಚಿಸಿ ದ್ದರೂ ಇಲ್ಲ.

ಗ ಕಮಲಾಳ ಕತೆ. ತನ್ನ ಸಂಬಂಧಿಕರ ಮನೆಯಲ್ಲಿ ಮಾಡುತ್ತಾ ಪ್ರಿಂಟಿಂಗ್ ಪ್ರೆಸ್ ಒಂದರಲ್ಲಿ ಚಿಕ್ಕಪುಟ್ಟ ಮಾಡುತ್ತಿದ್ದ 30 ವರ್ಷ ವಯಸ್ಸಿನ ಕಮಲಾಳಿಗೆ ವೆ ಪ್ರಸ್ತಾಪಗಳು ಆಗೀಗ ಬರುತ್ತಿದ್ದವು. ಆದರೆ ಾ ನೋಡಲು ಅಷ್ಟೇನು ಚೆನ್ನಾಗಿರದಿದ್ದ ಕಾರಣ ನ್ನು ಒಪ್ಪದೇ ಎಲ್ಲರೂ ಹಿಂದಿರುಗುತ್ತಿದ್ದರು. ಒಮ್ಮೆ ದಾನಂದ ಎಂಬಾತನನ್ನು ಭೇಟಿಯಾದಳು. ಕೆಲವೇ ಳಲ್ಲಿ ಪರಿಚಯ ಪ್ರೇಮವಾಗಿ ಅರಳಿತು. ಮದುವೆ ವ ಆತನ ಭರವಸೆಯನ್ನು ನಂಬಿ ಕಮಲಾ ಕೂಡ ಮನೆ ತೊರೆದು ಓಡಿಹೋದಳು. ಕೆಲ ದಿನಗಳ ನಂತರ ತಾನು ಸದಾನಂದನನ್ನು ಮದುವೆಯಾಗಿ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ ಎಂದು ತನ್ನ ಅಣ್ಣ ನಾರಾಯಣ ಎಂಬುವವರಿಗೆ ಫೋನ್ ಮಾಡಿ ಹೇಳಿದಳಾದರೂ ಆನಂತರ ಕಮಲಾ ತನ್ನ ಮನೆಯವರನ್ನು ಸಂಪರ್ಕಿಸಲೇ ಇಲ್ಲ.

ಪಿಜಿನಾ ಎಂಬ ಕೂಲಿಯ ಮೂವರು ಹೆಣ್ಣುಮಕ್ಕಳು ಮತ್ತು ಇಬ್ಬರ ಪುತ್ರರಲ್ಲಿ ಹಿರಿಯವಳೇ ವಿನುತಾ. ಕಿತ್ತು ತಿನ್ನುವ ಬಡತನ ಪಿಜಿನಾ ಅವರ ಸಂಸಾರದ ಭವಿಷ್ಯವನ್ನೇ ಅಂಧಕಾರದಲ್ಲಿ ಮುಳುಗಿಸಿತ್ತು. ವಿನುತಾ ಕೂಡ ಒಂದು ದಿನ ಯಾರಿಗೂ ಹೇಳದೇ ಕೇಳದೆ ಮನೆಯಿಂದ ಓಡಿಹೋದಳು....

ಸುಜಾತಾ, ಲೀಲಾವತಿ, ಕಮಲಾ ಮತ್ತು ವಿನುತಾ ನಡುವೆ ಹಲವಾರು ಸಾಮ್ಯತೆಗಳಿವೆ. ಒಂದು: ಬಡತನ, ಎರಡು: ವಯಸ್ಸು ಮೀರಿದ್ದರೂ ಮದುವೆಯಾಗದೇ ಉಳಿದದ್ದು, ಮೂರು: ಅವಿವಾಹಿತೆಯಾಗಿ ಸಮಾಜವನ್ನು ಎದುರಿಸುವ ಧೈರ್ಯ ಇಲ್ಲದ್ದು, ನಾಲ್ಕು: ತನ್ನ ಕೈ ಹಿಡಿಯುವವನು ಎಂಥವನೇ ಆಗಿರಲಿ ತನಗೊಬ್ಬ 'ಗಂಡ' ಸಿಗುತ್ತಾನೆಂಬ ತಹತಹ, ಐದು: ಈ ಎಲ್ಲ ಕಾರಣಗಳಿಂದಾಗಿ ಅವರೆಲ್ಲರೂ ಸರಣಿ ಹಂತಕ ಮೋಹನ್ ಕುಮಾರ್ ಎಂಬ ಪಿಶಾಚಿಯ ಕುತಂತ್ರಕ್ಕೆ ಬಲಿಯಾಗಿ ತಮ್ಮ ಪ್ರಾಣವನ್ನೇ ಕಳೆದುಕೊಂಡಿದ್ದು...


ಈ ಐವರು ಮಹಿಳೆಯರಲ್ಲದೆ ಕುಮಾರನಿಗೆ ಬಲಿಯಾದ ಇತರೆ ಅಮಾಯಕ ಹೆಣ್ಣುಮಕ್ಕಳ ಬದುಕು, ಆಶೆ, ಕಷ್ಟ, ನೋವು, ಅಂತ್ಯ ಎಲ್ಲವೂ ಒಂದೇ ತೆರನಾದದ್ದು.

ಭಾರತ ಸಮಾಜದಲ್ಲಿ ಇಂದಿಗೂ ಹೆಣ್ಣು ಮಕ್ಕಳಿಗೆ ಮದುವೆ ಮಾಡಿಸುವ ಮೂಲಕ ಅವರನ್ನು 'ದಡ ಸೇರಿಸುವುದು', 'ಕೈ ತೊಳೆದುಕೊಳ್ಳುವುದು', 'ಖರ್ಚು ಮಾಡಿಕೊಳ್ಳುವುದು.', 'ಜವಾಬ್ದಾರಿ ಪೂರೈಸುವುದು' ತರಹದ ಧೋರಣೆಗಳೇ ಮುಖ್ಯವಾಗಿವೆ. ಆ ಧೋರಣೆ ತಂದೆ ತಾಯಿಯ ಕಲ್ಪನೆಯಲ್ಲಿ ಮಾತ್ರವಲ್ಲ, ಸ್ವತಃ ಹೆಣ್ಣುಮಕ್ಕಳ ಮನಸ್ಸಿನಲ್ಲೂ ಆಳವಾಗಿ ಬೇರುಬಿಟ್ಟಿದೆ. ಮದುವೆ, ಮಾಂಗಲ್ಯ, ಪತಿದೇವ, ಗೃಹಸ್ಥಾಶ್ರಮ.... ಇತ್ಯಾದಿಗಳಿಲ್ಲದಿದ್ದರೆ ಓರ್ವ ಹೆಣ್ಣುಮಗಳ ತಂದೆ ತಾಯಿ ತಮ್ಮ ಕರ್ತವ್ಯದಲ್ಲಿ ವಿಫಲರಾಗಿದ್ದಾರೆಂದೂ, ಸ್ವತಃ ಆ ಹೆಣ್ಣುಮಗಳು ಬದುಕೆಂಬ ಪರೀಕ್ಷೆಯಲ್ಲಿ ಸೋತಿದ್ದಾಳೆಂದೂ ಜರಿಯಲಾಗುತ್ತದೆ. ಈ ಭಾವನೆ ಎಷ್ಟು ಪ್ರಬಲವಾಗಿದೆಯೋ ಅಷ್ಟೇ ಪ್ರಬಲವಾಗಿರುವುದು ಮನುಷ್ಯನ ಜೀವನ ಸಂಗಾತಿಯ ಬಯಕೆ ಮತ್ತು ನಿಸರ್ಗ ಸಹಜ ಮಾನಸಿಕ ಹಾಗೂ ದೈಹಿಕ ಹಂಬಲಗಳು.

ಕೇವಲ ಸಾಮಾಜಿಕ ಒತ್ತಡವಿದ್ದರೆ ಅದನ್ನು ಎದುರಿಸಿ ನಿಲ್ಲಬಹುದು. ಬರೀ ವೈಯಕ್ತಿಕ ಆಶೆಗಳಾಗಿದ್ದರೆ ಅದನ್ನೂ ಮೀರಿ ಬದುಕಬಹುದು. ಆದರೆ ಅವೆರಡೂ ಜೊತೆಗೂಡಿದರೆ ಸಾಮಾನ್ಯ ವಿವೇಕ ಕೂಡ ಹೇಗೆ ಕೈ ಕೊಡುತ್ತದೆ ಎಂಬುದನ್ನು ಮೋಹನ್ ಕುಮಾರನಿಗೆ ಬಲಿಯಾದ ಮಹಿಳೆಯರ ಕತೆಗಳೇ ಹೇಳುತ್ತಿವೆ.

ಆದ್ದರಿಂದ ಆ ಮಹಿಳೆಯರೆಲ್ಲರೂ ಬರೀ ಮೋಹನ್ ಕುಮಾರ್ ಎಂಬ ಕೀಚಕನಿಗೆ ಬಲಿಯಾಗಲಿಲ್ಲ, ಬದಲಾಗಿ ಭಾರತ ಸಮಾಜ ಹೆಣ್ಣುಮಕ್ಕಳನ್ನು "ಕೈ ಸಾಗಿಸಿ ಬಿಡುವ" ಸರಕುಗಳೆಂದು ಭಾವಿಸುವುದಕ್ಕೂ, ಮದುವೆ ಆಗದಿರುವ ಹೆಣ್ಣುಮಕ್ಕಳು ಸಂಸಾರಕ್ಕೆ ಒಂದು ಕಳಂಕ ಎಂದು ಪರಿಗಣಿಸುವುದಕ್ಕೂ, ಗಂಡನೆಂಬ ಆಸಾಮಿ ಇಲ್ಲದಿದ್ದರೆ ಬದುಕು ನಿರರ್ಥಕ ಎಂಬ ಕಲ್ಪನೆಯನ್ನು ಹೆಣ್ಣುಮಕ್ಕಳಲ್ಲಿ ಸಮಾಜ ಆಳವಾಗಿ ಬಿತ್ತಿರುವುದಕ್ಕೂ, ಅವರೆಲ್ಲ ಬಲಿಯಾದರು ಎಂದೇ ಅರ್ಥೈಸಬೇಕಿದೆ.

ಮೋಹನ್ ಕುಮಾರ್ ಎಂಬ ನರಹಂತಕನಿಗೆ ಬಲಿಯಾದ ಮಹಿಳೆಯರ ಕತೆಯಲ್ಲಿ ಹಿಂದೂತ್ವ ಸಂಘಟನೆಗಳ ಸಾಮಾಜಿಕ ಪಾತ್ರವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕಿದೆ. ಮೋಹನ್‌ಕುಮಾರನನ್ನು ಪೊಲೀಸರು ಬಂಧಿಸುವ ಕೇವಲ ಎರಡು ವಾರಗಳ ಮುನ್ನ ಹಿಂದೂ ಜನಜಾಗೃತಿ ಸಮಿತಿ ಎಂಬ ಸಂಘಟನೆ ಮಂಗಳೂರಿನಲ್ಲಿ ಜನ್ಮ ಪಡೆದು ಕರ್ನಾಟಕದಲ್ಲಿ 30,000 ಮಹಿಳೆಯರು ಮತ್ತು ಕರಾವಳಿಯಲ್ಲೇ 3,000 ಯುವತಿಯರು ನಾಪತ್ತೆಯಾಗಿದ್ದಾರೆಂದೂ, ಅವರೆಲ್ಲ ಯಾವುದೋ ಮುಸಲ್ಮಾನರ ಸಂಘಟನೆ ನಡೆಸುತ್ತಿರುವ 'ಲವ್ ಜಿಹಾದ್' ಎಂಬ ಕಾರ್ಯತಂತ್ರಕ್ಕೆ ಬಲಿಯಾಗಿ, ಮತಾಂತರಗೊಂಡು, ಭಯೋತ್ಪಾದಕರಾಗಿ ರೂಪುಗೊಳ್ಳುತ್ತಿದ್ದಾರೆಂದೂ ಆರೋಪಿಸಿತ್ತು. ಅಷ್ಟೇ ಅಲ್ಲ, 'ಲವ್ ಜಿಹಾದ್'ನಿಂದಾಗಿ ಹಿಂದೂ ಧರ್ಮವೇ ಅಪಾಯದಲ್ಲಿದೆ ಎಂದು ಬಾಯಿಬಡಿದುಕೊಂಡಿತ್ತು.



ಸಾಮಾನ್ಯವಾಗಿ ಹಿಂದೂ ಜನಜಾಗೃತಿ ಸಮಿತಿಯಂತೆ ಇದ್ದಕ್ಕಿದ್ದಂತೆ ಜನ್ಮ ತಾಳುವ ಸಂಘಟನೆಗಳನ್ನು 'ಲೆಟರ್ ಹೆಡ್' ಸಂಘಟನೆಗಳೆಂದು ಪರಿಗಣಿಸಲಾಗುತ್ತದೆ. ಅದರರ್ಥ ಅವುಗಳಿಗೆ ಹಿಂದುಮುಂದು, ತಂದೆ ತಾಯಿ ಇಲ್ಲ ಎಂಬುದು. ಆದರೆ ಹಿಂದೂ ಜನಜಾಗೃತಿ ಸಮಿತಿಯಂತಹ ಸಂಘಟನೆಗಳಿಗೆ ಹಿಂದುಮುಂದು, ತಂದೆತಾಯಿ ಎಲ್ಲ ಇರುತ್ತದೆ. ಯಾಕೆಂದರೆ ಅವುಗಳ ಹಿಂದೆ ಹಿಂದೂತ್ವ ಸಿದ್ಧಾಂತ, ಮುಂದೆ ಅಲ್ಪಸಂಖ್ಯಾತರ ದಮನದ ಗುರಿಗಳಿದ್ದು, ಅವುಗಳ ತಂದೆ ಮತ್ತು ತಾಯಿ ಎರಡೂ ಆರೆಸ್ಸೆಸ್ ಎಂಬ ಕೋಮುವಾದಿ ಸಂಘಟನೆಯೇ ಆಗಿರುತ್ತದೆ. ಆಧುನಿಕ ವೈಜ್ಞಾನಿಕ ಪರಿಭಾಷೆಯನ್ನು ಉಪಯೋಗಿಸಿ ಇದನ್ನು **'cloning'** ಎಂದು ಕರೆಯಬಹುದು.



ಆರೆಸ್ಸೆಸ್‌ನ ಕ್ಲೋನ್ ಆದ ಹಿಂದೂ ಜನಜಾಗೃತಿ ಸಮಿತಿಯವರಿಗೆ ಯುವತಿಯರ ನಾಪತ್ತೆ ಹಿಂದೆ 'ಲವ್ ಜಿಹಾದ್' ಎಂಬ ಕಪೋಲಕಲ್ಪಿತ ಭೂತ ಕಾಣಿಸುತ್ತಿತ್ತೇ ಹೊರತು, ವಾಸ್ತವದಲ್ಲಿ ಹಿಂದೂ ಸಮಾಜದಲ್ಲಿ ಅವಿವಾಹಿತ ಹೆಣ್ಣುಮಕ್ಕಳ ಬಗ್ಗೆ ಇರುವ ಸಾಮಾಜಿಕ ಪೂರ್ವಾಗ್ರಹಗಳು ಕಾಣಿಸಲೇ ಇಲ್ಲ. 'ಲವ್ ಜಿಹಾದ್' ಎಂಬ ಪರಿಕಲ್ಪನೆಯನ್ನು ಸ್ವತಃ ಹುಟ್ಟುಹಾಕಿದ ಸಂಘ ಪರಿವಾರ, ಆ ಕಾರ್ಯಾಚರಣೆಯ ಮೂಲಕ ಮುಸಲ್ಮಾನ ಯುವಕರಿಂದ ಹಿಂದೂ ಮಹಿಳೆಯರಿಗೆ ಅಪಾಯ ಕಾದಿದೆ ಎಂಬ ಆತಂಕವನ್ನು ಮೂಡಿಸಲು ಪ್ರಯತ್ನಿಸಿತೇ ಹೊರತು, ಸಂಘ ಪರಿವಾರ ಆರಾಧಿಸುವ ಮನುಶಾಸ್ತ್ರ ಎಂಬ ಕೀಳುಮಟ್ಟದ ನೀತಿ ನಿಯಮಗಳಿಂದಾಗಿ ಹಿಂದೂ ಮಹಿಳೆಯರ ಮೇಲೆ ಎಂತಹ ಒತ್ತಡ ಸೃಷ್ಟಿಯಾಗಿದೆ ಎಂದರೆ ಅವರು ತಮ್ಮ ಪ್ರಾಣ ರಕ್ಷಣೆಯನ್ನೂ ಲೆಕ್ಕಿಸದೆ ಮೋಹನ್ ಕುಮಾರ್‌ನಂತಹ ವಂಚಕರಿಗೆ ಬಲಿಯಾಗುತ್ತಾರೆ ಎಂಬುದನ್ನು ಬೇಕೆಂದೇ ಮರೆಮಾಚಿತು.

ಹಿಂದೂತ್ವವಾದಿ ಸಂಘಟನೆಗಳಿಗೆ ನಾಪತ್ತೆಯಾಗಿದ್ದ ಮಹಿಳೆಯರ ಬಗ್ಗೆ ನಿಜವಾಗಲೂ ಕಿಂಚಿತ್ತಾದರೂ ಕಾಳಜಿ ಇದ್ದಿದ್ದೇ ಆದರೆ ಅವರು 'ಲವ್ ಜಿಹಾದ್' ಎಂಬ ಭ್ರಮೆಯ ಬಗ್ಗೆ ಹಾದಿರಂಪ ಬೀದಿರಂಪ ಮಾಡದೇ ಒಂದು ಸತ್ಯ ಶೋಧನೆಯನ್ನು ನಡೆಸುತ್ತಿದ್ದರು. ಹಾಗೆ ಮಾಡಿದ್ದರೆ, ಮುಸಲ್ಮಾನ ಪುಂಡರಿಗೆ ಹಣ ನೀಡಿ ಹಿಂದೂ ಹುಡುಗಿಯರನ್ನು ಲಪಟಾಯಿಸಲು ಪ್ರೇರಣೆ ನೀಡಲಾಗುತ್ತಿದೆ ಎಂದು ಬಾಯಿಬಡಿದುಕೊಳ್ಳದೆ, ಬಡತನದ ಬೇಗೆಯಲ್ಲಿ ನಶಿಸುತ್ತಿರುವ ತಮ್ಮ ಕನಸುಗಳನ್ನು ಕಾಪಾಡಿಕೊಳ್ಳಲು ಮತ್ತು ಹಿಂದೂ ಸಮಾಜದ ಕಟ್ಟುಪಾಡುಗಳಾದ ಜಾತಿ, ವರದಕ್ಷಿಣೆದಂತಹ ನೀಚ ಪದ್ಧತಿಗಳಿಗೆ ಗುರಿಯಾಗಿ ಹೇಗೆ ಹಿಂದೂ ಯುವತಿಯರು ಮೋಹನ್ ಕುಮಾರ್‌ನಂತಹ ವಂಚಕರಿಗೆ ಬಲಿಯಾಗುತ್ತಿದ್ದಾರೆ ಎಂದು ಅರ್ಥವಾಗುತ್ತಿತ್ತು.

ಆದರೆ ಕಲ್ಪಿತ ಶತ್ರುಗಳನ್ನು, ಊಹಾಪೋಹ ಕತೆಗಳನ್ನು, ಸುಳ್ಳು ಸುದ್ದಿಗಳನ್ನೇ ತನ್ನ ಬಂಡವಾಳ ಮಾಡಿಕೊಂಡಿರುವ, ವಾಸ್ತವ ಸ್ಥಿತಿಯನ್ನು ಸದಾ ನಿರ್ಲಕ್ಷಿಸುವ ಹಿಂದೂತ್ವವಾದಿಗಳಿಗೆ ಸುಜಾತಾ, ಲೀಲಾವತಿ, ಕಮಲಾ ಮತ್ತು ವಿನುತಾಳಂತಹ ಬಡ ಹೆಣ್ಣುಮಕ್ಕಳ ದುರಂತ ಬದುಕುಗಳು ಎಂದಿಗೂ ಅರ್ಥವಾಗುವುದಿಲ್ಲ.

'ಲವ್ ಜಿಹಾದ್' ಎಂಬುದು ಕೇವಲ ಕಲ್ಪನೆ ಎಂಬುದೀಗ ಸ್ಪಷ್ಟವಾಗಿದೆ. ಹಾಗೆಯೇ ಮನುಶಾಸ್ತ್ರ ಪ್ರೇರಿತ ಸಿದ್ಧಾಂತದಿಂದಾಗಿ ಹಿಂದೂ ಸಮಾಜದಲ್ಲೇ ಹಿಂದೂ ಯುವತಿಯರ ಮೇಲೆ ಶತಶತಮಾನಗಳಿಂದ ನಡೆಯುತ್ತಾ ಬಂದಿರುವ ಆಘಾತಕಾರಿ ದೌರ್ಜನ್ಯವೂ ಕರಾವಳಿಯ ●

▶▶▶2

ಆಂದೋಲನದ ನಿಲುವು ಎಂಬುದು ಮತ್ತು ಅಂಥ ಪ್ರಯತ್ನಗಳಿಗೆ ಅವರು ಬೆಂಬಲಕ್ಕೆ ನಿಂತಿದ್ದು ನಿಜವಾದರೂ ಅದಕ್ಕೆ ಹೋರಾಟ ಮಾಡಿದ್ದು ಅಂಬೇಡ್ಕರ್ ನೇತೃತ್ವದ ದಲಿತ ಚಳವಳಿ. ಅದೇನೇ ಇರಲಿ, ಇಂದು ಜಾಗತೀಕರಣದ ಕಾಲಘಟ್ಟದಲ್ಲಿ ಮೀಸಲಾತಿ ನೀತಿಯೇ ಅಪ್ರಸ್ತುತವಾಗುವಂತಹ ಸಂದರ್ಭ ಸೃಷ್ಟಿಯಾಗುತ್ತಿದೆ. ಉದಾರೀಕರಣ ದಲಿತರಿಗಿದ್ದ ಅವಕಾಶಗಳನ್ನೇ ಕಸಿದುಕೊಳ್ಳುತ್ತಿದೆ.. ಹೀಗಿರುವಾಗ ತನ್ನ 75ನೇ ವರ್ಷದಲ್ಲಿ ಒಂದು ಸಮಾಜವಾದಿ ಆಂದೋಲನ ಯೋಚಿಸಬೇಕಿದ್ದು ತಮ್ಮೆಲ್ಲಾ ಚಳವಳಿಗಳಿದ್ದಾಗ್ಯೂ ಹೇಗೆ ಮೀಸಲಾತಿಯೇ ನಿರರ್ಥಕವಾಗುವ ಸಂದರ್ಭ ಸೃಷ್ಟಿಯಾಯಿತು ಎಂಬ ಬಗ್ಗೆಯೇ ವಿನಃ ಮೀಸಲಾತಿಗೂ ತಾವೇ ಕಾರಣ ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುವುದಲ್ಲ.

ಸಮಾಜವಾದಿ ಆಂದೋಲನಕ್ಕೆ 75 ವರ್ಷ ತುಂಬಿರುವ ಈ ಹೊತ್ತಿನಲ್ಲಿ, ಕಮ್ಯುನಿಸ್ಟ್ ಚಳವಳಿಗೆ 85 ವರ್ಷಗಳು, ನಕ್ಸಲ್ ಚಳವಳಿಗೆ 41 ವರ್ಷಗಳೂ ತುಂಬಿವೆ. ಆದರೂ ಈ ಎಲ್ಲಾ ಚಳವಳಿಗಳ ಆಶಯಕ್ಕೆ ತದ್ವಿರುದ್ಧವಾಗಿಯೇ ಸರ್ಕಾರದ ನೀತಿಗಳು ಜಾರಿಯಾಗುತ್ತಿವೆ. ಸಮಾಜದಲ್ಲಿ ಹಿಂದೂತ್ವ ಫ್ಯಾಸಿಸಂ ಗಟ್ಟಿಯಾಗಿ ಬೆಳೆಯುತ್ತಿದೆ. ಆ ಸಭೆಯಲ್ಲಿ ಹಿರಿಯರಾದ ಜಿ. ರಾಮಕೃಷ್ಣರು ಹೇಳಿದಂತೆ "ಸಂಘಪರಿವಾರದ ಶಕ್ತಿಗಳು ತಮ್ಮ ವಿಧ್ವಂಸಕಾರಿ ಕೃತ್ಯವನ್ನು ಎಸಗಲು ಎಲ್ಲರೊಂದಿಗೆ ಒಗ್ಗೂಡುತ್ತಾರೆ. ಆದರೆ ಒಂದೇ ಆಶಯಗಳನ್ನು ಹೊಂದಿರುವ ಸಮಾಜವಾದಿಗಳು ಮತ್ತು ಮಾರ್ಕ್ಸ್‌ವಾದಿಗಳು ಒಗ್ಗೂಡುತ್ತಿಲ್ಲ" ಆ ರೀತಿಯ ಒಗ್ಗಟ್ಟು ಮೂಡಿ ಬರದೇ ಇರಲು ಎಲ್ಲಾ ಚಳವಳಿಗಳ ಸಂಕುಚಿತವಾದವೂ ಕಾರಣ. ಅದಕ್ಕೆ ಸಮಾಜವಾದಿ ಆಂದೋಲನವೂ ಹೊರತಲ್ಲ. 1975ರಲ್ಲಿ ತುರ್ತು ಪರಿಸ್ಥಿತಿಯ ಸಮಯದಲ್ಲಿ "ಆರೆಸ್ಸೆಸ್ಸನ್ನು ಫ್ಯಾಸಿಸ್ಟ್‌ನ್ನುವುದಾದರೆ ನಾನೂ ಫ್ಯಾಸಿಸ್ಟೇ" ಎಂದು ಹೇಳುತ್ತಾ ಸಾವಿನಂಚಿನಲ್ಲಿದ್ದ ಹಿಂದೂತ್ವ ಫ್ಯಾಸಿಸಮ್ಮಿಗೆ ಹೊಸ ಜೀವ ಕೊಟ್ಟಿದ್ದು ಜಯಪ್ರಕಾಶ ನಾರಾಯಣರೇ! ಅದೇ ರೀತಿ ದೇಶ ಮಟ್ಟದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಬಿಜೆಪಿಗೆ ರಾಜ್ಯಾಧಿಕಾರ ತಂದುಕೊಡುವಂತೆ ಮಾಡಿದ್ದರಲ್ಲೂ 1934ರ ಮೂಲದ ಸಮಾಜವಾದಿಗಳ ಕೊಡುಗೆಯೇ ನಿರ್ಣಾಯಕವಾದದ್ದು. ಇವೆಲ್ಲದರ ಬಗ್ಗೆ 75ರ ಇಳಿಹೊತ್ತಿನಲ್ಲಾದರೂ ಒಂದು ಆತ್ಮವಿಮರ್ಶೆಯ ಅಗತ್ಯವಿತ್ತು.

ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲಾ ಚಳವಳಿಗಳು ಗಮನಿಸಬೇಕಾದ ಸಂಗತಿಯೇನೆಂದರೆ 1954ರಲ್ಲಿ ಜಯಪ್ರಕಾಶರು ನೆಹರೂರವರಿಗೆ ನೀಡಿದ 14 ಅಂಶಗಳ ಕಾರ್ಯಕ್ರಮದ ಮಾರ್ಗದರ್ಶನದಲ್ಲಿ ಇಂದು ಈ ದೇಶ ನಡೆಯುತ್ತಿಲ್ಲ. ಕಮ್ಯುನಿಷ್ಟರ ಮಾರ್ಗದಲ್ಲೂ ನಡೆಯುತ್ತಿಲ್ಲ. ಸಂವಿಧಾನದಲ್ಲಿ ಅಂಬೇಡ್ಕರ್ ನೀಡಿದ ನಿರ್ದೇಶನ ತತ್ವದ ಆಧಾರದಲ್ಲೂ ನಡೆಯುತ್ತಿಲ್ಲ. ಅದು ಅಮೆರಿಕ ಹೇಳಿದ ರೀತಿಯಲ್ಲಿ ಬಹುರಾಷ್ಟ್ರೀಯ ಕಂಪನಿಗಳು ತೋರಿಸಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿದೆ. ಜನರನ್ನು ಮತ್ತು ದೇಶವನ್ನು ಮತ್ತೊಮ್ಮೆ ವಸಾಹತೀಕರಣಕ್ಕೆ, ಬ್ರಾಹ್ಮಣ್ಯದ ದಾಸ್ಯಕ್ಕೆ ಗುರಿ ಮಾಡುತ್ತಿದ್ದೆ.

ಒಂದು ಚಳವಳಿ ತನ್ನ ಆತ್ಮಾವಲೋಕನ ಮಾಡಿಕೊಳ್ಳುವಾಗ ತನ್ನ ಸಾಧನೆಯನ್ನೂ ಮನನ ಮಾಡಿಕೊಳ್ಳಬೇಕಾದದ್ದು ಅಗತ್ಯವೇ. ಏಕೆಂದರೆ ಒಂದು ಚಳವಳಿ ತನ್ನ ಸಕಾರಾತ್ಮಕ ಶಕ್ತಿಯನ್ನು ಸದೃಢಗೊಳಿಸಿಕೊಳ್ಳುತ್ತಲೇ ತನ್ನ ಬಲಹೀನತೆಯನ್ನು ಹೋಗಲಾಡಿಸಿಕೊಳ್ಳಲು ಶ್ರಮಿಸಬೇಕು. ಆದರೆ ಎಲ್ಲೆಡೆ ಸಮಾಜವಾದಿ ಆಂದೋಲನಗಳನ್ನೂ ಒಳಗೊಂಡಂತೆ ಎಲ್ಲಾ ಬಗೆಯ ಚಳವಳಿಗಳು ಕಸುವನ್ನು ಕಳೆದುಕೊಳ್ಳುತ್ತಿದ್ದರೂ, ಸಮಾಜವಾದಿ ವಿರೋಧೀ ಶಕ್ತಿಗಳು ಎಷ್ಟೇ ತಾತ್ಕಾಲಿಕ ಮತ್ತು ಸಾಪೇಕ್ಷ ಜಯವನ್ನು ಪಡೆದುಕೊಳ್ಳುತ್ತಿದ್ದರೂ ಅದನ್ನು ಪರಿಗಣಿಸದೇ ತಮ್ಮದು "ಗೆದ್ದ ಆಂದೋಲನ"ವೆಂದು ಬಣ್ಣಿಸಿಕೊಳ್ಳುವುದು ಆ ಚಳವಳಿಯ ಸ್ಥಗಿತತೆಯನ್ನು ಅರ್ಥಾತ್ ವೃದ್ಧಾಪ್ಯವನ್ನು ಸೂಚಿಸುತ್ತದೆ.

ಆದರೆ ಅಂದು ಸಮಾಜವಾದಿ ಆಂದೋಲನದ ಹಲವು ಹಿರಿಯರು ಮೇಲೆ ಹೇಳಿದ ಹಲವು ಸಮಸ್ಯೆಗಳನ್ನು ಗುರುತಿಸಿ ಹೊಸ "ಸಮಾಜವಾದಿ ಆಂದೋಲನ"ದ ಅಗತ್ಯದ ಬಗೆಗೂ ಮಾತಾಡಿದ್ದು ವರದಿಯಾಗಿದೆ. ಹಾಗೊಂದು ವೇಳೆ ಹೊಸ ಪ್ರಸ್ಥಾನಕ್ಕೆ ನಾವು ಸಿದ್ಧವಾಗಿರುವ ಪಕ್ಷದಲ್ಲಿ ನಮ್ಮ ಮಿತಿ ಮತ್ತು ಶಕ್ತಿಗಳ ಬಗ್ಗೆ ಮುಲಾಜಿಲ್ಲದ ಮೌಲ್ಯಮಾಪನ ಮಾಡಿಕೊಳ್ಳುವುದು ಮತ್ತು ಇತರ ಸಮಾನ ಆಶಯಗಳುಳ್ಳ ಶಕ್ತಿಗಳ ಬಗ್ಗೆ ನಿಷ್ಪಕ್ಷಪಾತಿ ನಿಲುವುಗಳನ್ನು ಹೊಂದುವುದು ಅಗತ್ಯವಾಗುತ್ತದೆ. ಆಗ ಯಾವುದೇ ಚಳವಳಿಗೆ 75ರಲ್ಲೂ ತಾರುಣ್ಯ ಮರುಕಳಿಸುತ್ತದೆ.

ಅಂದಹಾಗೆ ಇದು ಕೇವಲ 1934ರ ಮೂಲವನ್ನು ಹೊಂದಿರುವ ಸಮಾಜವಾದಿಗಳ ಬಗೆಗೆ ಮಾತ್ರ ಆಡಬೇಕಾದ ಮಾತಲ್ಲ, ಅವು ಗಾಂಧೀವಾದಿ, ಲೋಹಿಯಾವಾದಿ, ಮಾರ್ಕ್ಸ್‌ವಾದಿ ಮತ್ತು ಮಾವೋವಾದಿಗಳಂಥ ಎಲ್ಲಾ ಚಳವಳಿಗಳಿಗೂ ಅನ್ವಯಿಸಬೇಕಾದ ಮಾನದಂಡವೇ ಆಗಿರಬೇಕೆಂಬುದರಲ್ಲಿ ಎರಡು ಮಾತಿಲ್ಲ. ●

ಏರ್‌ಪೋರ್ಟ್: ಬಳ್ಳಾರಿ ರೆಡ್ಡಿಗಳ ಕಳ್ಳಾಟ

ವಿಮಾನ ನಿಲ್ದಾಣದ ಹೆಸರಲ್ಲಿ ನಡೆಯುತ್ತಿರುವ ಭೂಗಳ್ಳತನ ಪ್ರಕರಣದ ವಿಚಾರಣೆ ಅಕ್ಟೋಬರ್ 31 ರಂದು ಬಳ್ಳಾರಿ ನ್ಯಾಯಾಲಯದಲ್ಲಿ ನಡೆಯಲಿದೆ. ರೈತರು ಎತ್ತಿರುವ ಪ್ರಶ್ನೆಗಳಿಗೆ ಅಂದು ಮೂವರು ಕಳ್ಳ ಸಚಿವರಾದ ಜನಾರ್ದನ ರೆಡ್ಡಿ, ಕರುಣಾಕರರೆಡ್ಡಿ ಮತ್ತು ಶ್ರೀರಾಮುಲುಗಳು ಅದೇನು ಉತ್ತರಿಸಿ ಪಾರಾಗುತ್ತಾರೋ ಎಂದು ಜನ ಕಾದಿದ್ದಾರೆ. ಅಲ್ಲದೇ ಈ ಹೋರಾಟದಲ್ಲಿ ಕೋರ್ಟು ತೆಗೆದುಕೊಳ್ಳುವ ತೀರ್ಮಾನವೂ ಮಹತ್ವದ್ದಾಗಿದೆ.

ಈಗಾಗಲೇ ಭೂಸ್ವಾಧೀನಕ್ಕಾಗಿ ಗೆಜೆಟ್ ನೋಟಿಫಿಕೇಷನ್ ಹೊರಡುವಂತೆ ಮಾಡಿರುವ ಧೂರ್ತ ರೆಡ್ಡಿ-ರಾಮುಲುಗಳು ತಮ್ಮ ಚೇಲಾಗಳನ್ನು ರೈತರೆಂದು ಬಿಂಬಿಸಲು ಯತ್ನಿಸುತ್ತಿದ್ದಾರೆ. ಚಾಗನೂರು, ಸಿರಿವಾರ, ತೆಗ್ಗಿನ ಬೂದಿಹಾಳ ಗ್ರಾಮಗಳ ಶೇ. 15-20ರಷ್ಟು ರೈತರು ಮಾತ್ರ ಭೂಮಿ ಮಾರಲು ಒಪ್ಪಿದ್ದಾರೆ. ಇಂತಹ ಕೆಲವೇ ರೈತರನ್ನು ಮುಂದಿಟ್ಟುಕೊಂಡು, ಅವರ ಅಭಿಪ್ರಾಯವನ್ನೇ ಸರ್ವ ರೈತರ ಅಭಿಪ್ರಾಯ ಎಂಬಂತೆ ಬಿಂಬಿಸುವ ಪ್ರಯತ್ನ ನಡೆದಿದೆ. ಅಕ್ಟೋಬರ್ 14 ರಂದು ವಿಶೇಷ ಭೂಸ್ವಾಧೀನ ಅಧಿಕಾರಿಗಳು, ತಕರಾರು ಅರ್ಜಿ ಸಲ್ಲಿಸಿದ ರೈತರ ಸಭೆ ಕರೆದಿದ್ದರು. ಆದರೆ ಯಾವ ತಕರಾರನ್ನೂ ಸಲ್ಲಿಸದ, ಭೂಮಾರಾಟಕ್ಕೆ ಸಿದ್ಧವಿರುವ ಕೆಲವೇ ಕೆಲವು ರೈತರನ್ನು ಈ ಸಭೆಗೆ ನುಗ್ಗಿಸಿದ ರೆಡ್ಡಿಗಳು, ಜೊತೆಗೊಂದಿಷ್ಟು ಗೂಂಡಾಗಳನ್ನು ಕಳಿಸಿದ್ದರು. ಸಭೆ ಹೊಕ್ಕ ಈ ಗುಂಪು ಅಂದಿನ ಇಡೀ ಕಲಾಪವನ್ನೇ ಹಾಳು ಮಾಡಲು ನೋಡಿತು. ಹಾಗೆ ನೋಡಿದರೆ ತಕರಾರು ಅರ್ಜಿ ಸಲ್ಲಿಸದವರಿಗೆ ಈ ಸಭೆಗೆ ಹಾಜರಾಗುವ ಅವಕಾಶವೇ ಇಲ್ಲ. ಆದರೆ ಹುಂಬ ರೆಡ್ಡಿಗಳ ದರ್ಬಾರಿನಲ್ಲಿ ಇಂಥದ್ದೆಲ್ಲ ಮಾಮೂಲು. ಹೀಗೆ ಅಕ್ರಮವಾಗಿ ನುಗ್ಗಿದ ರೆಡ್ಡಿ ಗ್ಯಾಂಗ್ ಮತ್ತು ನಿಜವಾದ ರೈತರ ಮಧ್ಯೆ ವಾದವಿವಾದ ನಡೆಯಿತು. ಕೊನೆಗೆ ಗಲಾಟೆಕೋರರನ್ನು ಪೊಲೀಸರ ನೆರವಿನಿಂದ ಹೊರಹಾಕಬೇಕಾಯಿತು.



ನೀರಾವರಿ ಭೂಮಿ ಖುಷ್ಕಿಯಾಯ್ತು!

ಎಂ.ಪಿ. ಚುನಾವಣೆ ವೇಳೆ ಸುಮ್ಮನಿದ್ದ ರೆಡ್ಡಿಗಳು ನಂತರ ಮುಖ್ಯಮಂತ್ರಿ ಯಡಿಯೂರಪ್ಪನ ತಲೆಸವರಿ ಮೇನಲ್ಲಿ ಏರ್‌ಪೋರ್ಟ್‌ನ ಗೆಜೆಟ್ ನೋಟಿಫಿಕೇಷನ್ ಹೊರಡಿಸಿಬಿಟ್ಟರು. ಅದರ ಹಿಂದೆಯೇ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ (AAI) ಸ್ಥಳ ಪರಿಶೀಲನೆ ನಡೆಸಿ ವಿಮಾನ ನಿಲ್ದಾಣಕ್ಕೆ 600 ಎಕರೆ ಸಾಕು ಎಂದಿತು. AAI ಸಮಿತಿ ತಾಳೂರು ರಸ್ತೆಯ ಬಲಭಾಗ, ಸೋಮನ ಸಮುದ್ರ, ಬಳ್ಳಾರಿ ಮೋಕಾ, ಸಂಗನಕಲ್ಲು ಮೋಕಾ ಪ್ರದೇಶಗಳ ಪರಿಶೀಲನೆ ನಡೆಸಿತು. ಇದರಲ್ಲಿ ಮೂರು ಪ್ರದೇಶಗಳನ್ನು ರಿಜೆಕ್ಟ್ ಮಾಡಿ, ಸಂಗನಕಲ್ಲು ಮೋಕಾ ಪ್ರದೇಶವೇ ಏರ್‌ಪೋರ್ಟ್‌ಗೆ ಸೂಕ್ತ ಎಂದಿತು. ಇಲ್ಲಿರುವ ವಿಚಿತ್ರ ನೋಡಿ: ರಿಜೆಕ್ಟ್ ಆದ ಮೂರು ಪ್ರದೇಶಗಳ ಪೈಕಿ ಎರಡನ್ನು ರಿಜೆಕ್ಟ್ ಮಾಡಿದ್ದು ಏಕೆ ಗೊತ್ತೆ? "ಅಲ್ಲಿ ಹಳ್ಳ, ಕಾಲುವೆ, ನದಿಗಳಿದ್ದು, ನೀರಾವರಿಯಿಂದ ಫಲವತ್ತಾದ ಭೂಮಿಯಿದೆ, ಅಂತಹ ಭೂಮಿಯನ್ನು ಏರ್‌ಪೋರ್ಟ್‌ಗೆಂದು ಸ್ವಾಧೀನ ಮಾಡಲಾಗದು..." ಎಂದು AAI ಸಮಿತಿ ಸತ್ಯವನ್ನೇ ಹೇಳುತ್ತದೆ. ಆದರೆ ಸಂಗನಕಲ್ಲು ಮೋಕಾ ಪ್ರದೇಶದಲ್ಲಿ ಅದು ಉಲ್ಟಾ ಹೊಡೆಯುತ್ತದೆ. ಇಲ್ಲೆಲ್ಲಾ ರೆಡ್ಡಿಗಳ ಕರಾಮತ್ತು ನಡೆದುಹೋಗಿದೆ. ಸಂಗನಕಲ್ಲು ಮೋಕಾ ಪ್ರದೇಶವನ್ನು ಒಣಭೂಮಿ ಎಂದು ಘೋಷಿಸಲಾಗಿದೆ. ಇಂತಹ ಹುಸಿಸುಳ್ಳನ್ನು ಸೇರಿಸಲು ಬಳಸಿರುವ ದಾಖಲೆ 60 ವರ್ಷಗಳ ಹಿಂದಿನದು. ಆದರೆ ಈಚಿನ 40 ವರ್ಷಗಳಿಂದ ಇಲ್ಲಿ ತುಂಗಭದ್ರೆ ಹರಿದು ಇಡೀ ಪ್ರದೇಶವನ್ನು ಸಮೃದ್ಧಗೊಳಿಸಿದ್ದಾಳೆ. ಈ ಭಾಗದಲ್ಲಿ ಬರುವ, ಈಗ ಭೂಸ್ವಾಧೀನಕ್ಕೆ ವಿರೋಧಿಸಿ ಹೋರಾಡುತ್ತಿರುವ ಚಾಗನೂರು, ಸಿರವಾರ, ತೆಗ್ಗಿನ 'ಬೂದಿಹಾಳಗಳಲ್ಲಿ ತುಂಗಭದ್ರೆ ಕಾಲುವೆಗಳು





ಹರಿದಿವೆ. ಜೊತೆಗೆ ಹಗರಿ ನದಿಯಿಂದಲೂ ನೀರೆತ್ತಿ ವ್ಯವಸಾಯ ಮಾಡುತ್ತಿದ್ದು ವರ್ಷಕ್ಕೆ ಮೂರು ಬೆಳೆ ಬೆಳೆಯಲಾಗುತ್ತಿದೆ.

60 ವರ್ಷಗಳ ಹಳೆ ದಾಖಲೆ ಹಿಡಿದು ಖುಷ್ಕಿ ಭೂಮಿ ಎಂದು ಘೋಷಿಸಿರುವುದರ ಹಿಂದೆ ಎರಡು ಕುತಂತ್ರಗಳು ಅಡಗಿವೆ. ಒಂದು ಏರ್‌ಪೋರ್ಟ್‌ಗೆ ಒಣಭೂಮಿ ಸ್ವಾಧೀನ ಮಾಡಿಕೊಳ್ಳುತ್ತಿದ್ದೇವೆ ಎಂಬ ಸುಳ್ಳನ್ನು ದಾಖಲೆ ಎಂಬಂತೆ ತೋರಿಸುವುದು. ಎರಡನೆಯದಾಗಿ, ಖುಷ್ಕಿ ಭೂಮಿ ಎಂದು ಘೋಷಿಸಿರುವುದರಿಂದ ಎಕರೆಗೆ 28 ಸಾವಿರ ಜುಜುಬಿ ಹಣ ನೀಡಿ ಕೈತೊಳೆದುಕೊಳ್ಳುವುದು! ಧಾರವಾಡದ ಕೆಐಡಿಬಿಐನವರು ಹಿಂದೆ ಮಾಡಿದ ಸಮೀಕ್ಷೆ ಪ್ರಕಾರ ಈ ಭೂಮಿ ಫಲವತ್ತಾಗಿದೆ. ಆದರೆ ಏರ್‌ಪೋರ್ಟು ಸಲುವಾಗಿ ಅದೀಗ ಖುಷ್ಕಿಯಾಗಿದೆ.

ಅಗತ್ಯಕ್ಕಿಂತ ಹೆಚ್ಚು ಭೂಮಿ

ಏರ್‌ಪೋರ್ಟ್ ಅಥಾರಿಟಿಯವರೇ 600 ಎಕರೆ ಭೂಮಿ ಸಾಕು ಎಂದಿದ್ದಾರೆ. ಆದರೆ ಸರ್ಕಾರದ ನೋಟಿಫಿಕೇಷನ್ ಪ್ರಕಾರ 1,213 ಎಕರೆ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವ ಪ್ರಸ್ತಾಪ ಇದೆ. ಈಗಿನ ಹುನ್ನಾರಗಳನ್ನು ನೋಡಿದರೆ ಎರಡು ಸಾವಿರ ಎಕರೆಗೂ ಅಧಿಕ ಭೂಮಿಯನ್ನು ಸ್ವಾಧೀನ ಮಾಡಲಾಗುತ್ತಿದೆ.

ಫಲವತ್ತಾದ ಭೂಮಿ ಕೊಡಲು ಸಿದ್ಧರಿಲ್ಲದ ರೈತರು ವಕೀಲ, ರೈತ ನಾಯಕ ಮಲ್ಲಿಕಾರ್ಜುನ ರೆಡ್ಡಿಯವರ ನೇತೃತ್ವದಲ್ಲಿ ಹೋರಾಟ ಮುಂದುವರೆಸಿದ್ದಾರೆ. ಅಕ್ಟೋಬರ್ 31 ರಂದು ಕೋರ್ಟು ಜನಪರ ತೀರ್ಪು ನೀಡುವ ಮೂಲಕ ರೈತರ ಪರ ನಿಲ್ಲುತ್ತದೋ? ●

ಹುಬ್ಬಳ್ಳಿ: ಹಳ್ಳ ಹಿಡಿಯಿತು ಕೆಎಂಸಿ ಶೂಟ್‌ಔಟ್ ಕೇಸ್

ಶೂಟ್ ಆಗಿದ್ದು ಖರೆ. ಗಾಯಗೊಂಡಿದ್ದು ಖರೆ. ತನಿಖೆ ನಡೆದಿದ್ದೂ ಖರೆ. ಆರೋಪಿಗಳೆಲ್ಲ ಖುಲಾಸೆಯಾಗಿದ್ದೂ ಖರೆ ಅಂದ್ರ ಖರೆ!

ಸುಮಾರು ಎರಡು ವರ್ಷಗಳ ಕಾಲ ಸುದೀರ್ಘ ತನಿಖೆ ನಡೆಸಿದ ಪೊಲೀಸರು, ಸಿಐಡಿಗಳು ಈಗ ಆರೋಪಿಗಳನ್ನೆಲ್ಲ ಖುಲಾಸೆಗೊಳಿಸಿ ದಿಲ್‌ಖುಷ್ ಆಗಿದ್ದಾರೆ. ಎಂದಿನಂತೆ ನೂರಾ ಒಂದನೇ ಸಲ ಮತ್ತೆ ಸಬೂಬು ನೀಡಿದ್ದಾರೆ: 'ಸಾಕ್ಷ್ಯಾಧಾರಗಳ ಕೊರತೆ!'

ಹೌದು ರಾಜ್ಯಾದ್ಯಂತ ದಿಗ್ಭ್ರಮೆ ಮೂಡಿಸಿದ್ದ ಹುಬ್ಬಳ್ಳಿ ಕೆಎಂಸಿ ಶೂಟ್‌ಔಟ್ ಪ್ರಕರಣದ ತನಿಖೆ 'ಶೂನ್ಯ ಸಂಪಾದನೆ' ಯೊಂದಿಗೆ ಮುಕ್ತಾಯಗೊಂಡಿದೆ. ಇದಕ್ಕೆ ಕಾರಣರಾದ ತನಿಖಾಧಿಕಾರಿಗಳ ಸಂಪಾದನೆಯು 7ರಿಂದ 8 ಡಿಜಿಟ್ ತಲುಪಿರುವ ಸಂಭವನೀಯತೆಗಳು ದಟ್ಟವಾಗಿ ಗೋಚರಿಸಲಾರಂಭಿಸಿವೆ. ಯಾಕೆಂದರೆ ಈ ಪ್ರಕರಣದ ಆರೋಪಿಗಳೆಲ್ಲ ಪ್ರಭಾವಿ ರಾಜಕಾರಣಿಗಳು ಇಲ್ಲವೇ ಅಂತವರ ಪರಮಚೇಲಗಳು. ರಾಜ್ಯ ಪೊಲೀಸರಿಂದ ಸಿಐಡಿಗೆ ಈ ಕೇಸು ವರ್ಗಾವಣೆಗೊಂಡ ಕೂಡಲೇ ತನಿಖಾಧಿಕಾರಿಯಾಗಿ ಸಿಐಡಿಯ ಡಿವೈಎಸ್ಪಿ ಸರ್ವೋತ್ತಮ ಪೈ ಎಂಟ್ರಿ ಕೊಟ್ಟ ತಕ್ಷಣವೇ ಆರೋಪಿಗಳೆಲ್ಲ ನಿರಾಳವಾಗಿಬಿಟ್ಟರು. ಯಾವಾಗಲೂ ಆರೋಪಿಗಳ ಇಚ್ಛೆಯಂತೆ ದಕ್ಷವಾಗಿ ಅಲ್ಲಲ್ಲ ಭಕ್ಷುಕನಾಗಿ ಕಾರ್ಯ ನಿರ್ವಹಿಸುವ ಟ್ರ್ಯಾಕ್ ರೆಕಾರ್ಡ್ ಹೊಂದಿರುವ ಸರ್ವೋತ್ತಮ ಸಾಹೇಬ ಈ ಪ್ರಕರಣವನ್ನೇ ಶೂಟ್‌ಡೌನ್ ಮಾಡಿ, 'ನೋ ಎವಿಡೆನ್ಸ್' ಎಂದು ತಿಪ್ಪೆ ಸಾರಿಸಿ, ಕೈ ತೊಳೆದುಕೊಂಡುಬಿಟ್ಟ. ಆರೋಪಿಗಳಾಗಿದ್ದ ಕಿಮ್ಸ್‌ನ ಮಾಜಿ ನಿರ್ದೇಶಕ ಡಾ.ಎಂ.ಜಿ. ಹಿರೇಮಠ, ವಿಶ್ವಪ್ರಕಾಶ ಉಳ್ಳಾಗಡ್ಡಿಮಠ, ಡಾ.ಹಲಗರಗಾ, ಶ್ಯಾಮ್ ಜಾಧವ, ವಿಜಯ ಕುಲಕರ್ಣಿ, ಬಂಗಾರೇಶ ಹಿರೇಮಠ ಇವರೆಲ್ಲ ನಿರ್ದೋಷಿಗಳಾಗಿ ಹೊರಹೊಮ್ಮಿದ್ದಾರೆ.






ಚಂದನರಾಣಿ

2007ರ ಶೂಟ್‌ಔಟ್

10-12-2007ರ ರಾತ್ರಿ ಸುಮಾರು 11-15ಕ್ಕೆ 'ರೋಗಿಯ ಸಂಬಂಧಿ' ಎಂದು ಎಂಟ್ರಿ ಮಾಡಿ ಕಿಮ್ಸ್ ಆವರಣದಲ್ಲಿನ ಡಾ. ಶಿವಾನಂದ ದೊಡ್ಡಮನಿ ನಿವಾಸಕ್ಕೆ ಬಂದ ವ್ಯಕ್ತಿಯೊಬ್ಬ ಡಾ. ದೊಡ್ಡಮನಿಯವರನ್ನು ಕೊಲ್ಲಲು ಯತ್ನಿಸಿದ್ದ. ಗುಂಡೇಟು ತಗುಲಿಯೂ ಆಕಸ್ಮಿಕವಾಗಿ ಬದುಕುಳಿದ ಡಾ. ದೊಡ್ಡಮನಿ.

ಈ ಕುರಿತು 'ಲಂಕೇಶ್' ಆಗಲೇ ಆರೋಪಿಗಳ ಸುಳಿವು ನೀಡುವ ತನಿಖಾವರದಿ ಬರೆದಿತ್ತು, ಮುಂದೆ ಜೂನ್ 18, 2008ರ ಸಂಚಿಕೆಯಲ್ಲಿ ಡಾ.ದೊಡ್ಡಮನಿ ಹಾಗೂ ಆತನ ಮೂರನೇ ಪತ್ನಿ ಚಂದನ ರಾಣಿಯನ್ನು ಕೂಡಾ ವಿಚಾರಣೆಗೊಳಪಡಿಸಿ ಎಂದು ಪತ್ರಿಕೆ ಹೇಳಿತ್ತು. ಆದರೆ ಅದಾಗಲೇ ಇಲ್ಲ. ಪ್ರಕರಣದ ಆರು ಆರೋಪಿಗಳಲ್ಲಿ ಡಾ. ಹಿರೇಮಠ ಒಬ್ಬರನ್ನು ಬಿಟ್ಟರೆ ಉಳಿದ ಐವರು ಕಾಂಗ್ರೆಸ್ಸಿನ ಪ್ರಭಾವಿ ಕುಳಗಳು. ಹಾಗೆಯೇ ಕಾಂಗ್ರೆಸ್ ಕಾರ್ಯಕರ್ತೆಯಾಗಿದ್ದ ಚಂದನ ರಾಣಿಗೆ ಇವರೆಲ್ಲರ ನಿಕಟ ಸಂಪರ್ಕವಿತ್ತು. ಈ ಕಾರಣಕ್ಕಾಗಿ ಡಾ.ದೊಡ್ಡಮನಿ ಮತ್ತು ಮೂರನೇ ಪತ್ನಿ ಚಂದನ ರಾಣಿ ನಡುವೆ ವೈಮನಸ್ಯ ಮೂಡಿತ್ತು ಎಂಬುದಿಲ್ಲಿ ಮುಖ್ಯ ಅಂಶವಾಗಿತ್ತು.

ಇನ್ನೊಂದು ದೃಷ್ಟಿಯಲ್ಲಿ ಡಾ.ಎಂ.ಜಿ. ಹಿರೇಮಠ ಮತ್ತು ಡಾ. ದೊಡ್ಡಮನಿ ನಡುವೆ ವೃತ್ತಿ ವೈಷಮ್ಯವಿತ್ತು. ಇಬ್ಬರು ಪರಸ್ಪರರ ಮೇಲೆ ಭ್ರಷ್ಟಾಚಾರದ ಆರೋಪ ಮಾಡಿ ಕಿತ್ತಾಡಿಕೊಂಡಿದ್ದರು. ಈ ಅಂಶ ಕೂಡಾ ತನಿಖೆಯಲ್ಲಿ ಪ್ರಮುಖವಾಗಬೇಕಿತ್ತು. ಆದರೆ ಆರಂಭಶೂರತ್ವ ತೋರಿದ ಪೊಲೀಸರು ಪ್ರಭಾವಿ ಆರೋಪಿಗಳನ್ನು 36 ದಿನಗಳ ಕಾಲ ನ್ಯಾಯಾಂಗ ಬಂಧನದಲ್ಲಿಡುವುದಕ್ಕೆ ತೆಗೆದುಕೊಂಡಿದ್ದು ಐದೂವರೆ ತಿಂಗಳು ಅವಧಿಯನ್ನು. 36 ದಿನಗಳ ನ್ಯಾಯಾಂಗ ಬಂಧನದ ನಂತರ ಜಾಮೀನಿನ ಮೇಲೆ ಹೊರಬಂದ ಆರೋಪಿಗಳಿಗೆ ಮತ್ತೆಲ್ಲೂ ತನಿಖಾ ಕಾರ್ಯಾಚರಣೆಯಲ್ಲಿ ಅಡ್ಡಿಯೇ ಆಗಲಿಲ್ಲ. ಆಗಿನ ಕಮೀಷನರ್ ನಾರಾಯಣ ನಡಮನಿ ಕೂಡ ಥೇಟು ಕಾಂಗ್ರೆಸ್ ಏಜೆಂಟನಂತೆ ವರ್ತಿಸಿದ್ದರು. ಕೊನೆಗೆ ಅಂತೂ ಪ್ರಕರಣ ಸಿಐಡಿಗೆ ಬಂತಾದರೂ, ತನಿಖಾಧಿಕಾರಿಯಾಗಿ ಡಿವೈಎಸ್ಪಿ ಸರ್ವೋತ್ತಮ ಪೈ ಬಂದಾಕ್ಷಣವೇ ತನಿಖೆ ಹಳ್ಳ ಹಿಡಿಯುವುದು ಗ್ಯಾರಂಟಿಯಾಗಿ ಹೋಗಿತ್ತು. ತಿಂಗಳು ಕಾಲ ಹುಬ್ಬಳ್ಳಿಯಲ್ಲಿ ಠಿಕಾಣಿ ಹೂಡಿದ ಪೈ 102 ಜನರ ವಿಚಾರಣೆ ನಡೆಸಿದನಾದರೂ, ಡಾ. ಶಿವಾನಂದ ದೊಡ್ಡಮನಿ ಆತನ ಮೂರನೇ ಪತ್ನಿ ಚಂದನ ರಾಣಿಯ ಸರಿಯಾದ ವಿಚಾರಣೆ ಮಾಡಲೇ ಇಲ್ಲ.



ಸಿಐಡಿ ಫೈಲ್‌ನ ಅಂತೆ-ಕಂತೆಗಳು

ಒಟ್ಟಾರೆ ತನಿಖೆ ಮೂರಾಬಟ್ಟೆಯಾಗಿದ್ದಕ್ಕೆ ಆಧಾರವಾಗಿ ನಿಂತಿವೆ ಸಿಐಡಿ ಫೈಲಿನ ಅಂತೆ-ಕಂತೆಗಳು. ಇಲ್ಲಿ ಗುಂಡೇಟು ತಿಂದಾತ, ಆರೋಪಿಗಳು ಎಲ್ಲರೂ 'ಸಹಕರಿಸಿ' ಕೇಸು ಮುಚ್ಚಿ ಹಾಕಿರುವಂತೆ ಕಾಣುತ್ತಿದೆ. "ಯಾರನ್ನೋ ಕೊಲ್ಲಲು ಬಂದಿದ್ದರು ಎನಿಸುತ್ತೆ, ಆಕಸ್ಮಿಕವಾಗಿ ನನಗೆ ಗುಂಡೇಟು ಬದ್ದಿದೆ" ಎಂಬ ಧಾಟಿಯಲ್ಲಿ ಡಾ.ಶಿವಾನಂದ ದೊಡ್ಡಮನಿಯೇ ಹೇಳಿ ಪ್ರಕರಣ ಮುಗಿಸಲು ನಾಂದಿ ಹಾಡಿಬಿಟ್ಟಿದ್ದ. ಡಾ.ದೊಡ್ಡಮನಿ ಮತ್ತು ಡಾ.ಹಿರೇಮಠರ ನಡುವಿನ ಔಷಧ ಖರೀದಿಯ ಭ್ರಷ್ಟಾಚಾರದ ಕುರಿತು ಸಿಐಡಿ ಗಮನವನ್ನೇ ಹರಿಸಿದಂತಿಲ್ಲ.

ಈಗ ಸಾಕ್ಷ್ಯಾಧಾರಗಳ ಕೊರತೆಯ ಕಾರಣ ನೀಡಿ ಕೇಸ್ ಖಲಾಸ್ ಮಾಡಲಾಗಿದೆ. ಹಾಗಿದ್ದರೆ ಗುಂಡು ಹಾರಿದ್ದು ಯಾತಕ್ಕಾಗಿ? ಯಾರನ್ನ ಕೊಲ್ಲಲು? ಗುಂಡು ಹಾರಿಸಿದವನ್ಯಾರು? ಎಂಬೀ ಪ್ರಶ್ನೆಗಳಿಗೆ ಪೊಲೀಸರು ಸಿಐಡಿ ಉತ್ತರಿಸಲೇಬೇಕಾಗಿದೆ. ಆರು ಆರೋಪಿಗಳು ನಿರ್ದೋಷಿಗಳೆಂದಾದರೆ, ನಿಜವಾದ ಆರೋಪಿಗಳ್ಯಾರು ಎಂಬುದನ್ನು ಈ ತನಿಖೆ ಬಹಿರಂಗಪಡಿಸಲಿಲ್ಲವೇಕೆ?

ಇಲ್ಲಿ ಎಲ್ಲ ಪಕ್ಷಗಳ ನೇತಾರರು ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳು ಸಹಕರಿಸಿದ್ದರಿಂದಲೇ ಒಬ್ಬನೆ ಒಬ್ಬನಿಗೂ ಶಿಕ್ಷೆಯಾಗದೇ ಕೇಸು ಅಂತ್ಯಗೊಂಡಿದೆ.

ಹಾಗಾದರೆ ಪೊಲೀಸರು, ಸಿಐಡಿ ಈ ಎರಡು ವರ್ಷ ಕಡಿದು ಗುಡ್ಡೆ ಹಾಕಿದ್ದೇನು?

● ಹುಬ್ಬಳ್ಳಿಯಾಂ



ವಿಶ್ವಪ್ರಕಾಶ

'ಸಾಕ್ಷ್ಯಾಧಾರಗಳ ಕೊರತೆ' ಇಲ್ಲಿ ಕಾಮನ್!

ಈ ಪ್ರಕರಣದ ಆರೋಪಿಯಾಗಿದ್ದ ಕಾಂಗ್ರೆಸ್ಸಿನ ವಿಶ್ವಪ್ರಕಾಶ ಉಳ್ಳಾಗಡ್ಡಿಮಠನ ಹೆಸರು 1983ರಲ್ಲಿ ಸಂಭವಿಸಿದ ಮುಂಬೈ ಸ್ಫೋಟದ ತನಿಖೆಯ ವೇಳೆ ಕೇಳಿಬಂದಿತ್ತು. ದಾವೂದ್ ಇಬ್ರಾಹಿಂ ಸಹಚರ ಮೆಮನ್‌ಗೆ ನಕಲಿ ಲೈಸೆನ್ಸ್‌ನ ರಿವಾಲ್ವರ್ ಮಾರಿದ ಆರೋಪ ಹೊತ್ತಿದ್ದ ಈ ಗನ್ ವ್ಯಾಪಾರಿ ಉಳ್ಳಾಗಡ್ಡಿಮಠ ಅಂದೂ ಪಾರಾಗಿದ್ದ... 'ಸಾಕ್ಷ್ಯಾಧಾರಗಳ ಕೊರತೆ'ಯ ಮಹಿಮೆಯಿಂದ! 1997-98ರಲ್ಲಿ ಎಚ್ಕೆ ಪಾಟೀಲರ ಹುಬ್ಬಳ್ಳಿಯ 'ವಿಶಾಲ ಕರ್ನಾಟಕ' ಕಚೇರಿಯಲ್ಲಿನ ಬಸವಣ್ಣನ ಭಾವಚಿತ್ರಕ್ಕೆ ಚಪ್ಪಲಿ ಹಾರ ಹಾಕಿದ್ದ ಮಾಜಿ ಮೇಯರ್, ಕಾಂಗ್ರೆಸ್ ನಾಯಕ ಅನಿಲ್‌ಕುಮಾರ್ ಪಾಟೀಲ್ ಕೂಡಾ ಸಿಐಡಿ ತನಿಖೆ ಎದುರಿಸಿ ನಿರ್ದೋಷಿಯಾಗಿ ಹೊರಬಂದಿದ್ದ. ಮತ್ತದೇ ರೀಸನ್ 'ಸಾಕ್ಷ್ಯಾಧಾರಗಳ ಕೊರತೆ'.... ಈಗಿನ ಶೂಟೌಟ್ ಪ್ರಕರಣದಲ್ಲಿ ಆರೋಪಿಗಳಾಗಿದ್ದವರೆಲ್ಲ ಪ್ರಭಾವಿಗಳು. ಹೀಗಾಗಿ ಮತ್ತದೇ ಭೂತ 'ಸಾಕ್ಷ್ಯಾಧಾರಗಳ ಕೊರತೆ'.... ●

ನೊಳಂಬ ಮಠದಲ್ಲಿ ವಿಚಿತ್ರ ಬಿಕ್ಕಟ್ಟು

ಕರ್ನಾಟಕದ ಲಿಂಗಾಯತರ ಪೈಕಿ ಸುಶಿಕ್ಷಿತರೂ, ಕಷ್ಟಜೀವಿಗಳೂ, …ಕೆಷ್ಟು ಜ್ಞಾನಿಗಳೂ ಆಗಿರುವ ನೊಳಂಬ ಲಿಂಗಾಯತರ …ರುಪೀಠವೀಗ ವಿಚಿತ್ರ ವಿವಾದದಲ್ಲಿ ಸಿಲುಕಿಕೊಂಡಿದೆ.

ನೊಳಂಬರ ಪ್ರಮುಖ ಮಠವಾದ ನಂದಿಗುಡಿ ಪೀಠದ …ಠಾಧೀಶರಾಗಿದ್ದ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು 2006ರ …ಸೆಂಬರ್‌ನಲ್ಲಿ ಕಣ್ಮರೆಯಾಗಿದ್ದರು. ಆದರೆ ಮಲೇಬೆನ್ನೂರು ಪೊಲೀಸರು …ರಿಗಾಗಿ ಹುಡುಕಲಾಗಿ ಹೊಸನಗರ ಬಳಿ ಬಾಡದ ಬಯಲು …ಮದಲ್ಲಿ ಅಚ್ಚುಕಟ್ಟಾಗಿ ಸಂಸಾರ ಮಾಡಿಕೊಂಡು ಬದುಕುತ್ತಿರುವುದು …ಗ ತಾನೇ ಪತ್ತೆಯಾಗಿದೆ. ಇವರ ಪತ್ನಿ ಗೀತಾ ಎಂಬಾಕೆ ಅದೇ …ದಿಗುಡಿಯಲ್ಲಿರುವ ಶ್ರೀಗುರು ಕರಿಬಸವೇಶ್ವರ …ದ್ಯಾಸಂಸ್ಥೆಯ ಬಿ.ಎಡ್. ಕಾಲೇಜಿನಲ್ಲಿ ಲೆಕ್ಚರರ್ …ದ್ದಾಕೆ. ಬ್ಯಾಡಗಿ ತಾಲ್ಲೂಕಿನ ಸೋಡಲಗಿ ಗ್ರಾಮದ …ಈಕೆ ಕೂಡಾ ನಂದೀಶ್ವರ ಸ್ವಾಮಿ ಮಠ ತ್ಯಜಿಸಿದ …ಮೂರನೇ ದಿನವೇ ಕೆಲಸಕ್ಕೆ ರಾಜೀನಾಮೆ ನೀಡಿ …ಪತ್ತೆಯಾಗಿದ್ದರು. ಆಗ ಇವೆರಡೂ ನಾಪತ್ತೆ …ಕರಣಗಳಿಗೆ ಅಷ್ಟು ಮಹತ್ವವನ್ನು ಯಾರೂ …ರಲಿಲ್ಲ. ಸ್ವಾಮೀಜಿಗಳು ಕಾಶಿ ಹಿಮಾಲಯದತ್ತ …ತ್ಯಾತ್ಮ ಯಾತ್ರೆ ಹೋಗಿದ್ದಾರೆಂದು ಭಕ್ತವೃಂದ …ವಿಸಿತ್ತು. ಇನ್ನು ಗೀತಾರ ರಾಜೀನಾಮೆ ವಿಚಾರವನ್ನು …ಮಿಯ ನಿರ್ಗಮನದೊಂದಿಗೆ ತಳುಕು ಹಾಕಿ …ನೋಡುವ ಸಂದರ್ಭ ಅವತ್ತು ಇರಲೇ ಇಲ್ಲ.


ನಂದೀಶ್ವರ

ಆದರೀಗ ಇವೆಲ್ಲಾ ಸ್ಪಷ್ಟವಾದ ಮೇಲೆ ನಂದಿಗುಡಿ ಮಠಕ್ಕೂ …ಳಂಬ ವೀರಶೈವ ಜನರಿಗೂ ಏಕಕಾಲದಲ್ಲಿ ಅನೇಕ ಇಕ್ಕಟ್ಟುಗಳು …ದುರಾಗಿಬಿಟ್ಟಿದೆ.

ಮಠ ಇದೆ, ಮಠಾಧೀಶರಿಲ್ಲ.

ಶಿವಮೊಗ್ಗ, ದಾವಣಗೆರೆ, ಹರಿಹರ, ಹಿರೇಕೆರೂರು, ಹಾವೇರಿ, …ರವಾಡ, ಚಿತ್ರದುರ್ಗ ಮುಂತಾದೆಡೆ ನೆಲೆಸಿರುವ ನೊಳಂಬ …ಗಾಯತರಿಗೆ ತೀರಾ ಇತ್ತೀಚಿನವರೆಗೂ ಹೇಳಿಕೊಳ್ಳಲಿಕ್ಕೆ ಬಲಿಷ್ಠ …ಬಹುದಾದ ಮಠ ಇರಲಿಲ್ಲ. ಸುತ್ತೂರು ಮಠ, ಮೂರು …ಬರ ಮಠ, ಮುರುಘಾಮಠ, ಸಿರಿಗೆರೆ ಮಠ ಮುಂತಾದವಕ್ಕೆ …ಹೋಲಿಸಿದರೆ ನೊಳಂಬರ ನಂದಿಗುಡಿ ಮಠ ಹಣಬಲ, ತೋಳ್ಬಲದಲ್ಲಿ …ಕೀಯ ಪ್ರಭಾವದಲ್ಲಿ ತೀರಾ ನಿಶ್ಶಕ್ತವಾಗಿತ್ತು. ಹೇಳಿಕೊಳ್ಳಲಿಕ್ಕೆ …ನದ ಯಲಗುಂದ, ಪುಷ್ಪಗಿರಿ, ಬ್ಯಾಡಗಿ ಹತ್ತಿರದ …ಕಟ್ಟೆ, ತುಮಕೂರು ಸುತ್ತಮುತ್ತ ಒಂದೆರಡು …ಖಾ ಮಠಗಳಿದ್ದಾಗ್ಯೂ ನಂದಿಗುಡಿ ಮಠ ಅಷ್ಟೇನು …ಶಾಲಿಯಾಗಿರಲಿಲ್ಲ. ಈ ಹಿಂದಿದ್ದ ಮೃತ್ಯುಂಜಯ …ಮಿಗಳ ನಂತರ ನಂದೀಶ್ವರ ಶಿವಾಚಾರ್ಯ …ಮಿಗಳು 1992ರಲ್ಲಿ ಮಠಾಧೀಶರಾಗಿ ಬಂದ ನಂತರ …ಸ್ಥಿತಿ ಬದಲಾಗತೊಡಗಿತು. ಸಾಕಷ್ಟು ಶಿಕ್ಷಣ, …ನೀತಿ, ದೂರದೃಷ್ಟಿ ಎಲ್ಲವೂ ಇದ್ದ ನಂದೀಶ್ವರ …ಮಿಗಳು ಜನರನ್ನೂ ಸಂಘಟಿಸಿ ಮಠ ಕಟ್ಟಲು …ಕ ಕಟ್ಟಿ ನಿಂತಿದ್ದರು. ಅವರಲ್ಲಿದ್ದ ನಾಯಕತ್ವ …ದಿಂದಾಗಿಯೇ ನಂದಿಗುಡಿಯಲ್ಲಿ ಶ್ರೀ ಗುರು …ಬಸವೇಶ್ವರ ವಿದ್ಯಾಸಂಸ್ಥೆ ಉಕ್ಕಡಗಾತ್ರಿಯಲ್ಲಿ ಶ್ರೀಗುರು ಕರಿಬಸವೇಶ್ವರ …, ಹೊನ್ನಾಳಿಯ ಹತ್ತೂರು ಎರಹಳ್ಳಿಯಲ್ಲಿ ಪಲ್ಲವ ಎಜುಕೇಷನ್ …ಗಳನ್ನೂ ಸ್ಥಾಪಿಸಿದರು. ನೋಡನೋಡುತ್ತಿದ್ದಂತೆಯೇ ನೊಳಂಬರ …ಡ್, ಡಿಎಡ್ ಕಾಲೇಜುಗಳು, ಐಟಿಐ, ನರ್ಸರಿ ಕಾಲೇಜುಗಳು …ತ್ತು ಅಭಿವೃದ್ಧಿಯಾಗತೊಡಗಿದವು.


ಬಸವರಾಜ ದೇಶಿಕೇಂದ್ರ

…ಮಲೇಬೆನ್ನೂರಿನ ತುಮ್ಮಿನಕಟ್ಟೆಯಲ್ಲೊಂದು ಸಂಗನ ಬಸವೇಶ್ವರ …ನಿಯರ್ ಕಾಲೇಜು ಬಂತು. ಅದಕ್ಕೆ ನಂದಿಗುಡಿ ಸ್ವಾಮಿಯೇ …ಕ್ಷರಾಗಿದ್ದರು. ಇದಿಷ್ಟೇ ಅಲ್ಲದೆ ನಂದೀಶ್ವರ ಸ್ವಾಮಿ ಎಂತಾ …ವಾದಿಯೆಂದರೆ ಹತ್ತಿರತ್ತಿರ 70 ಲಕ್ಷ ರೂಪಾಯಿ ಹಣ ಸಂಗ್ರಹಿಸಿ …ಸ ಅಭಿವೃದ್ಧಿ ಯೋಜನೆಗಳಿಗೆ ಪ್ಲಾನ್ ಮಾಡಿಕೊಂಡಿದ್ದರು. …ವೆಲ್ಲ ಶಿಸ್ತುಬದ್ಧವಾಗಿ, ವ್ಯವಸ್ಥಿತವಾಗಿ ನಡೆಯಲೆಂದು ಹೊಸ …ಸ್ಟ್‌ಗಳನ್ನೂ, ಸಮಿತಿಗಳನ್ನೂ ರಚಿಸಲು ಹೊರಟರು.

…ತಮಾಷೆ ಶುರುವಾಗಿದ್ದೇ ಆಗ.

ನಂದಿಗುಡಿ ಮಠ ಯಾವಾಗ ಚಿಗುರಿ ಬೆಳೆಯತೊಡಗಿತೊ ಒಂದಿಷ್ಟು ಜನ ಅದರ ಸುತ್ತಾ ಸೇರತೊಡಗಿದರು. ಬಹಳ ಬೇಗನೆ ಅವರಲ್ಲೇ ಎರಡು ಗುಂಪಾಗಿ ಜಗಳ ಶುರುವಾಯಿತು. ಒಂದು ಗುಂಪಿಗೆ ಸ್ವಾಮೀಜಿಯನ್ನೇ ತಮ್ಮ ಕಂಟ್ರೋಲಿನಲ್ಲಿರಿಸಿಕೊಂಡು ಮಠವನ್ನೂ, ಆ ಮೂಲಕ ನೊಳಂಬ ಜನಾಂಗವನ್ನು ಆಳುವ ಆಕಾಂಕ್ಷೆ ಬಂತು. ಇನ್ನೊಂದು ಗುಂಪಿನವರಿಗೆ ಕಮಿಟಿ, ಟ್ರಸ್ಟ್‌ಗಳು ರಚನೆಯಾಗಲಿ, ಎಲ್ಲವೂ ವ್ಯವಸ್ಥಿತವಾಗಿ ನಡೆಯಲಿ ಎಂಬ ಇರಾದೆಯಿತ್ತು.

ಈ ಗುಂಪುಗಳ ಕಲಹ ಬೆಳೆದು ಅದರಿಂದ ಹತಾಶರಾದ ನಂದೀಶ್ವರ ಸ್ವಾಮಿ 2005ರಲ್ಲೇ ಮಠ ತ್ಯಜಿಸುವ ಮಾತೆತ್ತಿದ್ದರು. ಆಗೊಮ್ಮೆ ಮಠ ಬಿಟ್ಟು ಹಾಸನ ಬಳಿಯ ಪುಷ್ಪಗಿರಿಯಲ್ಲಿ ಕಾಣಿಸಿಕೊಂಡಿದ್ದರು. ಆ ನಂತರವೂ ಒಳಜಗಳ ನಿಲ್ಲದ ಕಾರಣ ರೋಸಿಹೋದ ಸ್ವಾಮೀಜಿ 2006ರ ಡಿಸೆಂಬರ್‌ನಲ್ಲಿ ಮಠ ಬಿಟ್ಟು ಹೊರಟೇ ಹೋದರು. ಹಾಗೆ ಹೋಗುವ ಮುನ್ನ ಬ್ಯಾಡಗಿಯ ಅರ್ತಿಗಟ್ಟೆಯ ಶಾಖಾ ಮಠದಲ್ಲಿದ್ದ ಮುಮ್ಮಡಿ ಬಸವರಾಜ ದೇಶಿಕೇಂದ್ರರೆಂಬ ಯುವ ಸನ್ಯಾಸಿಯನ್ನು ಕರೆಸಿ ನಂದಿಗುಡಿ ಮಠದ ಉಸ್ತುವಾರಿ ನೋಡಿಕೊಳ್ಳುವಂತೆ ಒಪ್ಪಿಸಿಹೋಗಿದ್ದರು. ನಂದೀಶ್ವರ ಸ್ವಾಮಿ ಮಠ ತ್ಯಜಿಸಿದ್ದಾರೆಂಬ ಅರಿವಿಲ್ಲದ ಭಕ್ತರು ಸ್ವಾಮಿಗಳು ಕಾಶಿ ಮುಂತಾದೆಡೆ ಯಾತ್ರೆ ಹೋಗಿದ್ದಾರೆಂದು ಭಾವಿಸಿ ಕಳೆದ ಮೂರು ವರ್ಷಗಳಿಂದ ಕಾದೂ ಕಾದೂ ಕೊನೆಗೆ ಮೊನ್ನೆ ಅಕ್ಟೋಬರ್ ತಿಂಗಳಿನಲ್ಲಿ ಸ್ವಾಮೀಜಿ ಕಣ್ಮರೆ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಾಗ ನಂದೀಶ್ವರ ಸ್ವಾಮೀಜಿ ಬಾಡದ ಬಯಲು ಗ್ರಾಮದಲ್ಲಿ ಸಾಧಾರಣ ರೈತನಾಗಿದ್ದು ಗೀತಾರ ಜೊತೆ ಸಂಸಾರ ಮಾಡಿಕೊಂಡಿರುವುದು ಪತ್ತೆಯಾಗಿದೆ. ತಮ್ಮನ್ನು ಹುಡುಕಿ ಬಂದ ಪೊಲೀಸರ ಬಳಿ ತಾವು ಮಠಕ್ಕೆ ವಾಪಸ್ ಬರುವುದಿಲ್ಲ ಎಂದು ನಂದೀಶ್ವರ ಸ್ವಾಮಿ ದೃಢವಾಗಿ ಹೇಳಿಕಳಿಸಿಬಿಟ್ಟಿದ್ದಾರೆ.

ಈಗಿನ ಹೊಸ ಸಮಸ್ಯೆ ಏನೆಂದರೆ ನಂದಿಗುಡಿ ಮಠಕ್ಕೆ ಹೊಸ ಸ್ವಾಮೀಜಿ ಯಾರಾಗಬೇಕು ಎಂಬುದು. ನಂದಿ ಯುವ ವೇದಿಕೆಯ ಯುವರಾಜ್ ಇಂದೂಧರ, ವಿಜಯ ಮುಂತಾದವರ ಬಣಕ್ಕೆ ಮುಮ್ಮಡಿ ಬಸವರಾಜ ದೇಶಿಕೇಂದ್ರ ಬೇಡವಾಗಿದ್ದಾರೆ. ಮತ್ತೊಂದೆಡೆ ಮಲೇಬೆನ್ನೂರಿನ ಡಾ. ಬಸವರಾಜ್, ಕೊತ್ತನೂರಿನ ಭರಮಗೌಡರು, ಲಿಂಗೇಗೌಡ, ಇಂಕಸಗಟ್ಟೆ ಮುರುಗೇಶಪ್ಪ ಮುಂತಾದವರಿಗೆ ದೇಶಿಕೇಂದ್ರರೇ ಹೊಸ ಮಠಾಧೀಶರಾಗಲಿ ಎಂಬ ಅಭಿಪ್ರಾಯವಿದೆ.

ದೇಶಿಕೇಂದ್ರರ ವಿರೋಧಿಗಳಂತೂ ಕಳೆದ ಮೂರು ವರ್ಷಗಳಲ್ಲಿ ಮಠದ ಒಂದೂವರೆ ಕೋಟಿ ರೂಪಾಯಿ ದುರ್ಬಳಕೆಯಾಗಿದೆ ಎನ್ನುತ್ತಿದ್ದಾರೆ. ಬಸವರಾಜ ದೇಶಿಕೇಂದ್ರರಿಗೆ ಪೂಜೆ ಬರಲ್ಲ, ಎದ್ದೇಳುವುದೇ ಬೆಳಿಗ್ಗೆ 9ಕ್ಕೆ, ಅವರು ಖಾರಮಂಡಕ್ಕಿ, ಬೋಂಡಾ ಮಿರ್ಚಿ ತಿನ್ನೋ ಸ್ವಾಮಿ, ಅಂತವರು ನಮಗೆ ಬೇಡ ಎನ್ನುತ್ತಾ ಇಂದೂಧರ ನೇತೃತ್ವದಲ್ಲಿ ಕೋರ್ಟಿಗೂ ಹೋಗಿದ್ದಾರೆ. ಮೊದಲು ಒಂದು ಟ್ರಸ್ಟ್ ರಚಿಸಿ ಸೂಕ್ತ ತರಬೇತಿ ಕೊಡಿಸಿ ಹೊಸ ಸ್ವಾಮಿಜಿಯನ್ನು ಆರಿಸೋಣ ಎನ್ನುವ ಅವರ ನಿಲುವಿನಿಂದಾಗಿ ಬಿಕ್ಕಟ್ಟು ಜಾಸ್ತಿಯಾಗಿದೆ.

ಈ ಜಗಳ ಸದ್ಯಕ್ಕೆ ಬಗೆಹರಿಯುವಂತೆ ಕಾಣುತ್ತಿಲ್ಲ.

ಬೆಳೆಯುವ ಸಾಧ್ಯತೆಯಿದ್ದ ಇಂತಾ ಮಠ ತ್ಯಜಿಸಿ ಸಂಸಾರವಂದಿಗನಾಗಿ ವ್ಯವಸಾಯ ಮಾಡಿಕೊಂಡಿರುವ ನಂದೀಶ್ವರ ಶಿವಾಚಾರ್ಯ ಸ್ವಾಮೀಜಿ ಈಗ ತಮ್ಮ ಪೂರ್ವಾಶ್ರಮದ ಹೆಸರಾಗಿದ್ದ ಸಿದ್ದರಾಮೇಶ್ವರರಾಗಿ ನಿರ್ಲಿಪ್ತರಾಗುವುದು ನಿಜಕ್ಕೂ ಕುತೂಹಲಕಾರಿಯಾಗಿದೆ. ಒಂದಂತೂ ಸತ್ಯ ನೊಳಂಬ ಲಿಂಗಾಯತರು ತಮ್ಮ ಏಳಿಗೆಗಾಗಿ ಶ್ರಮಿಸಬಹುದಾಗಿದ್ದ ಒಬ್ಬ ಅತ್ಯುತ್ತಮ ಧರ್ಮಗುರುವನ್ನು ಕಳೆದುಕೊಂಡಿದ್ದಾರೆ.

ತಪ್ಪು ಕೆಲ ಸ್ವಾರ್ಥಿಗಳದ್ದೇ ವಿನಃ ನಂದೀಶ್ವರ ಸ್ವಾಮಿಗಳದಲ್ಲ.

ಪಾರ್ವತೀಶ

ಶ್ರೀಮಂತ ಮಠಾಧೀಶನಾಗಲಾರೆ ಎಂದು ಬಡರೈತನಾದ ನಂದೀಶ್ವರ ಸ್ವಾಮಿ

…ನಿಜಕ್ಕೂ ಇದೊಂದು ವಿಚಿತ್ರ ಸನ್ನಿವೇಶ.

…ನಂದಿಗುಡಿ ಮಠಾಧೀಶರಾಗೇ ಮುಂದುವರೆದಿದ್ದರೆ ನಂದೀಶ್ವರ ಶಿವಚಾರ್ಯ ಸ್ವಾಮಿಗೆ ಹಣ, ಅಧಿಕಾರ, ಕೀರ್ತಿ, ಕಾರು ಎಲ್ಲಾ …ಕೋಟಿ ಸಿಕ್ಕುತ್ತಿತ್ತು, ಆದರೆ ಅವರು ಇದೆಲ್ಲಾ ಬೇಡ ಎಂದು ರೈತನಾಗಿ ಸರಳ ಜೀವನ ಆರಿಸಿಕೊಂಡಿದ್ದಾರೆ. ಇಷ್ಟಕ್ಕೂ ಹೊಸನಗರ-ಸೊರಬ …ನದ ಬಾಡದ ಬಯಲಿನಲ್ಲಿ ಅವರು ಹೊಂದಿರುವ ಜಮೀನು ದೊಡ್ಡ ವಿಸ್ತೀರ್ಣದ್ದೇನಲ್ಲ, ಬರೀ ಒಂದೂವರೆ ಎಕರೆ ಹೊಲ ಅದು. …ದಲ್ಲೇ ಅರ್ಧ ಎಕರೆಯಷ್ಟು ಅಡಿಕೆ ತೋಟ ಬೆಳೆಸುತ್ತಿದ್ದಾರೆ. ಈಗಿನ್ನೂ ಮೂವತ್ತೈದು-ಮೂವತ್ತೆಂಟರ ನಡುವಿನ ವಯಸ್ಸಿನವರಾದ …ದೀಶ್ವರ ಸ್ವಾಮಿ ತಮಗೆ ಇಷ್ಟವಾದ ಗೀತಾ ಅವರನ್ನು ಮದುವೆಯಾಗುವ ಮೂಲಕ ತಾನೊಬ್ಬ ಪ್ರಾಮಾಣಿಕ ಮನುಷ್ಯ ಎಂಬುದನ್ನೂ …ರೂಪಿಸಿಕೊಟ್ಟಿದ್ದಾರೆ. ಅಧ್ಯಾತ್ಮ-ವೈರಾಗ್ಯಗಳನ್ನೂ ಸಾಧಿಸಬೇಕೆಂದರೆ ಅದಕ್ಕೆ ಅಪಾರ ಮನಶಕ್ತಿ ಬೇಕು. ಕೆಲವು ಮಠಾಧೀಶರು ಹೆಸರಿಗೆ …ಗಳಂತಿರುತ್ತಾರೆ. ಆದರೆ ಅವರ ಚೇಲಾಗಳು, ಸಂತಾನಗಳು ಮಠಗಳ ಆವರಣಗಳಲ್ಲೇ ಓಡಾಡಿಕೊಂಡಿರುತ್ತವೆ. ಈ ಮುಖವಾಡಕ್ಕಿಂತಾ …ಗೊಬ್ಬರ ಸನ್ಯಾಸ ಬದುಕನ್ನು ಬಿಟ್ಟು ಸಂಸಾರಿಗಳಾಗಿರುವುದರಲ್ಲಿ ಯಾವ ತಪ್ಪು ಇಲ್ಲ. ಈ ಹಿಂದೆ ಬ್ರಾಹ್ಮಣ ಮಠಾಧೀಶ …ರೊಬ್ಬರೂ ಬಳ್ಳಾರಿಯ ಡಾ. ರಮಾರವರನ್ನು ಮದುವೆಯಾಗಿ ಸನ್ಯಾಸ ತ್ಯಜಿಸಿದ್ದರಲ್ಲವೆ?

ಕರ್ನಾಟಕ ರತ್ನದ ಕಡೆ ಕಣ್ಣಿಟ್ಟವರ ಕಣ್ಣೀರು

ಎಡೂರಪ್ಪನಿಗೆ ಬಂದ ಕಷ್ಟಗಳನ್ನು ನೋಡಿದ ಕರ್ನಾಟಕದ ಮೂಢನಂಬಿಕೆ ಆರಾಧಕರು, ತಮಗೆ ಕಂಡದ್ದನ್ನೆಲ್ಲಾ ಕಣಿಯಾಗಿಸಿಕೊಂಡು ಹೇಳತೊಡಗಿದ್ದಾರಂತಲ್ಲಾ, ಮೈಸೂರ ಕಡೆಯ ಮಲೆಮಹದೇಶ್ವರನ ಕಂಸಾಳೆ ಜನ "ಅಹಹ ಮಾದೇವ, ನಮ್ಮ ಮೈಸೂರು ಸೀಮೆಗೆ ಗುಜರಾತಿನ ನರಹಂತಕ ಮೋದಿ ಕರಸಿದ್ದು ಸರಿಯೆ. ಕರೆಸಲಿ ಮಾದೇವ. ಆದರೆ ಅಂತವನಿಂದ ಬುದ್ಧಿ ಹೇಳಿಸಿಕೊಂಡಿದ್ದು ಸರಿಯೇ. ಹೇಳಿಸಿಕೊಂಡು ಅದರಂತೆ ನಡೆಯಲು ಹೋದುದು ಸರಿಯೇ ಮಾದೇವಾ" ಎನ್ನುತ್ತಿದ್ದಾರಂತಲ್ಲಾ, ಇನ್ನ ಮಂತ್ರಾಲಯದ ಕಡೆಯ ಮುಂಚಾಲಮ್ಮನ ಒಕ್ಕಲು "ನಮ್ಮವ್ವನ ಗುಡಿಯನ್ನು ಹಾಳುಬಿಟ್ಟು ಆ ಗುರು ರಾಘವೇಂದ್ರನ ಸಮಾಧಿಗೆ ಹತ್ತು ಕೋಟಿ ಕೊಟ್ಟರೆ ಅಮ್ಮ ಬಿಟ್ಟಾಳ. ನೋಡು ನೋಡುತ್ತಿದ್ದಂತೆ ತೋರಿಸಿಯೇಬಿಟ್ಟಳು" ಎಂದು ಸಮಾಧಾನಗೊಂಡರಂತಲ್ಲಾ, ಇತ್ತ ಅರಸೀಕೆರೆ ಸಮೀಪದ ಕೋಡೀಮಠದ ಗ್ರಂಥಾಧ್ಯಯನದ ಸ್ವಾಮಿಗಳು "ಎಡೂರಪ್ಪನ ಇವತ್ತಿನ ಸ್ಥಿತಿಯನ್ನು ಅವರು ಮುಖ್ಯಮಂತ್ರಿಯಾಗುವುದಕ್ಕಿಂತ ಮೊದಲೇ ಹೇಳಿದ್ದೆ" ಎನ್ನುತ್ತಿದ್ದಾರಂತಲ್ಲಾ, ಥೂತ್ತೇರಿ!

******

ಥೂತ್ತೇರಿ ▸ ಯಾಹೂ

ಪ್ರವಾಹ ಸಂತ್ರಸ್ತರ ನೆರವಿಗಾಗಿ ಬೀದಿಗಿಳಿದ ಎಡೂರಪ್ಪನ ಜೋಳಿಗೆಗೆ ಅನಾಮತ್ತು ಏಳುನೂರು ಕೋಟಿ ಸುರಿದುಕೊಂಡಿದ್ದನ್ನು ನೋಡಿ ಬೆಚ್ಚಿದ ಮಾಜಿ ಪ್ರಧಾನಿಗಳು ಮನಸಾರೆ ಕೊಂಡಾಡಿದರಂತಲ್ಲಾ, ಇಂತಹ ಮೆಚ್ಚುಗೆಯನ್ನು ಮೆಚ್ಚುಗೆಯಾಗಿಯೇ ತೆಗೆದುಕೊಳ್ಳಬೇಕೊ ಅಥವಾ ವ್ಯಂಗ್ಯವಾಗಿ ತೆಗೆದುಕೊಳ್ಳಬೇಕೊ, ಇಲ್ಲ ನಿರ್ಲಿಪ್ತವಾಗಿ ತೆಗೆದುಕೊಳ್ಳಬೇಕೊ ಎಂದು ಎಡ್ಯೂರಪ್ಪ ಎಣ್ಣೆಯಲ್ಲಿ ಬಿದ್ದ ಗೊದ್ದದಂತೆ ಒದ್ದಾಡುತ್ತಿರಬೇಕಾದರೆ, ಮತ್ತೊಂದು ಪತ್ರ ಕಾಣಿಸಿ, ಅದನ್ನು ತೆಗೆದು ಓದಿದಾಗ ಪಾಟೀಲ ಪುಟ್ಟಪ್ಪನವರ ಪ್ರಪಂಚದ ಸಂಪಾದಕೀಯ ಓದಿದಂತಾಯ್ತಂತಲ್ಲಾ, ಕೆಳಗಡೆ ಸಹಿ ನೋಡಿದರೆ, ಥೇಟ್ ಪಾಪು ಮಾಡುವ ಸಹಿಯಂತೆಯೇ ಇದ್ದು, ಅನುಮಾನ ಬಗೆಹರಿಸಿಕೊಳ್ಳಲು ಫೋನ್ ಮಾಡಿದರಂತಲ್ಲಾ, ಸ್ವತಃ ಪಾಪುರವರೆ ಗದ್ಗದಿತ ಸ್ವರದಲ್ಲಿ ನಮಸ್ಕರಿಸಿ "ನನಗೀಗ ಬರೋಬರಿ ತೊಂಭತ್ತು ತುಂಬಿದೆ. ಇನ್ನು ಕೆಲವೇ ನಿಮಿಷಗಳು ಬಾಕಿ ಇವೆ. ಆದ್ದರಿಂದ ನಿಮ್ಮಿಂದ ನಾನೂ ಏನನ್ನು ನಿರೀಕ್ಷಿಸುವುದಿಲ್ಲ" ಎಂದರಂತಲ್ಲಾ, ಥೂತ್ತೇರಿ!

******

ಪಾಪುರವರ ತೇವಮಿಶ್ರಿತ ದನಿಯಿಂದ ಹನಿಗಣ್ಣಾದ ಎಡ್ಯೂರಪ್ಪನವರು "ಪುಟ್ಟಪ್ಪನವರೆ, ನಾನಿರುವಾಗ ನೀವ್ಯಾಕೆ ಹೆದರತಿರಿ. ಧೈರ್ಯವಾಗಿ ಹೇಳಿ. ನಾನೇನು ಮಾಡಬೇಕು ಅಂತ ಹೇಳಿ" ಎಂದು ಕೇಳಲಾಗಿ ಪಾಪುರವರು "ಏನಿಲ್ಲ ಎಡೂರಪ್ಪನವರೆ, ರಾಮಕೃಷ್ಣ ಹೆಗಡೆಯವರು ನಾನು ಕೇಳಿರದ್ದರೂ ಕನ್ನಡ ಕಾವಲು ಸಮಿತಿ ಅಧ್ಯಕ್ಷನನ್ನಾಗಿ ಮಾಡಿದರು. ನನಗೆ ವೈಯಕ್ತಿಕವಾಗಿ ಯಾವ ಮಹಾತ್ವಾಕಾಂಕ್ಷೆಯೂ ಇಲ್ಲ, ಆದರೂ ನಿಮ್ಮನ್ನು ಗೌರವಿಸಬೇಕು ಅನ್ನಿಸಿದೆ. ಅಭಿನಂದಿಸಬೇಕು ಅನ್ನಿಸಿದೆ. ಹೊಗಳಬೇಕು ಅನ್ನಿಸಿದೆ. ಯಾಕೆ ಅಂದ್ರೇ ಯಾರು ಎಷ್ಟೇ ಟೀಕಿಸಿದರೂ, ಬೈದರೂ, ಆಡಿಕೊಂಡರೂ, ನೀವು ನೆರೆ ಸಂತ್ರಸ್ತರ ನೆರವಿಗೆ ಧಾವಿಸಿ ಅವರಿಗೆ ಮನೆ ಮಠ ಕಟ್ಟಿಕೊಟ್ಟು, ದಾಸೋಹವನ್ನು ಏರ್ಪಡಿಸಿದ್ದು ನೋಡಿ ದಂಗು ಬಡಿದಿದ್ದೇನೆ" ಎಂದುಬಿಟ್ಟರಂತಲ್ಲಾ, ಇದರಿಂದ ಕಂಗಾಲಾದ ಎಡೂರಪ್ಪ "ಪಾಪು ಅವರೆ, ಅವೆಲ್ಲಾನೂ ಇನ್ನು ಮಾಡಬೇಕಿದೆ" ಎಂದರಂತಲ್ಲಾ, ಥೂತ್ತೇರಿ!

******

ಎಡ್ಯೂರಪ್ಪ ಇನ್ನೂ ಮಾಡದೇಯಿರುವ ಕೆಲಸವನ್ನು ಹೊಗಳುತ್ತಿರುವ ಪಾಪು ಹುನ್ನಾರವೇನಿರಬಹುದೆಂದು ಬಳಿಗಾರ್ ಸಮೇತ ಎಡೂರಪ್ಪನ ಶರಣ ಜನ ಮಾತನಾಡುತ್ತಿರಬೇಕಾದರೆ ಪಾಪುವನ್ನು ಆಮೂಲಾಗ್ರ ಅಧ್ಯಯನ ಮಾಡಿದವರೊಬ್ಬರು "ನೀವು ಏನೇ ಹೇಳಿ, ನಾಯಿ ಮಾತ್ರ ತನ್ನ ಸಹಜಪ್ರೀತಿಯಲ್ಲಿ ಬಾಲ ಅಲ್ಲಾಡಿಸುತ್ತೆ, ಪ್ರೀತಿಸುತ್ತೆ ಹೊಗಳುತ್ತೆ. ಆದರೆ ನರಮನುಷ್ಯನ ಹೊಗಳಿಕೆ ಎಂದಿಗೂ ಎಂದೆಂದಿಗೂ ಅನುಮಾನಕ್ಕೆ ಯೋಗ್ಯವಾದ ಒಂದು ವಿಶಿಷ್ಟವಾದ ಸೋಗಲಾಡಿತನ. ಪಾಪುಗೆ ತೊಂಬತ್ತಾಗುತ್ತಿರುವುದು, ಹಾಗೆಯೇ ಕರ್ನಾಟಕ ರತ್ನ ಪ್ರಶಸ್ತಿಗೆ ನಾವು ಜನ ಹುಡುಕುತ್ತಿರುವುದು ಕಾಕತಾಳೀಯವಿರಬಹುದು. ಆದರೆ ಬೆಂಗಳೂರಿಗೆ ಕೆಂಪೇಗೌಡ ಹೇಗೋ ಮೈಸೂರಿನ ಮಾನಸಗಂಗೋತ್ರಿ ಪ್ರಾಂತ್ಯದ ಜವರೇಗೌಡರು ಇನ್ನೂ ಇದ್ದಾರೆ. ಲಿಂಗಾಯತರ ಸರಕಾರವಿರುವಾಗ ಲಿಂಗಾಯತರಿಗೇ ಕರ್ನಾಟಕ ರತ್ನ ಪ್ರಶಸ್ತಿ ಕೊಟ್ಟರೆ ಅವರು ಆಮರಣಾಂತ ಉಪವಾಸ ಕೂರಲೂ ಹೇಸುವುದಿಲ್ಲ" ಎಂದು ಎಡೂರಪ್ಪನವರಿಗೆ ಹೇಳಿದರಂತಲ್ಲಾ, ಆದರೆ ಎಡೂರ್ಸ್ ರೆಡ್ಡಿಗಳ ರಾಡಿಯ ಬಗ್ಗೆ ಯೋಚಿಸುತ್ತಿದ್ದರಿಂದ ಉಗ್ರವಾಗಿ ಸಿಟ್ಟುಗೊಂಡು "ಯಾರಿಗೂ ಅದನ್ನು ಕೊಡುವುದಿಲ್ಲ, ಸದಾ ಶ್ರೀಕೃಷ್ಣನಂತೆ ನಮ್ಮ ಹಿತ ಕಾಯುವ ಸುತ್ತೂರು ಶ್ರೀಗಳಿಗೆ ಕೊಡುತ್ತೇನೆ" ಎಂದರಂತಲ್ಲಾ, ಥೂತ್ತೇರಿ!

******

ಎಡೂರಪ್ಪನ ಸರ್ಕಾರದ ಎರಡು ಗಾಲಿಗಳಂತಿರುವ ಸಿರಿಗೆರೆಯ ಸ್ವಾಮಿ ಮತ್ತು ಸುತ್ತೂರು ಶ್ರೀಗಳು ಚೆಡ್ಡಿಗಳಲ್ಲದ ಎಮ್ಮೆಲ್ಲೆಗಳ ಬಗ್ಗೆ ಶಾನೆ ಸಿಟ್ಟಾಗಿದ್ದಾರಂತಲ್ಲಾ, ಅದರಲ್ಲೂ ಸಿರಿಗೆರೆ ಸ್ವಾಮಿ ಉದ್ದಟ ಎಮ್ಮೆಲ್ಲೆಗಳಿಗೆ ಫೋನ್ ಮಾಡಿ ಅವಾಚ್ಯವಾಗಿ ಬೈಯೋಣವೆಂದರೆ, ಎಲ್ಲರೂ ಮೊಬೈಲ್ ಫೋನ್ ಆಫ್ ಮಾಡಿಕೊಂಡು ಕೂತಿದ್ದಾರಂತಲ್ಲಾ, ಇದರಿಂದ ಕೆರಳಿ ಕೆಂಡವಾದ ಸಿರಿಗೆರೆ ಸ್ವಾಮಿ ಚೆಡ್ಡಿಗಳ ಪತ್ರಿಕೆಗೊಂದು ದೀರ್ಘ ಲೇಖನ ಬರೆದು ಬಿಸಾಡಲು ತಯಾರಿ ನಡೆಸುತ್ತಿರುವಾಗಲೇ ಮೈಸೂರು ಪ್ರಾಂತ್ಯದ ಬಿಜೆಪಿ ವಕ್ತಾರರಂತಿರುವ ಸುತ್ತೂರು ಶ್ರೀಗಳು ಶೆಟ್ಟರನ್ನು ಕರೆಸಿ ಮೂರು ಸುತ್ತಿನ ಮಾತುಕತೆ ನಡೆಸಿ ಕಳುಹಿಸಿದ್ದಾರಂತಲ್ಲಾ, ಮೋದಿಯನ್ನು ಭಕ್ತರಾಗಿ ಪಡೆದಿರುವ ಸುತ್ತೂರು ಶ್ರೀಗಳು, ಶೆಟ್ಟರಂತಹ ಸಾದು ಸ್ವಭಾವದ ಮತ್ತು ಕೇವಲ ಒಂದು ಮಿನಿಸ್ಟ್ರಿ ಕೊಟ್ಟರೆ ಸುಮ್ಮನಾಗುವಂತಹ ಅಲ್ಪತೃಪ್ತ ವ್ಯಕ್ತಿಯನ್ನು ಒಂದೇ ಮಾತಿನಲ್ಲಿ ಸರಿ ಮಾಡಿ ಕಳಿಸಿರುವುದು ಸಾಮಾನ್ಯವಾದ ಸಾಧನೆಯೆ? ಈ ಬಗ್ಗೆ ಎಷ್ಟು ಕೇಳಿದರೂ ಬಾಯಿಬಿಡದ ಶೆಟ್ಟರ್ ಎಲ್ಲವನ್ನು ಕಾಲಕ್ಕೆ ಬಿಟ್ಟು ನಕ್ಕರಂತಲ್ಲಾ, ಆ ಕಾಲವೆಂದರೆ ಕಾಲಕ್ಕೆ ತಕ್ಕಂತೆ ಕುಣಿಯುವ ಸುತ್ತೂರು ಶ್ರೀಗಳ ಚೆಡ್ಡಿ ಮಿಶ್ರಿತ ಶರಣ ರಾಜಕಾರಣವೆಂದು ಪಿಂಜರಾಪೋಲು ಪತ್ರಕರ್ತರು ಅರ್ಥ ಮಾಡಿಕೊಂಡರಂತಲ್ಲಾ, ಥೂತ್ತೇರಿ!!



ರಾಘವೇಶನ ವಿರುದ್ಧ ಹವ್ಯಕ ಸಮುದಾಯದ ದಂಗೆ!



ರಾಮಚಂದ್ರಾಪುರ ಮಠದ ಸ್ವಾಮಿ ರಾಘವೇಶನ ಪಾಪದ ಕೊಡ ತುಂಬಿದೆ. ಈಗ ಆತನ ಹವ್ಯಕ ಸಮುದಾಯದವರೇ ಅಖಿಲ ಭಾರತ ಹವ್ಯಕ ಹಿತರಕ್ಷಣಾ ಸಮಿತಿ ಎಂಬ ಸಂಘಟನೆಯನ್ನು ಸ್ಥಾಪಿಸಿಕೊಂಡು ಆತನ ವಿರುದ್ಧ ತಿರುಗಿ ಬಿದ್ದಿದ್ದಾರೆ. ರಾಘವೇಶನಿಗೆ ಒಂದು ಬಹಿರಂಗ ಪತ್ರವನ್ನು ಬರೆದು ಅದರಲ್ಲಿ ಐವತ್ತಕ್ಕೂ ಹೆಚ್ಚು ಪ್ರಶ್ನೆಗಳನ್ನು ಸವಾಲಿನ ರೂಪದಲ್ಲಿ ಎಸೆದಿದ್ದಾರೆ.

ಕಳೆದ ಎರಡು ವರ್ಷಗಳಲ್ಲಿ ರಾಘವೇಶ ಮಾಡಿದ ದಂಧೆಗಳನ್ನು, ತೋರಿದ ವರ್ತನೆಗಳನ್ನು, ಹೂಡಿದ ಷಡ್ಯಂತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಈತ ಮಠವೊಂದರ ಸ್ವಾಮಿಯೋ, ಪುಂಡಪೋಕರಿಗಳ ನಾಯಕನೋ ಅಥವಾ ಥರ್ಡ್ ಕ್ಲಾಸ್ ರಾಜಕಾರಣಿಯೋ ಎಂಬ ಅನುಮಾನ ಯಾರನ್ನಾದರೂ ಕಾಡದೆ ಇರದು. ಅದೀಗ ಆತನ ಸಮುದಾಯವನ್ನೂ ಕಾಡುತ್ತಿರುವುದಕ್ಕೆ ಈ ಬಹಿರಂಗ ಪತ್ರವೇ ಸಾಕ್ಷಿಯಾಗಿದೆ.

ಹೌದು, ಯಾವ ಹವ್ಯಕ ಬ್ರಾಹ್ಮಣ ಸಮುದಾಯದ ನಾಯಕರು ರಾಘವೇಶ್ವರನನ್ನು ರಾಮಚಂದ್ರಾಪುರ ಮಠದ ಪೀಠಾಧ್ಯಕ್ಷನನ್ನಾಗಿ ಮಾಡಿ ಕೂರಿಸಿದ್ದರೋ ಅದೇ ನಾಯಕರಿಗೆ ಈಗ ತಾವು ಮಾಡಿದ ಘನಘೋರ ತಪ್ಪಿನ ಅರಿವಾಗಿದೆ. ಅದರಲ್ಲೂ ಕಳೆದೆರಡು ವರ್ಷಗಳಿಂದ ರಾಘವೇಶ ಮಾಡುತ್ತಿರುವ ಥರ್ಡ್ ಕ್ಲಾಸ್ ರಾಜಕೀಯದಿಂದ ಅವರೆಲ್ಲ ಬೇಸತ್ತು ಹೋಗಿದ್ದಾರೆ. ಈಗ್ಗೆ ಆರು ತಿಂಗಳ ಹಿಂದೆಯೇ ಹವ್ಯಕ ಸಮುದಾಯದ ನಾಯಕರಲ್ಲಿ ರಾಘವೇಶನ ವಿರುದ್ಧ ಅಸಮಾಧಾನ ದಟ್ಟವಾಗಿ ಮೂಡಿದ್ದರೂ ಅದನ್ನು ಅವರ್‍ಯಾರೂ ಬಹಿರಂಗಪಡಿಸಿರಲಿಲ್ಲ. ಅದಕ್ಕೆ ಹತ್ತು ಹಲವು ಕಾರಣಗಳಿರಬಹುದು. ರಾಜ್ಯದಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾದ ಮೇಲೆ ರಾಘವೇಶ ಬಹಳ ಪವರ್‌ಫುಲ್ ಸ್ವಾಮಿಯಾಗಿಬಿಟ್ಟಿದ್ದಾನೆ. ಯಡ್ಡಿ ತಾನು ಏಳು ಕೋಟಿ ಜನಸಂಖ್ಯೆಯಿರುವ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಎನ್ನುವುದನ್ನೂ ಮರೆತು ರಾಘವೇಶ ಕರೆದಾಕ್ಷಣವೇ ರಾಮಚಂದ್ರಾಪುರ ಮಠಕ್ಕೆ ಹಾರಿ ಆತನ ಕಾಲು ತೊಳೆದು ಲಕ್ಷಗಟ್ಟಲೇ ದಕ್ಷಿಣೆ ಕೊಟ್ಟು ಹೋಗುತ್ತಾರೆ. ಹೀಗಾಗಿ ಯಡ್ಡಿಯ ಕೃಪಾಕಟಾಕ್ಷ ಇರುವುದರಿಂದ ರಾಘವೇಶನನ್ನು ಎದುರು ಹಾಕಿಕೊಳ್ಳುವುದು ಕಷ್ಟ ಎಂದೇ ಹವ್ಯಕ ನಾಯಕರು ಇಲ್ಲಿಯ ತನಕ ಸುಮ್ಮನಿದ್ದರು.

ಆದರೆ, ಯಾವಾಗ ರಾಘವೇಶ ಇಡೀ ಹವ್ಯಕ ಸಮುದಾಯಕ್ಕೇ ಕಳಂಕ ತರುವಂಥ ಬಾನಗಡಿಗಳನ್ನು ಶುರುಹಚ್ಚಿಕೊಂಡನೋ, ಯಾವಾಗ ಹವ್ಯಕ ಬಾಲೆಯರ ಶೀಲಕ್ಕೇ ಕೈ ಹಾಕುವಂಥ ಹೀನ ಕೃತ್ಯಕ್ಕಿಳಿದ ತನ್ನ ಬಾಮೈದ ಜಗದೀಶ್ ಶರ್ಮಾನ ಬೆನ್ನಿಗೆ ನಿಂತನೋ, ಯಾವಾಗ ತನ್ನ ವಿರುದ್ಧ ಮಾತನಾಡುವ ಹವ್ಯಕ ನಾಯಕರನ್ನು ದೈಹಿಕವಾಗಿ ಸದೆಬಡಿಯುವುದಕ್ಕಾಗಿ ಮಠದೊಳಗೇ ಗೂಂಡಾಪಡೆ ಕಟ್ಟುವುದಕ್ಕೆ ಪ್ರಾರಂಭಿಸಿದನೋ, ಯಾವಾಗ ಪರಂಪರಾನುಗತವಾಗಿ ಹವ್ಯಕ ಸಮುದಾಯ ಮತ್ತು ರಾಮಚಂದ್ರಾಪುರ ಮಠ ಮಾಡಿಕೊಂಡು ಬಂದಿದ್ದ ರೂಢಿ-ಸಂಪ್ರದಾಯಗಳನ್ನೆಲ್ಲಾ ಗಾಳಿಗೆ ತೂರತೊಡಗಿದನೋ, ಯಾವಾಗ ಮಲ್ಲಿಕಾ ಶೆರಾವತ್‌ಳಂಥ ಸೆಕ್ಸ್ ಬಾಂಬ್ ಅನ್ನು ಗೋಕರ್ಣಕ್ಕೆ ಕರೆಸಿ ಆಕೆಯನ್ನು ಪ್ರಶಂಸಿಸಿದನೋ ಆಗ ಸುಸಂಸ್ಕೃತ ಹವ್ಯಕ ನಾಯಕರಿಗೆ ರಾಘವೇಶನ ವಿರುದ್ಧ ಬಂಡಾಯವೇಳದೇ ಬೇರೆ ದಾರಿ ಉಳಿಯಲಿಲ್ಲ.

ಅದರ ಪರಿಣಾಮವಾಗಿಯೇ ಈಗ ಅಖಿಲ ಭಾರತ ಹವ್ಯಕ ಹಿತರಕ್ಷಣಾ ಸಮಿತಿ ಹೆಸರಲ್ಲಿ ಅವರೆಲ್ಲ ರಾಘವೇಶನ ವಿರುದ್ಧ ದಂಗೆಯೆದ್ದಿದ್ದಾರೆ. ಒಂದು ಬಹಿರಂಗ ಪತ್ರವನ್ನು ಬರೆದು ಅದರ ಸಾವಿರಾರು ಪ್ರತಿಗಳನ್ನು ಹಂಚಿದ್ದಾರೆ, ಇಡೀ ಹವ್ಯಕ ಸಮುದಾಯದ ಒಂದೊಂದು ಕುಟುಂಬಕ್ಕೂ ತಲುಪಿಸಿದ್ದಾರೆ.

ಆ ಬಹಿರಂಗ ಪತ್ರದಲ್ಲಿನ ಹಲವು ಪ್ರಮುಖ ಪ್ರಶ್ನೆಗಳು ಹೀಗಿವೆ:

"ನಮ್ಮ ಹವ್ಯಕ ಪೀಠವನ್ನು ಎಲ್ಲ ವಿಧದಿಂದಲೂ ಶಕ್ತಿತುಂಬಿ ಮುನ್ನಡೆಸುವ ಯತಿವರೇಣ್ಯರೇ ಆಶ್ರಮ ಧರ್ಮವನ್ನು ಮೀರಿದರೆ ಇದಕ್ಕೆ ಹೊಣೆ ಯಾರು? ಸಮಾಜವೋ ಅಥವಾ ಇವರನ್ನು ಪೀಠದಲ್ಲಿ ಕೂಡ್ರಿಸಿದ ಸಮಾಜದ ಮುಖ್ಯವಾಹಿನಿಯಲ್ಲಿ ಬರುವ ಮುಖಂಡರೋ? ಶ್ರೀ ಶಂಕರರ ಗುರುಪರಂಪರೆಯಲ್ಲಿ ಸಾಗಿಬಂದ ಹವ್ಯಕ ಸಮಾಜವನ್ನು ಮುನ್ನಡೆಸುವ ಶ್ರೀ ಶ್ರೀಗಳವರು ಕಳೆದ ಹತ್ತು-ಹದಿನೈದು ವರ್ಷಗಳಿಂದ ಹವ್ಯಕ ಪೀಠವನ್ನು ಅಲಂಕರಿಸಿ, ಇವರು ಕೈಗೊಂಡ ಕೆಲವು ನಿರ್ಣಯಗಳು, ಮಾಡಿದ ಅವಘಡಗಳು ಸಮಸ್ತ ಹವ್ಯಕ ಸಮಾಜವನ್ನು ಘಾಸಿಗೊಳಿಸಿದೆ. ಶ್ರೀಗಳವರ ಅಂತರಂಗ ಬಹಿರಂಗವನ್ನು ತೆರೆದಿಡುವುದರ ಮೂಲಕ ಸಮಸ್ತ ಸಮಾಜದ ಹಾಗೂ ಶ್ರೀಶ್ರೀಗಳವರ ಎದುರಿಗೆ ಈ ಕೆಳಗಿನ ಅಂಶಗಳನ್ನು ಅಖಿಲ ಭಾರತ ಹವ್ಯಕ ಹಿತರಕ್ಷಣಾ ಸಮಿತಿಯು ಸಾದರಪಡಿಸುತ್ತದೆ........

* ಯತಿ ಆದವರ್ಯ ಇಂದ್ರಿಯಗಳ ದಾಸನಾಗಬಾರದು. ಹೆಣ್ಣು ಹೊನ್ನು ಒಡವೆ ವಸ್ತ್ರವಾಹನಾದಿಗಳಿಂದ ದೂರವಿರಬೇಕು. ಮರದಿಂದ ಮಾಡಿದ ಹೆಣ್ಣು ಗೊಂಬೆಯನ್ನೂ ಸಹ ಭಿಕ್ಷುವಾದವನು ಕಾಲಿನಿಂದಲೂ ಮುಟ್ಟಬಾರದು. ಹೀಗಿರುವಾಗ ಶ್ರೀಗಳು ಸಾಕ್ಷಾತ್ತಾಗಿ ಮಹಿಳೆಯರನ್ನು ಮುಟ್ಟಿ, ಮುಟ್ಟಿ ಅವರ ಕೆನ್ನೆ ಸವರಿ ಹಣೆಗೆ ಬೊಟ್ಟಿಟ್ಟು ಆಶೀರ್ವದಿಸುವುದು ಪರಮಹಂಸ ಧರ್ಮವೇ?
* ಮೇಘಾಲಯದ ಬಾಲೆಯರಷ್ಟೇ ಸಹಾಯ ಹಾಗೂ ಆಶ್ರಯಕ್ಕೆ ಅರ್ಹರಾದ ಮಕ್ಕಳು ನಮ್ಮ ಸಮಾಜದಲ್ಲಿ ಇಲ್ಲವೇ?
* ಬೇರೆ ಬೇರೆ ಮಹಿಳೆಯರ ಹೆಸರಿನಲ್ಲಿ ಇಟ್ಟ ಕೋಟ್ಯಂತರ ರೂ.ಗಳು ಮಠದ ಹಣವಲ್ಲವೇ?
* ಮಾಡಬಾರದ ಕೆಲಸವನ್ನು ನೀಚ ಜಗದೀಶ ಮಾಡಿದರೂ ಬಾಲ್ಯದ ಗೆಳೆತನ ಯತಿ ಆಶ್ರಮಕ್ಕೆ ಮುಳುವಾಯಿತೇ?
* ದೌರ್ಜನ್ಯಕ್ಕೊಳಗಾದ ಹವ್ಯಕ ಸಹೋದರಿಯರು ಶ್ರೀಗಳವರಲ್ಲಿ ಬಂದು ಕಳಕಳಿಯಿಂದ ಅಂಗಲಾಚಿದರೆ ಅವರ ಬೇಡಿಕೆಗೆ ಕಿಂಚಿತ್ತೂ ಕಿವಿಗೊಡದೆ ಬಂದವರನ್ನು ಧಿಕ್ಕರಿಸಿದ್ದು ಆಭಾಸವಲ್ಲವೇ? ದೌರ್ಜನ್ಯಕ್ಕೊಳಗಾದವರು ಸ್ವತಃ ಬಂದು ಬೇಡಿಕೊಂಡರೂ ಪರಿಹಾರ ಸಿಗದಿದ್ದಾಗ ಅವರು ಇನ್ನಾರಲ್ಲಿ ಹೇಳಿಕೊಳ್ಳಬೇಕು? ಇದಕ್ಕೆ ಪುನಃ ಸಾಕ್ಷ್ಯ ಬೇಕೆ? (ತಪ್ಪು ಮಾಡಿದವನನ್ನು ಸಮರ್ಥಿಸಿ) ಇಷ್ಟೆಲ್ಲಕ್ಕೂ ಸಮಾಜ ಕಾರಣವೆಂದು ನಿರ್ದುಷ್ಟವಾದ ಸಮಾಜದ ಮೇಲೆ ಗೂಬೆ ಕೂರಿಸಿದ್ದು ನಾವೆಲ್ಲ ಯೋಚಿಸಬೇಕಾದ ವಿಷಯವಲ್ಲವೇ?
* ತಾನು ಮಾಡಬಾರದ ಕೆಲಸವನ್ನು ಮಾಡಿ ಅದನ್ನು ಸಮರ್ಥಿಸುವುದಕ್ಕೆ ಮಹಾಜ್ಞಾನಿಗಳಾದ ವ್ಯಾಸರ ಮೇಲೆ ಆರೋಪ ಹೊರಿಸಿ ಅಕ್ಟೋಬರ್ ತಿಂಗಳ 'ಧರ್ಮಭಾರತಿ'ಯಲ್ಲಿ ಸಂಪಾದಕೀಯವನ್ನು ಬರೆದ ಈ ನೀಚನ ಬುದ್ಧಿಮತ್ತೆಗೆ ಏನು ಹೇಳಬೇಕು?
* ಈ ಹಂತದಲ್ಲಿಯೂ ನೀಚ ಜಗದೀಶನನ್ನು ದೂರವಿಡದೇ ಇರಲು ಅವನ ವಿಷಯದಲ್ಲಿ ಶ್ರೀಗಳ ದೌರ್ಬಲ್ಯ ಏನು?
* ಶ್ರೀಗಳು ಇಡೀ ಒಂದೂವರೆ ದಿನವನ್ನು ಸಿನಿಮಾ ನಟಿಯೊಬ್ಬಳಿಗೆ ವ್ಯಯಿಸಬಹುದೋ? ಆ ನಟಿಯೊಬ್ಬಳಿಗೆ ಶ್ರೀಶ್ರೀಗಳವರು ಫೋಟೋಕ್ಕೆ ಪೋಸ್ ನೀಡುವುದು, ಕಾರ್ಯಕ್ರಮಕ್ಕೆ ಅವಳನ್ನು ಲಕ್ಷಾಂತರ ವ್ಯಯಿಸಿ ಕರೆಸುವುದು ಎಷ್ಟರಮಟ್ಟಿಗೆ ಸರಿ? ಅದರಿಂದ ಮಠಕ್ಕಾದ ಪ್ರಯೋಜನವೇನು?
* ನಾಗಯಕ್ಷಿಗೆ ಮಾಲಾರ್ಪಣೆ, ಇನ್ನೊಬ್ಬಳಿಗೆ ತಿಲಕಾರ್ಪಣೆ ಮಾಡುವ ಶ್ರೀಗಳು ಯತಿಧರ್ಮವನ್ನು ಮರೆತಿರುವರೇ?
* ಶಂಕರ ಜಯಂತಿಯಂತಹ ಪರಮಪವಿತ್ರವಾದ ಕಾರ್ಯಕ್ರಮವನ್ನು ಎಷ್ಟು ವರ್ಷ ಶಾಸ್ತ್ರೀಯವಾಗಿ ಆಚರಿಸಿದರು? ರಾಮಸತ್ರದಲ್ಲಿ ಶಂಕರ ಜಯಂತಿ ಬಡವಾಯಿತೆ?
* ಚಾತುರ್ಮಾಸ್ಯ ವ್ರತವನ್ನು ಕೈಗೊಂಡಾಗ ದೀಕ್ಷಾ ವಿಸರ್ಜನೆಗೆ ಪ್ರಾಮುಖ್ಯವನ್ನು ನೀಡದೇ ವ್ರತವನ್ನು ಅಕಾಲದಲ್ಲಿ ಮುಗಿಸಿ ಬೆಳಿಗ್ಗೆ ಲಗುಬಗೆಯಿಂದ ವಿಮಾನ ಏರಿ ಉಡುಪಿಯ ಸಮೀಪ ಭಿಕ್ಷೆಮಾಡಿ ಗೋಕರ್ಣಕ್ಕೆ ಆಗಮಿಸುವ ಪರಿ ಇವರಿಗೆ ಯಾಕೆ ಬೇಕಿತ್ತು? ಗೋಕರ್ಣದ ಗೊಡವೆ ನಮಗೇಕೆ?
* ಚಾತುರ್ಮಾಸ್ಯ ಸಂದರ್ಭದಲ್ಲಿ ಇತರ ಮಠಮಾನ್ಯಗಳಿಗೆ ಭೇಟಿ ನೀಡಿ ಪರಸ್ಪರ ಶ್ರೀಗಳ ಸಂದರ್ಶನಾದಿಗಳು ನಿಷಿದ್ಧ. ಬೆಂಗಳೂರಿನಲ್ಲಿ ಚಾತುರ್ಮಾಸ್ಯಕ್ಕೆ ಕುಳಿತಾಗ ಇತರ ಶ್ರೀಗಳನ್ನೂ, ಸಾಧುಸಂತರನ್ನೂ ಭೇಟಿಮಾಡಿದ್ದು ಸರಿಯೆ?
* ಶ್ರೀಗಳು ತಮ್ಮ ಚಾತುರ್ಮಾಸ್ಯ ವ್ರತಸಂಕಲ್ಪದ ಯಜ್ಞ ಮಾಲಿಕೆಯು ಬರೀ ಆಭಿಚಾರಿಕ ಮಾಟ-ಮಂತ್ರ, ಹೋಮ-ಹವನ ಜಪಾದಿಗಳನ್ನು ಶಿಷ್ಯರು ನೆರವೇರಿಸಲು ಅನುಕೂಲ ಮಾಡಬಹುದೋ? ಅಥವಾ ಒಬ್ಬ ಶಿಷ್ಯ ಇನ್ನೊಬ್ಬ ಶಿಷ್ಯನ ದಮನಕ್ಕೆ ಅನುಕೂಲಿಸಬಹುದೋ?
* ದಿನ ಬೆಳಗಾದರೆ ವಿಮಾನದಲ್ಲಿ ಓಡಾಡುವವರು ಆರಾಧ್ಯದೇವರ ಪೂಜೆಯನ್ನು ಯಾವಾಗ ಮಾಡುವರು? ಇದಾವ ಪರಿ? ಇದಕ್ಕಿಂತ ಗೃಹಸ್ಥರ ಪೂಜೆ ಎಷ್ಟೋ ಯೋಗ್ಯ ತಾನೆ? ಒಂದು ವೇಳೆ ಹರಾಬರಿಯಲ್ಲಿ ಪೂಜೆ ಮಾಡಿದರೆ ಸಮಾಜದ ಮೇಲೆ ಅವರ ಪೂಜೆಯ ಪರಿಣಾಮ ಯಾವ ರೀತಿಯ ಆಗಬಹುದು?
* ಹಿಂದಿನ ಗುರುಗಳಿಂದ ಪೂಜೆ ಮಾಡಲ್ಪ

ಒಂದು ಬಹಿರಂಗ ಪತ್ರ

ವಿವೇಚಿಸಿ, ಚರ್ಚಿಸಿ, ನಿರ್ಧರಿಸಿ


ಶ್ರೀ ರಾಘವೇಶ್ವರ ಭಾರತಿಗಳಿಂದ ಹವ್ಯಕ ಸಮಾಜಕ್ಕೆ ಲಾಭವೇ? ನಷ್ಟವೇ?

THE TIMES OF INDIA



Sexy Mallika's a 'pure soul'






ರಾಘವೇಶನ ಒಡೆದಾಳುವ ನೀತಿ

ರಾಘವೇಶ ಒಬ್ಬ ಸ್ವಾಮಿಯಾಗುವ ಬದಲು ರಾಜಕಾರಣಿಯೇನಾದರೂ ಆಗಿದ್ದಿದ್ದರೆ ಪ್ರಾಯಶಃ ಎಲ್ಲರನ್ನು ಮೀರಿಸುವ ತಂತ್ರ-ಕುತಂತ್ರಗಾರನಾಗಿರುತ್ತಿದ್ದ. ಈಗ ತನ್ನದೇ ಸಮುದಾಯ ತನ್ನ ವಿರುದ್ಧ ತಿರುಗಿಬೀಳುತ್ತಿರುವುದು ಮನವರಿಕೆಯಾಗುತ್ತಿದ್ದಂತೆಯೇ ರಾಘವೇಶ ಈ ದಂಗೆ ನಿವಾರಣೆಗಾಗಿ ದ್ವಿಮುಖ ಅಸ್ತ್ರಗಳನ್ನು ಹಿಡಿದು ಅಖಾಡಕ್ಕಿಳಿದಿದ್ದಾನೆ.

ಒಂದೆಡೆ, ಪಕ್ಕಾ ಪಳಗಿದ ರಾಜಕಾರಣಿಯಂತೆ 'ಒಡೆದಾಳುವ ನೀತಿ' ಅನುಸರಿಸುತ್ತಾ ಇನ್ನೊಂದೆಡೆ ಮಾತು-ವಾಗ್ವಾದಗಳಲ್ಲಿ ಬಗ್ಗದವರನ್ನು ಪಕ್ಕಾ ಬೀದಿ ರೌಡಿಯಂತೆ ತೋಳ್ಬಲದ ಮೂಲಕ ಬಗ್ಗಿಸಲು ಗೂಂಡಾ ಪಡೆ ಕಟ್ಟುತ್ತಿದ್ದಾನೆ.

ಇತ್ತೀಚಿಗೆ ಹವ್ಯಕ ಶಿಷ್ಯರ ಅಭಿಯಾನವೆಂಬ ತಾಲಿಬಾನ್ ಕಾನೂನು ಜಾರಿಮಾಡಲು ಹೊರಟಿರುವ ರಾಘವೇಶ ಎಲ್ಲೆಡೆ ಒಂದು ಅರ್ಜಿ ಪತ್ರವನ್ನು ಹಂಚಿದ್ದಾನೆ. 'ಶ್ರೀ ರಾಘವೇಶ್ವರ ಭಾರತಿ ಮಹಾಸ್ವಾಮಿಗಳವರ ಆದೇಶದ ಮೇರೆಗೆ ಸಂಬಂಧಿಸಿದ ಹವ್ಯಕ ಮನೆಗಳ ಅಭಿಯಾನ 2009-10' ಎಂಬ ತಲೆಬರಹ ಹೊಂದಿರುವ ಈ ಪತ್ರದಲ್ಲಿ ಹವ್ಯಕ ಸಮುದಾಯವನ್ನು 'ಸೇವಕ', 'ಸಾಮಾನ್ಯ ಶಿಷ್ಯ' ಮತ್ತು 'ಅನಾಮಿಕ' ಎಂದು ವಿಂಗಡಿಸಲಾಗಿದೆ.

ಅಷ್ಟೇ ಅಲ್ಲ, ಈ ಮೂರು ವರ್ಗಗಳ ಜನ ಯಾರಾಗಿರುತ್ತಾರೆಂದೂ ಸ್ಪಷ್ಟಪಡಿಸಲಾಗಿದೆ. 'ಸೇವಕ'ನೆಂದರೆ "ಶ್ರೀ ಮಠದ ನಿಯಮದಂತೆ ಕಾಣಿಕೆ ಸಲ್ಲಿಸಿ ಪ್ರಶ್ನಾತೀತ ನಿಷ್ಠೆಯಿದ್ದು, ಸೇವೆಗೆ ಸಮಯ, ಶ್ರಮ ಅಥವಾ ಹಣ, ವಸ್ತು ಯಾವುದೇ ರೂಪದಲ್ಲಿ ತೊಡಗಿಸಿಕೊಳ್ಳುವುದು" ಎಂದು ವಿವರಿಸಿದ್ದರೆ 'ಸಾಮಾನ್ಯ ಶಿಷ್ಯ' ಎಂದರೆ "ಶ್ರೀ ಮಠದ ನಿಯಮದಂತೆ ಕಾಣಿಕೆ ಸಲ್ಲಿಸುವವನು" ಎಂದಿದೆ. ಆದರೆ ಮೂರನೆ 'ಅನಾಮಿಕ' ಯಾರೆಂದರೆ "ಶ್ರೀ ಮಠದ ಬಗ್ಗೆ ಸದ್ಭಾವನೆ ಇಲ್ಲದಿರುವುದು" ಎಂದಿದೆ. ಅಂದರೆ, ಇಡೀ ಸಮುದಾಯದಲ್ಲಿ 'ಸೇವಕ' ಎಂಬ ಆತ್ಮಾಹುತಿ



ದಳ, 'ಸಾಮಾನ್ಯ ಶಿಷ್ಯ'ನೆಂಬ ಆಜ್ಞಾಪಾಲಕ ಪಡೆ ಮತ್ತು 'ಅನಾಮಿಕ' ಎಂಬ ನಾಸ್ತಿಕರನ್ನು ಗುರುತಿಸಿ ತನ್ನ ಟೀಕಾಕಾರರ ವಿರುದ್ಧ ದಾಳಿ ಮಾಡುವ ಸಂಚಿದು.

ಇದೇ ಸಮಯದಲ್ಲಿ ಇಡೀ ಸಾಧುಸಂತರು ತಲೆತಗ್ಗಿಸಬೇಕಾದ ಇನ್ನೊಂದು ಘನಂದಾರಿ ಕೆಲಸಕ್ಕೂ ಆತ ಕೈಯಿಟ್ಟಿದ್ದಾನೆ. ಅದೆಂದರೆ, ಮಾತುಗಳಿಗೆ, ವಾಗ್ವಾದಗಳಿಗೆ ಬಗ್ಗದವರನ್ನು ತೋಳ್ಬಲದ ಮೂಲಕ ಮಣಿಸುವುದಕ್ಕೆ 'ಹವ್ಯಕ ಸೇನೆ'ಯನ್ನು ಅರ್ಥಾತ್ ಗೂಂಡಾಪಡೆಯನ್ನು ಕಟ್ಟುತ್ತಿರುವುದು.

ಈಗಾಗಲೇ ಭಜರಂಗದಳ, ಶ್ರೀರಾಮಸೇನೆ, ದುರ್ಗಾಸೇನೆ, ಶಿವಸೇನೆಗಳು ಹುಟ್ಟಿಕೊಂಡು ಮಾಡುತ್ತಿರುವ ದೌರ್ಜನ್ಯ ಅನಾಚರಣೆಗಳು ಎಲ್ಲರಿಗೂ ಗೊತ್ತಿವೆ. ಈ ಸೇನೆಗಳಿಗೂ ಹಾಗೂ ರಾಘವೇಶನ ಸೇನೆಗೂ ಇರುವ ಏಕೈಕ ವ್ಯತ್ಯಾಸ ಎಂದರೆ ಆ ಎಲ್ಲಾ ಸೇನೆಗಳು ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರಂಥ ಅನ್ಯ ಧರ್ಮೀಯರ ಮೇಲೆ ದಾಳಿ ಮಾಡಿ ಕೊಚ್ಚಿಕೊಲ್ಲುವ ಗುರಿಯನ್ನಿಟ್ಟುಕೊಂಡಿದ್ದರೆ, ರಾಘವೇಶನ ಸೇನೆ ತನ್ನದೇ ಹವ್ಯಕ ಸಮುದಾಯದ ಮೇಲೆ ದಾಳಿ ಮಾಡುವ ಮಹೋನ್ನತ ಗುರಿಯನ್ನಿಟ್ಟುಕೊಂಡಿದೆ.

ಈಗ ನೀವೇ ಹೇಳಿ ಶ್ರೀರಾಮಚಂದ್ರಾಪುರ ಮಠದ ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಯನ್ನು ಹವ್ಯಕ ಸಮುದಾಯವನ್ನು, ಇಡೀ ಸಮಾಜವನ್ನು ಉದ್ಧಾರ ಮಾಡಲು ಹೊರಟಿರುವ ಸಂತ ಎಂದು ಕರೆಯಬೇಕೋ ಅಥವಾ ಥರ್ಡ್ ಕ್ಲಾಸ್ ರಾಜಕಾರಣಿ ಎಂದು ಕರೆಯಬೇಕೋ ಅಥವ ಬೀದಿ ರೌಡಿ ಎಂದು ಕರೆಯಬೇಕೋ?

ಶ್ರೀರಾಮಚಂದ್ರ ದೇವರು, ಗೋಯಂಕಾ/ಆಗರುವಾಲಗಳಿಂದ (www.srimath.org ವೆಬ್‌ಸೈಟನ್ನು ನೋಡಿ) ಪೂಜಿಸಲ್ಪಡಬಹುದೋ?

ಶ್ರೀಗಳು ಹವ್ಯಕ ಮಂಡಲಾಚಾರ್ಯ ಎನ್ನುವ ಪದವನ್ನು ಬಿಟ್ಟಿದ್ದಲ್ಲದೇ ನಮ್ಮ ಹವ್ಯಕರ ಕೈಗೆ ಸಿಗದೇ, ದೂರದ ಕಲ್ಪತ್ತಾದಲ್ಲಿ ಚಾತುರ್ಮಾಸ್ಯವನ್ನು ನಡೆಸಿದ್ದು ಸರಿಯೇ?

ಪುರಾಣ, ವೇದ, ಶಾಸ್ತ್ರಗಳ ಪ್ರಕಾರ ಗವ್ಯದ ಉತ್ಪನ್ನಗಳ ಮಾರಾಟದ ಮೂಲಕ ಧನಾರ್ಜನೆ/ ಖರೀದಿ ಎರಡೂ ವರ್ಜ್ಯವಾಗಿದ್ದು ಅವರ ಪಾಪ ಪರಿಹಾರಗಳು ಹೇಗೆ?

ಪತ್ರಿಕೆ ಕ್ಲಿಷ್ಟಕರ ಸನ್ನಿವೇಶಗಳಲ್ಲಿ ಚಂದ್ರಮೌಳೀಶ್ವರ, ರಾಮನಾಹೆಗಳನ್ನು ಮಾಡುವವರು ಈ ಪರಂಪರೆಯಿಂದ ಸಾಗಿಬಂದ ಧರ್ಮಪೀಠಕ್ಕೂ ಗೌರವ ನೀಡಬೇಡವೇ?

ಗೋಕರ್ಣದಲ್ಲಿ ನಡೆಯುತ್ತಿರುವ ಕೋಟಿರುದ್ರಾನುಷ್ಠಾನ ಯಾವ ಮಹಾಪಾಪಗಳನ್ನು ತೊಳೆದುಕೊಳ್ಳಲು ಮಾಡಿರುವುದು? ಹಾಗೂ ಈ ಅನುಷ್ಠಾನ ಯಾವ ಗ್ರಂಥಾಧಾರದ ಮೇಲೆ ಹಮ್ಮಿಕೊಂಡಿದ್ದು? ಏಕೆಂದರೆ ಪಾಪನಾಶ ರುದ್ರಾವರ್ತನೆಯಿಂದ, ಶತಪಾಪಗಳು ಶತರುದ್ರದಿಂದ, ಮಹಾಪಾಪಗಳು ಮಹಾರುದ್ರದಿಂದ, ಅತಿಪಾಪಗಳು ಅತಿರುದ್ರದಿಂದ ನಾಶವಾಗುತ್ತದೆಂದು ಗ್ರಂಥಗಳಲ್ಲಿ ಹೇಳಿದ್ದು, ಇವೆಲ್ಲಕ್ಕಿಂತ ಮೀರಿದ ಪಾಪ ಯಾರಿಂದ ನಡೆದಿದೆ? ಶಿಷ್ಯಕೋಟಿಯಿಂದಲೋ? ಸಮಾಜವನ್ನು ಮುನ್ನಡೆಸುವ ಯತಿಯಿಂದಲೋ?

ಹಿಂದಿನ ಗುರುಗಳ ಸಮಾಧಿಗಳನ್ನು ಮನಬಂದಲ್ಲಿ ಸ್ಥಳಾಂತರಿಸಬಹುದೇ? ಇದಕ್ಕೆ ಶಾಸ್ತ್ರಾಧಾರವಿದೆಯೇ?

ಪರಂಪರೆಯಿಂದ ಸಾಗಿಬಂದ ಎಲ್ಲ ಸಂಸ್ಕೃತ ಪಾಠಶಾಲೆಗಳನ್ನು ಮುಚ್ಚಿಸಿ ಗುರುಕುಲವನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಆಧುನಿಕ ಶಿಕ್ಷಣವನ್ನೂ ನೀಡದೆ, ಸಂಸ್ಕೃತ ವಿದ್ಯೆಯನ್ನೂ ಕಲಿಸದೆ ಅವರನ್ನು ತ್ರಿಶಂಕುಸ್ಥಿತಿಗೆ ತಳ್ಳಿದ್ದು ಯಾವ ಹಿತಕ್ಕಾಗಿ?

ರಾಜ್ಯದ ಒಬ್ಬ ಮುಖ್ಯಮಂತ್ರಿಯನ್ನು ರಾತ್ರೋರಾತ್ರಿ ಕೊಲ್ಲೂರು ಕ್ಷೇತ್ರಕ್ಕೆ ಕರೆಯಿಸಿ ಮಧ್ಯರಾತ್ರಿಯಲ್ಲಿ ಮೂಕಾಂಬಿಕೆಯ ಆಲಯದ ದ್ವಾರವನ್ನು ತೆಗೆಸಿ ಭೇಟಿಮಾಡಿದ್ದು ಯಾವ ಶಿಷ್ಯ ಸಂಪ್ರದಾಯ?

ಇತ್ತೀಚೆಗೆ ರಾಮಚಂದ್ರಾಪುರ ಮಠದಲ್ಲಿ ನಡೆದ ಮೀಟಿಂಗ್‌ಗಳಲ್ಲಿ ಕೇಂದ್ರ ಪರಿಷತ್/ಸೀಮಾ ಪರಿಷತ್‌ಗಳನ್ನು ವಿಸರ್ಜಿಸಿ, ಪೀಠತ್ಯಾಗ ಮಾಡಿ ಸೇವೆ ಬಯೋಜಿಸುವ ವಿಷಯಗಳೆಲ್ಲಾ ಗೋಪನೀಯವಾಗಿಟ್ಟರೂ ಗುಸು-ಗುಸು ಆಗುತ್ತಿರುವುದು ತಿಳಿದೇ ಇದೆಯಷ್ಟೇ?

ಶ್ರೀಗಳವರು ಗಿರಿನಗರ ಮಠದಲ್ಲಾಗಲೀ, ರಾಮಚಂದ್ರಾಪುರ ಮಠದಲ್ಲಾಗಲೀ, ಗೋಕರ್ಣದಲ್ಲಾಗಲೀ ಸ್ಥಿರವಾಗಿ ನೆಲೆನಿಲ್ಲದೇ ಇದ್ದರೆ, ನಮ್ಮ ಹವ್ಯಕ ಬಾಂಧವರು ಈ ಶ್ರೀಗಳನ್ನು ಹೇಗೆ ಸಂಪರ್ಕಿಸಬೇಕು? ಹವ್ಯಕ ಬಾಂಧವರು ಎಷ್ಟೋ ಜನ ಬಡವರಿದ್ದು ಅವರು ಇ-ಮೇಲ್ ಮುಖಾಂತರವೋ/ಮೊಬೈಲ್ ಮುಖಾಂತರವೋ ಈ ಪರಿವಾರದ ಇತೋಭ್ರಷ್ಟ ತತೋಭ್ರಷ್ಟರ ಮುಖಾಂತರ ಶ್ರೀಗಳನ್ನು ತಲುಪಲು ಸಾಧ್ಯವೇ?

ಗಿರಿನಗರ ಮಠಕ್ಕೆ ಈ ಶ್ರೀಗಳ ಪೀಠಾರೋಹಣದ ನಂತರ ಕೊಡುಗೆಯೇನು?

ಕೇವಿಮನೆ ಸಿರ್ಸಿಯ ದೇವಸ್ಥಾನದ ಅಭಿವೃದ್ಧಿಗೆ ಯಾವ ಮುನ್ನಡೆಯೋ?

ಬಂಬಾಗಿರಿ ಮಠದ ಹಸ್ತಾಂತರವಾದ ಆರು ವರ್ಷಗಳ ನಂತರವೂ ಅಭಿವೃದ್ಧಿಯಾಗದೇ ಇರಲು ಕಾರಣವೇನು?

ಮುಷ್ಟಿಭಿಕ್ಷೆಯಿಂದ ಆರಂಭಿಸಿ ಇಲ್ಲಿಯವರೆಗೆ ಹಮ್ಮಿಕೊಂಡಿರುವ ಯಾವ ಕಾರ್ಯಕ್ರಮಗಳಾದರೂ ಸುಸೂತ್ರವಾಗಿ ನಡೆದಿವೆಯೇ?

ಹೊಸನಗರ ಮಠದಲ್ಲಿ ಸಾಲವೂ ಇಲ್ಲ ಮೂಲವೂ ಇಲ್ಲ ಎಂದಾದಲ್ಲಿ ಅಡಿಕೆ ತೋಟ ನೆಲಸಮವಾಗುವ ತೀರ್ಮಾನಕ್ಕೆ ಬಂದರೆ ಆದಾಯದ ಮೂಲ ಇರದೇ ಹೋಗುವ ಹಾಗೆ ಮಾಡಿದ ನಿರ್ಧಾರದ ಹಿನ್ನೆಲೆ ಏನು?

ರಾಮಚಂದ್ರಾಪುರ ಮಠದ ಹೊಸನಗರದ ಅಭಿವೃದ್ಧಿ ನಾಲ್ಕು ವರ್ಷಗಳಿಂದ ಮೂಲ ಮಂತ್ರವಾಗಿದ್ದು ಮೂಲೆಗುಂಪಾಗಿದ್ದು ಯಾಕಾಗಿ?

ಪಾಠಶಾಲೆಗಳಿಗೆ ಯಾವುದೇ ಹಸಿರು ಮೇವಿನ ವ್ಯವಸ್ಥೆ ಮಾಡದೇ ಕಸಾಯಿಖಾನೆಗೆ ಹೋಗುವ ಪರಿಸ್ಥಿತಿ ಏಕೆ ನಿರ್ಮಾಣವಾಯಿತು?

ಮೊನ್ನೆ ಮೊನ್ನೆ ಮೈಸೂರಿನಲ್ಲಿ ನಡೆದ ಅಶೋಕ್ ಖೇಣಿಯ 0 ರ ಹುಟ್ಟುಹಬ್ಬಕ್ಕೆ ಉತ್ತರ ಭಾರತದಿಂದ ಬಂದು ಮತ್ತೆ ಮುಂಬಯಿಗೆ ಹೊರಟಿದ್ದು, ಅದಕ್ಕೊಂದು ಲಕ್ಷಲಕ್ಷ ವ್ಯಯಮಾಡಿದ್ದು ಯಾರ ಹಿತದೃಷ್ಟಿಯಿಂದ?

ಮೈಸೂರಿಗೆ ಆಗಮಿಸಿ ಪಾಕೋತ್ಸವದಲ್ಲಿ ಭಾಗವಹಿಸಿ ಮಕ್ಕಳ ಜೊತೆಗೆ, ಪದ್ಯಸವನ್ನು ಸುರಿಸಿದ್ದು ಸಂಪ್ರದಾಯವೇ?

ಇದೇ ಹವ್ಯಕ ಕುಲದಲ್ಲಿ (ಶ್ರೀಗಳ ಪೂರ್ವಾಶ್ರಮದ ಸಂಬಂಧಿಯೇ/ ಭಾವನೆಂಟ ಮೈದನೇ) ಧರ್ಮ ಭಾರತಿಯ ಸಂಪಾದಕನಾಗಿಯೂ, ಗುರುಕುಲದ ಪ್ರಾಚಾರ್ಯನಾಗಿಯೂ, ಎಲ್ಲ ಕಮಿಟಿಗಳ ಹಣಕಾಸಿನ ಪ್ರಮುಖನಾಗಿಯೂ ಇರಲು ಬೇರಾರೂ ಇರಲಿಲ್ಲವೇ? ಅಥವಾ ಶಿಷ್ಯರಲ್ಲಿ ನಂಬಿಕೆಯಿಲ್ಲವೇ? ಯಾವ ದೌರ್ಬಲ್ಯ/ಬಾಂಧವ್ಯ ಶ್ರೀಗಳನ್ನು ಕಾಡುತ್ತಿದೆ?

ಹೀಗಾಗಿ ಪರಿತ್ಯಾಗಿಯಾದರೂ ರಕ್ಷಣೆಗೋಸ್ಕರ ಸೇನೆಗಳೇಕೆ ಬೇಕು?

* ಗೋಸತ್ರ, ಶಿವಸತ್ರ, ರಾಮಸತ್ರ, ಶಿವರಾತ್ರಿ ನಿರ್ವಹಣೆ, ಕೋಟಿ ನೀರಾಜನ ಇತ್ಯಾದಿಗಳ ಕಮಿಟಿಗಳು ಇಲ್ಲಿಯವರೆಗೆ ಲೆಕ್ಕಾಚಾರವನ್ನು ಬಹುಶ್ರುತಗೊಳಿಸದೇ ಇರಲು ಕಾರಣ?

* ಸೀಮಾ ಪರಿಷತ್‌ಗಳು ಕಾಲಾಳುಗಳಂತೆ ಬರೀ ಹಣ/ಸುವಸ್ತು/ಭೂದಾನಗಳ ಕ್ರೋಢೀಕರಣಕ್ಕೋಸ್ಕರಕ್ಕಷ್ಟೇ ಬಳಸಲ್ಪಡಬಹುದೇ? ಅಥವಾ ಅವರು ಕ್ರೋಢೀಕರಿಸಿದ ಸಂಪನ್ಮೂಲಗಳ ಖರ್ಚು-ವೆಚ್ಚಗಳನ್ನು ತಿಳಿಯುವ ಹಾಗೂ ಸಮಾಜಕ್ಕೆ ತಿಳಿಸುವ ಅರ್ಹತೆ ಜವಾಬ್ದಾರಿ ಇವರಿಗಿಲ್ಲವೋ ಅಥವಾ ಈ ಶಿಷ್ಯರ ಅಗತ್ಯ ಮಠಕ್ಕಿಲ್ಲವೋ?

* ಶ್ರೀಗಳು ಕ್ರಿಸ್ತನಮನಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು ಯಾವ ಪುರುಷಾರ್ಥಕ್ಕಾಗಿ?

* ಕೇವಲ ಶ್ರೀಮಂತರಿಗೆ ಮಣೆಹಾಕುವ ಪರಿಪಾಠವೇಕೆ? ಪುರುಷರಿಗಿಂತ ಮಹಿಳೆಯರಲ್ಲಿ ಶ್ರೀಗಳಿಗೆ ಸಂಭಾಷಣೆ ಏಕೆ?

* ಗೋಕರ್ಣ ಮಹಾಬಲೇಶ್ವರನ ಸ್ವಾಧೀನ ಪ್ರಕರಣದ ಬಗ್ಗೆ ನಿಜಾಂಶವನ್ನು ಹವ್ಯಕರು ತಿಳಿದುಕೊಳ್ಳಬಾರದೇ? ಅದೀಗ ಯಾವ ಹಂತದಲ್ಲಿದೆ?

* ಶ್ರೀಗಳ ಆಪ್ತ ಪರಿವಾರದಲ್ಲಿ ದಿವಾಳಿ ಖೋರರೂ/ಪುಂಡರೂ/ಚಟಗಾರರೂ/ಭ್ರಷ್ಟಾಚಾರ ಮಾಡಿದವರೇ ಇರಲು ಕಾರಣವೇನು? ಅವರೆಲ್ಲ ಶ್ರೀಗಳಿಗೆ ಪ್ರಿಯರೇ?

* ಗೋಕರ್ಣದ ಸಮೀಪ ಅಶೋಕೆ-ಮೂಲ ಮಠದ ಜಾಗ - ಮಠದ ಹೆಸರಿಗೆ ಆಗದೇ ಹೇಗೆ ನೀಲನಕ್ಷೆ ತಯಾರಾಗುತ್ತದೆ? ಧನ ಸಂಗ್ರಹ ಹೇಗೆ ಆಗುತ್ತದೆ? ಕಾರಣ ಅಶೋಕೆ ಮೂಲ ಮಠದ ಜಾಗ ಬೇರೆಯವರದಾಗಿದ್ದು ಅದನ್ನು ಕೊಂಡುಕೊಳ್ಳುವ ಪ್ರಕ್ರಿಯೆ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಅದಲ್ಲದೇ ಅದು ದೈವರಾತಪುತ್ರರ ಜಾಗ. ಮಲ್ಲಿಕಾರ್ಜುನ ದೇವಸ್ಥಾನದ ಪ್ರಕರಣವೂ ವಿವಾದಗ್ರಸ್ತವಾಗಿದೆ.

* ಆತ್ಮಶ್ರಾದ್ಧವನ್ನು ಮಾಡಿಕೊಂಡ ಮೇಲೂ ಶ್ರೀಶ್ರೀಗಳು ಒಂದು ಕೋಟಿ ರೂ.ಗಳ ಮೊತ್ತದ ಜೀವವಿಮೆ ಮಾಡಿಸಿಕೊಂಡಿದ್ದು ಏಕೆ? ಈ ವಿಮೆಯ ವಾರಸುದಾರರು (ನಾಮಿನಿ) ಯಾರು?

* ಅರಿಷಡ್ವರ್ಗಗಳನ್ನು ಬಿಟ್ಟಮೇಲೂ ಚಾತುರ್ಮಾಸ್ಯದ ನಂತರ ನಡೆದ ಮಠದ ಸಭೆಯಲ್ಲಿ ರೌದ್ರಾವತಾರ ತಾಳಿ ಸಭೆ ಪರಿಸಮಾಪ್ತಿ ಮಾಡಿದ್ದೇಕೆ? ದುಃಖಪಟ್ಟಿದ್ದೇಕೆ? ಗುಪ್ತಸಭೆಯಲ್ಲಿ ನಡೆದಿದ್ದೇನು?


ಮಲ್ಲಿಕಾ ಜೊತೆ ಸ್ವಾಮಿ...

* ಇಷ್ಟಕ್ಕೂ ಮೀರಿ ಪೀಠತ್ಯಾಗ ಮಾಡುತ್ತೇನೆಂದು ಧರ್ಮಪೀಠದ ಮೇಲೆ ಆಸೀನರಾಗಿರುವಾಗಲೇ ಘೋಷಣೆ ಮಾಡಿದ ಮೇಲೆ ಇನ್ನೂ ಶ್ರೀಗಳು ಆ ಪೀಠದಲ್ಲಿ ಮುಂದುವರಿಯುತ್ತಿರುವುದು ಅದಾವ ಲಾಭಕ್ಕಾಗಿ?

ಸನಾತನ ಪರಂಪರೆಯಲ್ಲಿ ಬಂದ ನಮ್ಮ ಪೀಠದಲ್ಲಿ ಸರಿಯಾದ ಆಚಾರಸಂಪನ್ನ ವೇದಶಾಸ್ತ್ರಗಳನ್ನರಿತ ಯೋಗ್ಯರು ಪೀಠಕ್ಕೆ ಯತಿಗಳಾಗಬೇಕು. ಶಾಸ್ತ್ರಾಚಾರ ಮೀರಿದ ಸಂಪ್ರದಾಯಹೀನರು, ಗವ್ಯ ಮಾರಾಟ ಮಾಡುವ ಶೋಕಿಗಳು, ಅಪರಾಧಿಗಳನ್ನು ರಕ್ಷಿಸುವ ಪಾಷಂಡಿಗಳು ನಮ್ಮ ಪರಂಪರೆಗೆ ಕಳಂಕಪಾತ್ರರು. ಕಾಷಾಯ ಮಾತ್ರದಂಡಿಗಳನ್ನು, ಅದರ ಸೋಗಿನಲ್ಲಿ ಸಮಾಜವನ್ನು ಹಿಂಡುವವರನ್ನು ಧಿಕ್ಕರಿಸೋಣ. ನಿತ್ಯಾನುಷ್ಠಾನ ಶಾಸ್ತ್ರಸಂಪ್ರದಾಯಪರರನ್ನು ನಿಯೋಜಿಸೋಣ. ಭವ್ಯಪರಂಪರೆಯನ್ನು ರಕ್ಷಿಸೋಣ. ಈ ನಿಟ್ಟಿನಲ್ಲಿ ಗಮನ ಹರಿಸಿ ಮೌನಬಿಟ್ಟು ಅಂತರಂಗಬಹಿರಂಗ ವೇದಿಕೆಗೆ ಸಹಕರಿಸೋಣ. ಸ್ವಚ್ಛ ಯತಿವರೇಣ್ಯರನ್ನು ಬಯಸೋಣ. ಆಧ್ಯಾತ್ಮವನ್ನು ಗೌರವಿಸೋಣ. ಜ್ಞಾನಾರ್ಜನೆಗೆ ಪ್ರಯತ್ನಿಸೋಣ. ಯತಿಧರ್ಮ ಸಂಪ್ರದಾಯವನ್ನು ಪಾಲಿಸುವವರನ್ನು ಗೌರವಿಸೋಣ. ನಮ್ಮ ಸಮಾಜಕ್ಕೆ ಅಂಟಿದ ಕಳಂಕವನ್ನು ಕಿತ್ತೊಗೆಯೋಣ. ಸನಾತನ ಧರ್ಮವನ್ನು ಉಳಿಸಿ ಹವ್ಯಕ ಸಂಪ್ರದಾಯವನ್ನು ಬೆಳೆಸಿ ಶ್ರೇಯಸ್ಸನ್ನು ಹೊಂದೋಣ. ಮನಸ್ಸನ್ನು ರಂಜಿಸುವ ಮಾತಿನ ಮೋಡಿ ಬೇಡ. ಮನಸ್ಸನ್ನು ಅರಳಿಸುವ ತಪಶ್ಶಕ್ತಿ ಬೇಕು.

ಹವ್ಯಕ ಬಂಧುಗಳೆ, ಈ ಎಲ್ಲ ಪ್ರಶ್ನೆಗಳು ಯಾರೋ ಅನಾಮಿಕರದಲ್ಲ, ನಮ್ಮ ಇಡೀ ಹವ್ಯಕ ಸಮಾಜದಲ್ಲಿ ಈಗ ನಡೆಯುತ್ತಿರುವ ಚರ್ಚೆಯನ್ನು ಇಲ್ಲಿ ಕ್ರೋಢೀಕರಿಸಲಾಗಿದೆ, ಅಷ್ಟೆ. ಹವ್ಯಕ ಸಮುದಾಯದ ಕಾಳಜಿಯುಕ್ತ ಬಳಗವೇ ಈ ಪ್ರಶ್ನೆಗಳನ್ನು ಎತ್ತಿದೆ; ದಿನದಿನವೂ ಈ ಬಗ್ಗೆ ಚರ್ಚೆಯಾಗುತ್ತಿದೆ. ಆದರೆ ಇದಕ್ಕೆ ಉತ್ತರಿಸು ವವರು ಮಾತ್ರ ಪ್ರಶ್ನೆ ಎತ್ತಿದವರಿಗೆ ಬೆದರಿಕೆ ಹಾಕುವುದು, ಹಣಕಾಸಿನ ದಾಖಲೆ ಮುಚ್ಚಿಡುವುದು, ಮುಕ್ತ ಚರ್ಚೆಗೆ ಅವಕಾಶವನ್ನೇ ನೀಡದಿರುವುದು, ಮಠದಲ್ಲೇ ದುರ್ನಡತೆ, ದುರ್ವ್ಯವಹಾರ ತೋರಿದವರನ್ನು ಸಂರಕ್ಷಿಸುವುದು - ಇವೇ ಮುಂತಾದ ಕೃತ್ಯಗಳಲ್ಲಿ ತೊಡಗಿದರೆ ಪರಿಣಾಮ ಏನಾಗುತ್ತದೆ?

ಬನ್ನಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಪಾಲ್ಗೊಳ್ಳಿ. ಈ ಪ್ರಶ್ನೆಗಳಿಗೆ ಬಹಿರಂಗವಾಗೇ ಉತ್ತರಿಸಿ ಎಂದು ಶ್ರೀಗಳಲ್ಲಿ ಕೇಳಿಕೊಳ್ಳೋಣ. ಇಂದಿನ ಈ ಎಲ್ಲ ಅನುಮಾನಗಳನ್ನು ಇವತ್ತೇ ಬಗೆಹರಿಸಿಕೊಳ್ಳೋಣ. ಹಲವು ಅಕ್ರಮ-ಅನುಮಾನಗಳಿಗೆ ಕಾರಣವಾದ ಮಠದ ಹಿತ ರಕ್ಷಣೆಗೆ ಎಲ್ಲರೂ ಶ್ರಮಿಸೋಣ. ನೂತನ ಯತಿಗಳನ್ನು ಬಯಸೋಣ."

ಹೀಗೆ ತನ್ನ ಜನರೇ ತನ್ನನ್ನು ಪ್ರಶ್ನಿಸುತ್ತಿದ್ದರೆ, ಅವುಗಳಿಗೆ ಉತ್ತರ ನೀಡುವ ಬದಲಾಗಿ ಈ ರಾಘವೇಶ ಭಾರತಿ ಅದೆಲ್ಲೋ ತಲೆ ಮರೆಸಿಕೊಂಡು ಕೂತಿದ್ದಾನೆ. ಇವನು ಒಂದು ಸಮುದಾಯದ ಧಾರ್ಮಿಕ ನಾಯಕನೇ?

ಪಾಪ, ಹವ್ಯಕರಿಗೇಕೆ ಇಂತಹ ದುರಾದೃಷ್ಟ ಎದುರಾಯಿತು?

● ಕುಮಾರ್ ಬುರಡಿಕಟ್ಟಿ


ಜಗ್ಗೇಶಿಗೆ ಮತ್ತೆ ಸೈಟು ಬೇಕಂತೆ?



ಪದೇಪದೇ ಫಜೀತಿಗೆ ಬಿದ್ದೇ ಸುದ್ದಿಯಾಗುವ ನವರಸನಾಯಕ ಜಗ್ಗೇಶ್ ಈಗ ಮತ್ತೊಂದು ಯಡವಟ್ಟಿಗೆ ಕೈಹಾಕಿದ್ದಾರೆ. ಅದು ತಥಾಗತ ಸಿನಿಮಾ ಕ್ಯಾತೆಯಾಗಲಿ, ಪಕ್ಕಾ ಜಗ್ಗೇಶ್ ಬ್ರಾಂಡಿನ ಸ್ಟ್ರೀಟ್ ಫೈಟಿಂಗಾಗಲಿ ಅಲ್ಲದೇ ಈ ಬಾರಿ ಸೈಟಿಗಾಗಿ ಶುರುಹಚ್ಚಿಕೊಂಡ ದೊಂಬರಾಟ.

ತಾನೊಬ್ಬ ಚಲನಚಿತ್ರ ನಟನೆಂದೂ, ಸಾಲದ್ದಕ್ಕೆ ತುರುವೇಕೆರೆಯ ಮಾಜಿ ಶಾಸಕ ಕೂಡಾ ಆಗಿರುವುದರಿಂದ ತನಗೆ ಮುಖ್ಯಮಂತ್ರಿಯವರ ವಿವೇಚನಾ ಕೋಟಾದ ಅಡಿಯಲ್ಲಿ ಭಾರೀ ಗಾತ್ರದ ಸೈಟೊಂದನ್ನು ಮಂಜೂರು ಮಾಡುವಂತೆ ಜಗ್ಗೇಶಿ ಮಹಾಶಯರು ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಮನವಿ ಕೊಟ್ಟಿದ್ದಾರೆ!


ಜಗ್ಗೇಶ್ ಕೇವಲ ಬಿಡಿಎ ಸೈಟು ಕೇಳಿ ಮುಖ್ಯಮಂತ್ರಿಗೆ ಮನವಿ ಕೊಟ್ಟಿದ್ದಾಗಲಿ, ಅದನ್ನು ಮನ್ನಿಸಿ ಯಡ್ಡಿ ಸೈಟು ಕರುಣಿಸಿದ್ದಾಗಲಿ ದೊಡ್ಡ ಸುದ್ದಿಯೇನಲ್ಲ. ಎಂಥೆಂಥವರಿಗೋ ಸೈಟು ಕೊಟ್ಟಿರುವಾಗ ಕನ್ನಡಿಗರ ಚಾರ್ಲಿ ಚಾಪ್ಲಿನ್ ಜಗ್ಗೇಶ್ ಸೈಟು ಹೊಡೆದರೆ ಯಾರಿಗೇನು ಕಷ್ಟ? ಆದರೆ ವಿಷ್ಯ ಅದಲ್ಲ.



ಜಗ್ಗೇಶಿ ಈಗಾಗಲೇ ಮುಖ್ಯಮಂತ್ರಿಗಳ ವಿವೇಚನಾ ಕೋಟಾದ ಅಡಿಯಲ್ಲಿ ಸೈಟು ಪಡೆದಿದ್ದಾಗಿದೆ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಕಂಡಕಂಡ ಮಹಿಳಾ ಮಣಿಗಳಿಗೆಲ್ಲ ಬೆಂಗಳೂರಿನ ಅತ್ಯಂತ ದುಬಾರಿ ಏರಿಯಾ ಎಂಬ ಹೆಗ್ಗಳಿಕೆಯ ಎಚ್‌ಎಸ್‌ಆರ್ ಲೇಔಟಿನಲ್ಲಿ ತಲಾ ಒಂದೊಂದು ಸೈಟಿನಂತೆ ಉಂಬಳಿ ಬರೆದು ಕೊಟ್ಟರಲ್ಲ; ಅವರ ಮಧ್ಯೆ ಜಗ್ಗೇಶ್ ಹೆಸರೂ ಇತ್ತು. ಅವತ್ತು ಮುಖ್ಯಮಂತ್ರಿ ಕೃಷ್ಣರಿಂದ ಎರಡು ಕೋಟಿ ರೂಪಾಯಿ ಬೆಲೆಬಾಳುವ ಭರ್ಜರಿ ಸೈಟು ಹೊಡೆದ ಜಗ್ಗೇಶಿ ಅದು ದಕ್ಕಿದ ಮರುಕ್ಷಣದಲ್ಲೇ ಯಾರೋ ಮಾರ್ವಾಡಿಗೆ ಮಾರಿ ಹಾಕಿದ್ದೂ ಆಯ್ತು.

ಅದನ್ನು ಜಗ್ಗೇಶಿ ಕರ್ಮವೆನ್ನಿ, ಎಸ್ಸೆಂ ಕೃಷ್ಣರ ಧರ್ಮವೆನ್ನಿ-ಕನಿಷ್ಠ ಸೈಟು ಕೊಟ್ಟ ಕಾರಣಕ್ಕಾದರೂ ಜಗ್ಗೇಶಿ ಕಾಂಗ್ರೆಸ್ಸಿಗೆ ನಿಷ್ಠರಾಗಿರುತ್ತಾರೆಂದು ಗುರು ಡೀಕೇಶಿ ಲೆಕ್ಕ ಹಾಕಿದ್ದರು. ಜೊತೆಗೆ ತುರುವೇಕೆರೆಯ ಟಿಕೆಟ್ಟನ್ನೂ ಕಾಂಗ್ರೆಸ್ ಕರುಣಿಸಿತು. ಗೆದ್ದು ಜಗ್ಗೇಶಿ ಎಮ್ಮೆಲ್ಲೇ ಯಾದರಾದರೂ ಕಾಂಗ್ರೆಸ್ ಋಣಕ್ಕೆ ಬರಕತ್ತಾಗಲಿಲ್ಲ. ಗೆದ್ದ ವರ್ಷಕ್ಕೆ ಮೊದಲೇ ಕಾಂಗ್ರೆಸ್ಸಿಗೆ ಕೈಕೊಟ್ಟು ಬಿಜೆಪಿಗೆ ಬಿಕರಿಯಾದ ಜಗ್ಗೇಶಿಗೆ ಹೊಸ ಗಾಡ್‌ಫಾದರ್ ಆರ್. ಅಶೋಕ್ ಸಾರಿಗೆ ಸಂಸ್ಥೆಯ ಉಪಾಧ್ಯಕ್ಷಗಿರಿಯ ಉಡುಗೊರೆ ಕೊಟ್ಟಿದ್ದು ಕೂಡ ಭರ್ಜರಿಯಾಗೇ ಇತ್ತು. ಗುರು ಅಶೋಕ್ ಮತ್ತು ಜಗ್ಗೇಶಿ ಸೇರಿಕೊಂಡೇ ತುರುವೇಕೆರೆ ಉಪಚುನಾವಣೆಯಲ್ಲಿ ಕತ್ತಿ ಫೈಟ್ ಮಾಡಿದರಾದರೂ ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪನ ಮುಂದೆ ಆಟ ನಡೆಯಲೇ ಇಲ್ಲ.

ಇರಲಿ, ತುರುವೇಕೆರೆ ಸೋಲಿಗೆ ಜಗ್ಗೇಶ್ ಒಬ್ಬರನ್ನೇ ಹೊಣೆ ಮಾಡಿ ಏನು ಲಾಭ? ಬಿಜೆಪಿಗಾಗಿ ಎಮ್ಮೆಲ್ಲೇಗಿರಿಯನ್ನೇ ಬಲಿಕೊಟ್ಟಿದ್ದಕ್ಕಾಗಿ ಯಕಶ್ಚಿತ್ ಸಾರಿಗೆ ಸಂಸ್ಥೆ ಉಪಾಧ್ಯಕ್ಷಗಿರಿ ಯಾವ ಲೆಕ್ಕ? ಈಗ ಬಿಡಿಎ ಸೈಟು ಕೊಡಿ ಮತ್ತೆ? ಎಂದು ಚೌಕಾಶಿಗಿಳಿದ ಜಗ್ಗೇಶಿ ಸೈಟಿಗೆ ಅರ್ಜಿ ಹಾಕಿದ್ದಾರೆ. ಮೊನ್ನೆ ಅಂದರೆ ಆಗಸ್ಟ್ ನಾಲ್ಕರಂದು ನೇರವಾಗಿ ಮುಖ್ಯಮಂತ್ರಿ ಯಡ್ಡಿಗೇ ವಿಶಿಷ್ಟ ಶೈಲಿಯಲ್ಲಿ ಪತ್ರ ಬರೆದಿದ್ದಾರೆ.


CM/1429/SIP/09
23468971
04-08-09
50x80

ಜಗ್ಗೇಶ್ ಬಿನ್ ಶಿವಲಿಂಗೇಗೌಡ, ಕೇರಾಫ್ ನಂಜಮ್ಮ ಕಲ್ಯಾಣ ಮಂಟಪ, ಮಾಯಸಂದ್ರ, ತುರುವೇಕೆರೆ, ತುಮಕೂರು ಜಿಲ್ಲೆ ಎಂಬ ವಿಳಾಸ ಕೊಟ್ಟು ತಾನು ಮಾಜಿ ಶಾಸಕ ಮಾತ್ರವಲ್ಲದೇ ಚಲನಚಿತ್ರ ನಟ ಕೂಡ ಆಗಿರುವುದರಿಂದ, ತನಗೆ ಮುಖ್ಯಮಂತ್ರಿಗಳ ವಿವೇಚನಾ ಕೋಟಾದ ಅಡಿಯಲ್ಲಿ ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟಿನಲ್ಲಿ **50x80** ಅಳತೆಯ ಭರ್ಜರಿ ಸೈಟೇ ಬೇಕೆಂದು ಜಗ್ಗೇಶ್ ಅಲವತ್ತುಕೊಂಡಿದ್ದಾರೆ. ಮನವಿ ಸ್ವೀಕರಿಸಿದ ಯಡ್ಡಿ ಅದನ್ನು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ರವಾನಿಸಿದ್ದಾರೆ.

ಯಾರ್ಯಾರಿಗೋ ಸೈಟು ಬರೆದುಕೊಟ್ಟ ಯಡ್ಡಿಗೆ ಜಗ್ಗೇಶಿಗೊಂದು ಸೈಟು ಕೊಡುವುದು ಯಾವ ಮಹಾ? ಆದರೆ ಯಡವಟ್ಟಿರುವುದು ಜಗ್ಗೇಶಿ ಜಾತಕದಲ್ಲಿ. ಈಗಾಗಲೇ ಒಮ್ಮೆ 'ಜಿ' ಕ್ಯಾಟಗರಿ ಸೈಟು ಪಡೆದವನಿಗೆ ಮತ್ತೊಮ್ಮೆ ಯಾವ ಆಧಾರದ ಮೇಲೆ ಯಡ್ಡಿ ಸೈಟು ಕೊಡುತ್ತಾರೆ? ಒಬ್ಬನೇ ವ್ಯಕ್ತಿಗೆ ಪದೇಪದೇ 'ಜಿ' ಕ್ಯಾಟಗರಿ ಸೈಟು ಕೊಟ್ಟರೆ ಉಳಿದವರು ಸುಮ್ಮನಿರುತ್ತಾರಾ?


ತಮಾಷೆಯೆಂದರೆ ಜಗ್ಗೇಶಿ ತಾನು ಸದ್ಯ ಸಾರಿಗೆ ಸಂಸ್ಥೆಗೆ ಉಪಾಧ್ಯಕ್ಷನೆಂಬುದನ್ನೇ ಮನವಿಯಲ್ಲಿ ಮುಚ್ಚಿಡುತ್ತಾರೆ. ಹಿಂದೆ ಎಸ್ಸೆಂ ಕೃಷ್ಣರ ಕಾಲದಲ್ಲಿ ಬಿಡಿಎ ಸೈಟು ಪಡೆದದ್ದನ್ನೂ ಮರೆಮಾಚುತ್ತಾರೆ. ತನ್ನ ಬೆಂಗಳೂರಿನ ವಿಳಾಸ, ಈಗಾಗಲೇ ಡಾಲರ್ಸ್ ಕಾಲನಿಯಲ್ಲಿ ಖರೀದಿಸಿದ ಸೈಟಿನ ವಿವರ, ಪತ್ನಿ ಹೆಸರಲ್ಲಿ ಶ್ರೀರಾಂಪುರದಲ್ಲಿರುವ ಆಸ್ತಿ ಎಲ್ಲವನ್ನೂ ಅದುಮಿಟ್ಟು ಸೈಟಿಗಾಗಿ ಅಂಗಲಾಚುತ್ತಿರುವ ಜಗ್ಗೇಶ್‌ಗೆ ಮುಖ್ಯಮಂತ್ರಿ ಸೈಟು ಕರುಣಿಸಬಹುದು. ಕನಿಷ್ಠ ಅವರ ಪತ್ನಿಯ ಹೆಸರಿಗಾದರೂ ಮಂಜೂರು ಮಾಡಬಹುದು.

ಪ್ರಶ್ನೆಯೆಂದರೆ, ಅದು ಅಪರೇಷನ್ ಕಮಲದ ಬಾಬತ್ತಾ? ಅಥವಾ ಯಡ್ಡಿಯ ಖಾಸಗಿ ಭಕ್ಷೀಸಾ?

ಜಗ್ಗೇಶ್ ಥರದ ಪ್ರತಿಭಾವಂತ ನಟನೊಬ್ಬನಿಗೆ ಮುಖ್ಯಮಂತ್ರಿಯ ಮುಂದೆ ನಿಂತು ಸೈಟಿಗಾಗಿ ಅಂಗಲಾಚುವ ದುರ್ಗತಿ ಬೇಕಿತ್ತಾ?

● ರಾ.ಸೋ.

ಎಂಇಎಸ್ ವಿದ್ಯಾಸಂಸ್ಥೆಯಲ್ಲೊಬ್ಬ ಧೂರ್ತ ವೆಂಕಟರೆಡ್ಡಿ


ವೆಂಕಟರೆಡ್ಡಿ

ಅದು ನೂರಾರು ವಿದ್ಯಾಕಾಂಕ್ಷಿಗಳು ಓದುವ ದೊಡ್ಡ ವಿದ್ಯಾಸಂಸ್ಥೆ. ಅಲ್ಲಿನ ಬಡ ವಿದ್ಯಾರ್ಥಿಗಳನ್ನು ಶೋಷಿಸುವ, ದಲಿತ ವಿದ್ಯಾರ್ಥಿಗಳಿಗೆ ಅನ್ಯಾಯವೆಸಗುವ, ಮುಗ್ಧ ಹೆಣ್ಣು ಮಕ್ಕಳ ಮೇಲೆ ವಕ್ರದೃಷ್ಟಿ ಬೀರುವ, ಸಂಸ್ಥೆಯ ಮಹಿಳಾ ಸಿಬ್ಬಂದಿಯನ್ನು ಪೀಡಿಸುವ ಒಬ್ಬ ಕೀಚಕ ಅಧ್ಯಕ್ಷ.... ಇವೆಲ್ಲ ಯಾವುದೋ ಸಿನೆಮಾದ ಕಮರ್ಷಿಯಲ್ ಎಲಿಮೆಂಟುಗಳಲ್ಲ, ಕಲ್ಪಿತ ಕಥೆಯ ಎಳೆಯೂ ಅಲ್ಲ. ಇದು ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ಎಂ.ಇ.ಎಸ್ ವಿದ್ಯಾಸಂಸ್ಥೆಯಲ್ಲಿ ನಡೆಯುತ್ತಿರುವ ನಿತ್ಯ ನರಕದ ವಿವರಗಳು.

ಜಗತ್ ವಂಚಕ ರವಿಶಂಕರ ಗುರೂಜಿಯಿಂದ ಹಿಡಿದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯ ತನಕ ಬಹಳಷ್ಟು ಜನ ಖ್ಯಾತರು, ಕುಖ್ಯಾತರೂ ಓದಿದ ವಿದ್ಯಾಸಂಸ್ಥೆ ಮಾಡೆಲ್ ಎಜುಕೇಷನ್ ಸೊಸೈಟಿ (ಎಂ.ಇ.ಎಸ್). ಬೆಂಗಳೂರಿನ ಬಿ.ಟಿ.ಎಂ. ಎರಡನೇ ಹಂತದಲ್ಲಿರುವ ಈ ಕಾಲೇಜಿಗೆ ಕಳೆದ ಏಳೆಂಟು ವರ್ಷಗಳಿಂದ ಬಕಾಸುರನಂತೆ ವಕ್ಕರಿಸಿರುವಾತನೇ ಆ ಸಂಸ್ಥೆಯ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಟಿ.ಆರ್. ವೆಂಕಟರೆಡ್ಡಿ.


ಚಿಕ್ಕನಾಗಯ್ಯ

1962ರಲ್ಲಿ ಆರಂಭಗೊಂಡ ಎಂ.ಇ.ಎಸ್‌ನಲ್ಲಿ ಶನಿಯಂತೆ ವಕ್ಕರಿಸಿಕೊಂಡಿರುವ ರೆಡ್ಡಿಯ ಹಿನ್ನೆಲೆಯನ್ನು ಕೆದಕುತ್ತಾ ಹೋದರೆ, ಅದೇ ಒಂದು ದೊಡ್ಡ ಪುರಾಣವಾಗುತ್ತೆ. ಆನೇಕಲ್ ತಾಲೂಕಿನ ಚಂದಾಪುರದ ಬಳಿಯ ಹಳ್ಳಿಯವನಾದ ಈತ ಕಾಲೇಜು ಓದಲು ಬೆಂಗಳೂರಿಗೆ ಬಂದಿದ್ದರೂ ಓದುವುದನ್ನು ಬಿಟ್ಟು ಕಲಿತದ್ದೆಲ್ಲಾ ಅಡ್ನಾಡಿ ಕೆಲಸಗಳನ್ನೇ. ಆಗ ಈತ ಓದುತ್ತಿದ್ದ ಬಿಇಎಸ್ ಕಾಲೇಜಿನಲ್ಲಿ ಎಲೆಕ್ಷನ್‌ಗೆ ನಿಂತು, ಗೋಲ್‌ಮಾಲ್ ಮಾಡಲು ಹೋಗಿ ಆ ಕಾಲಕ್ಕೇ ಎದುರಾಳಿಗಳಿಂದ ಸಮಾ ಒದೆ ತಿಂದಿದ್ದ. ಎಲ್‌ಎಲ್‌ಬಿ ಡ್ರಾಪ್ ಔಟ್ ಆದ. ನಂತರ ಒಂದಷ್ಟು ವರ್ಷ ಅಲ್ಲೀ ಇಲ್ಲೀ ಅಂಡಲೆದು, ಕೊನೆಗೆ ಬಂದು ಠಿಕಾಣಿ ಹಾಕಿದ್ದು ಎಂಇಎಸ್ ಕಾಲೇಜಿನಲ್ಲಿ.




ಆ ಹೊತ್ತಿಗಾಗಲೇ ರಿಯಲ್ ಎಸ್ಟೇಟ್‌ನಲ್ಲಿ ಒಂದಷ್ಟು ದುಡ್ಡು ಕೂಡಿಟ್ಟಿದ್ದ ಇವನನ್ನು ಅಂದಿನ ಅಧ್ಯಕ್ಷ ಎಲ್.ಸಿ. ಅಶೋಕ್ ಯಾತಕ್ಕಾದರೂ ಇರಲಿ ಎಂದು ಸಂಸ್ಥೆಯ ಸದಸ್ಯತ್ವ ನೀಡಿದ್ದರು. ಸದಸ್ಯತ್ವ ಪಡೆದ ರೆಡ್ಡಿ ಅದೇ ವರ್ಷ ಆಡಳಿತ ಮಂಡಳಿ ಚುನಾವಣೆಗೆ ನಿಂತು ಗೆದ್ದ. ಆದರೆ 'ಹೆಗ್ಗಣವೊಂದು ಒಳಬಂತು' ಎನ್ನುವ ಅರಿವು ಆಡಳಿತ ಮಂಡಳಿಗೆ ಮೂಡುವ ವೇಳೆಗೆ ರೆಡ್ಡಿ ತನ್ನ ಅಪ್ಪಾವತಾರವನ್ನು ಪ್ರದರ್ಶಿಸಲು ಆರಂಭಿಸಿದ್ದ. ಆಗಿನ ಅಧ್ಯಕ್ಷ ರಾಮರಾಜು ಅವರ ತಲೆ ಸವರಿದವನೇ ಅದೇ ವರ್ಷ ಶಿಕ್ಷಣ ಸಮಿತಿಯ ಅಧ್ಯಕ್ಷನೂ ಆಗಿ ಕಾಲೇಜಿನಲ್ಲಿಯೇ ಭೂರಿ ಭೋಜನಕ್ಕೆ ಪದ್ಮಾಸನ ಹಾಕಿ ಕುಳಿತುಬಿಟ್ಟ.

ಹೆಣ್ಣುಬಾಕ

ತನ್ನೆಲ್ಲಾ ಅವ್ಯವಹಾರಕ್ಕೆ, ವಸೂಲಿ ದಂಧೆಗೆ ಎಂ.ಇ.ಎಸ್ ಕಚೇರಿಯನ್ನೇ ಕಾರಸ್ಥಾನವನ್ನಾಗಿ ಮಾಡಿಕೊಂಡಿರುವ ರೆಡ್ಡಿ ಬೆಳಗ್ಗೆ 9 ಗಂಟೆಗೇ ಬಂದು ಆಫೀಸಿನಲ್ಲಿ ವಕ್ಕರಿಸಿದರೆ, ಅರ್ಧ ರಾತ್ರಿಯಾದರೂ ಕಾಲೇಜಿನ ಆವರಣದಿಂದ ತೊಲಗುವುದಿಲ್ಲ. ಕಚೇರಿಗೆ ಬರುವಾಗಲೇ ಕಂಠಮಟ್ಟ ಕುಡಿದು ಬರುವ ಈತ ಯಾವುದೋ ನೆಪವೊಡ್ಡಿ ಕಚೇರಿಯಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳನ್ನು ಕರೆದು ಅವರೊಂದಿಗೆ ಅಸಭ್ಯವಾಗಿ ವರ್ತಿಸುವುದನ್ನು ಖಯಾಲಿ ಮಾಡಿಕೊಂಡಿದ್ದಾನೆ. ಅಕಸ್ಮಾತ್ ಮಹಿಳೆಯರು ಈತನ ಚೇಷ್ಟೆಯ ವಿರುದ್ಧ ತಿರುಗಿ ಬಿದ್ದರೆ ಅವರಿಗೆ ಕೂಡಲೇ ಸಂಸ್ಥೆಯಿಂದ ಗೇಟ್‌ಪಾಸ್ ಗ್ಯಾರಂಟಿ. ಎಂಇಎಸ್ ಜಯನಗರ ಶಾಖೆಯಲ್ಲಿ ಬಹಳ ವರ್ಷದಿಂದ ಕೆಲಸ ಮಾಡಿಕೊಂಡಿದ್ದ ಸುಜಾತ (ಹೆಸರು ಬದಲಿಸಿದೆ) ಎಂಬ ಹೆಣ್ಣು ಮಗಳು ಈ ಕಾರಣಕ್ಕೇ ಯಾರಿಗೂ ಹೇಳದೆ ಕೇಳದೆ ನೌಕರಿ ಬಿಟ್ಟು ಹೋದಳು.

ಇನ್ನು ಸಂಜೆಯಾದ ನಂತರ ಸಂಸ್ಥೆಯ ನೌಕರರೆಲ್ಲ ಹೊರಟುಹೋದ ಮೇಲೆ ಹೊರಗಿನಿಂದ ಒಂದಷ್ಟು ಹೆಂಗಸರು ಕಚೇರಿಯಲ್ಲಿ ಪ್ರತ್ಯಕ್ಷವಾಗುತ್ತಾರೆ. ಸಂಸ್ಥೆಯ ಕಾರ್ಯದರ್ಶಿಯವರ ಕೋಣೆಯಲ್ಲಿ ನಡುರಾತ್ರಿಯ ತನಕ ಅಲ್ಲೇ ಕುಡಿಯುತ್ತಾ, ಹೆಂಗಸರೊಂದಿಗೆ 'ಐಟಂಸಾಂಗ್'ನಲ್ಲಿ ತೊಡಗುವುದು ರೆಡ್ಡಿಗೆ ಮಾಮೂಲಿಯಾಗಿಬಿಟ್ಟಿದೆ.

ಇತ್ತೀಚೆಗೆ ಭಾಗ್ಯಶ್ರೀ, ಅಶ್ವಿನಿ ಮತ್ತು ಸಪ್ನ ಎಂಬ ಮೂವರು ವಿದ್ಯಾರ್ಥಿನಿಯರನ್ನು ಕಾರಣವಿಲ್ಲದೆ ಕರೆಸಿ ಅವರೊಂದಿಗೆ ಈ ರೆಡ್ಡಿ ಅಸಭ್ಯವಾಗಿ ವರ್ತಿಸಿದ್ದ. ಪಿಯುಸಿ ಲೆವೆಲ್ಲಿನ ಆ ವಿದ್ಯಾರ್ಥಿನಿಯರು ಆತನಿಗೆ ಕಪಾಳಮೋಕ್ಷ ಮಾಡಿದ್ದಲ್ಲದೆ, ಪೋಷಕರೊಡನೆ ಬಂದು ಈತನ ವಿರುದ್ಧ ದೂರನ್ನೂ ನೀಡಿದ್ದಾರೆ. ಈ ಹೆಣ್ಣುಮಕ್ಕಳಿಗೆ ಸಂಸ್ಥೆಯ ಪ್ರಿನ್ಸಿಪಾಲ್ ಮಂಜುನಾಥ ಕುಮ್ಮಕ್ಕು ನೀಡಿದ್ದಾರೆ ಎಂದು



ಭಾವಿಸಿದ ರೆಡ್ಡಿ ಅವರನ್ನೇ ಕೆಲಸದಿಂದ ತೆಗೆಯಲು ಹೋಗಿ ಈಗ ಆತನೇ ಸಂಸ್ಥೆಯಿಂದ ಹೊರಬಿದ್ದು ಪರಪ್ಪನ ಅಗ್ರಹಾರ ಸೇರುವ ಸನ್ನಿವೇಶ ಸೃಷ್ಟಿಸಿಕೊಂಡಿದ್ದಾನೆ.

ಬಡ ವಿದ್ಯಾರ್ಥಿಗಳ ಹೆಸರಲ್ಲಿ ವಸೂಲಿ

ಹಣಕ್ಕೋಸ್ಕರ ಎಂಥ ಹೀನ ಕೃತ್ಯವನ್ನು ಮಾಡಲೂ ಹಿಂಜರಿಯದ ರೆಡ್ಡಿ ಅದೆಷ್ಟು ಕೀಳುಮಟ್ಟಕ್ಕೆ ಇಳಿದಿದ್ದಾನೆ ಗೊತ್ತೆ? 'ಪೂರ್ ಸ್ಟೂಡೆಂಟ್ಸ್ ವೆಲ್‌ಫೇರ್ ಫಂಡ್' ಎಂಬ ಹೊಸ ಸ್ಕೀಂ ಆರಂಭಿಸಿ, ಹೆಚ್.ಎಸ್.ಆರ್. ಲೇಔಟ್‌ನ ಬ್ಯಾಂಕಿನಲ್ಲೊಂದು ಖಾತೆ ತೆರೆದು ಸ್ವತಃ ತನ್ನ ಹೆಸರಿಗೇ ಹಣ ಜಮೆ ಮಾಡಿಕೊಂಡಿದ್ದಾನೆ. ದಾನಿಗಳಿಗೆ ನಕಲಿ ರಶೀದಿ ಕೊಟ್ಟು ಬಡ ವಿದ್ಯಾರ್ಥಿಗಳ ಹೆಸರಿನಲ್ಲಿ ವಸೂಲಿ ಮಾಡಿದ ಹಣವನ್ನು ರೆಡ್ಡಿ ಯಾವ ಬಡ ವಿದ್ಯಾರ್ಥಿಗಳಿಗೂ ಕೊಡದೆ ತನ್ನ ಸ್ವಂತಕ್ಕೆ ಬಳಸಿಕೊಂಡಿದ್ದಾನೆ. ಇಷ್ಟಕ್ಕೂ ಸುಮ್ಮನಾಗದ ರೆಡ್ಡಿ ಮತ್ತೊಂದು ಡೂಪ್ಲಿಕೇಟ್ ರಸೀದಿ ಪುಸ್ತಕವನ್ನಿಟ್ಟು ಕೊಂಡು ಎಂಇಎಸ್ ಪ್ರೈಮರಿ ಶಾಲಾ ಮಕ್ಕಳ ಪೋಷಕರಿಂದಲೂ ಹಣ ಕಿತ್ತಿದ್ದಾನೆ.

ರೆಡ್ಡಿಯು ತನ್ನ ಅವ್ಯವಹಾರಕ್ಕೆ ವಿಶೇಷ ಮಾರ್ಗಗಳನ್ನು ಸೃಷ್ಟಿಸಿಕೊಂಡಿದ್ದಾನೆಂದರೆ ಬಿ.ಟಿ.ಎಂ ಮತ್ತು ಜಯನಗರದಲ್ಲಿರುವ ಎಂ.ಇ.ಎಸ್‌ನ ಎಲ್ಲ ಅಂಗಸಂಸ್ಥೆಗಳಿಂದ ಲಕ್ಷಾಂತರ ರೂಪಾಯಿ ಶುಲ್ಕ ಪಾವತಿಸಿ ಕೊಂಡಿದ್ದಾನೆ. ಇದಕ್ಕಾಗಿ ಆತ ಎರಡೆರಡು ರಸೀತಿ ಪುಸ್ತಕಗಳನ್ನು ಬಳಸಿರುವುದು ಕೂಡಾ ಈಗ ಬಹಿರಂಗವಾಗಿದೆ.

ದಲಿತ ವಿದ್ಯಾರ್ಥಿಗಳಿಗೂ ವಂಚನೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರದಿಂದ ಅನುದಾನ ಪಡೆದಿದ್ದರೂ ಸಹ ಅಲ್ಲಿನ ದಲಿತ ಹುಡುಗರಿಂದ ತಲಾ ಐದು ಸಾವಿರ ರೂಪಾಯಿಗಳ ಸಂಪೂರ್ಣ ಶುಲ್ಕ ಕಟ್ಟಿಸಿಕೊಂಡಿರುವ ರೆಡ್ಡಿಯ ವಿರುದ್ಧ ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳೇ ದೂರು ನೀಡಿದ್ದಾರೆ.


ಇನ್ನು ಜಯನಗರದಲ್ಲಿರುವ ಎಂ.ಇ.ಎಸ್ ಹೈಸ್ಕೂಲ್‌ನಲ್ಲಿ ಶಿಕ್ಷಕರ ನೇಮಕಾತಿಯಲ್ಲೂ ಅನ್ಯಾಯವೆಸಗಿರುವ ರೆಡ್ಡಿ ಎರಡು ಮೂರು ಲಕ್ಷ ರೂಪಾಯಿಗಳ ಲಂಚ ಪಡೆದು, ಅರ್ಹತೆ ಇಲ್ಲದ ಮೂವರನ್ನು ಶಿಕ್ಷಕರನ್ನಾಗಿ ಕೆಲಸಕ್ಕೆ ತೆಗೆದುಕೊಂಡಿದ್ದಾನೆ.

ರೆಡ್ಡಿ ಬರೀ ಲಕ್ಷಗಳಲ್ಲಿ ವಂಚಿಸುವವನಲ್ಲ, ಚಿಲ್ಲರೆ ಕಾಸು ಕದಿಯುವುದರಲ್ಲೂ ಈತ ಪಳಗಿದವನೇ. ಕಾಲೇಜಿನ ಕಟ್ಟಡ ಕಾಮಗಾರಿಗೆ ತಂದ ಸಿಮೆಂಟು ಮೂಟೆಗಳನ್ನು ರಾತ್ರೋ ರಾತ್ರಿ ತನ್ನ ಮನೆಗೆ ಸಾಗಿಸುವುದು, ಹಳೆಯ ವಾಟರ್ ಟ್ಯಾಂಕ್ ಅನ್ನು ನೆಲಸಮ ಮಾಡಿದಾಗ ಅದರಲ್ಲಿ ಸಿಕ್ಕ ಕಬ್ಬಿಣವನ್ನೂ ಮಾರಿಕೊಳ್ಳುವುದು, ಕಚೇರಿಗೆಂದು ಯಾವುದೇ ವಸ್ತು ಖರೀದಿಸಿದರೂ ಅದರಲ್ಲಿ ಕಮಿಷನ್ ಹೊಡೆಯುವುದು ಈತನ ಉಪಕಸುಬು.

ಈ ರೆಡ್ಡಿ ಅದೆಂಥ ಸರ್ವಾಧಿಕಾರಿಯೆಂದರೆ, ಹಲವಾರು ವರ್ಷಗಳಿಂದ ಕಾಲೇಜಿನ ಪ್ರಿನ್ಸಿಪಾಲರಾಗಿದ್ದು ವಿದ್ಯಾರ್ಥಿಗಳ ಮತ್ತು ಸಿಬ್ಬಂದಿಗಳ ಪ್ರೀತಿಗೆ ಪಾತ್ರರಾಗಿದ್ದ ಆರಾಧ್ಯ ಎಂಬುವವರು ತನ್ನ ವಿರುದ್ಧ ತಿರುಗಿಬಿದ್ದರು ಎಂಬ ಒಂದೇ ಕಾರಣಕ್ಕಾಗಿ ಆಡಳಿತ ಮಂಡಳಿಯ ಯಾರ ಅನುಮತಿಯೂ ಇಲ್ಲದೆ ಅವರನ್ನು ಕೆಲಸದಿಂದ ತೆಗೆದುಹಾಕಿದ್ದ. ಬಿ.ಟಿ.ಎಂ ಕಾಲೇಜಿನ ಉಪನ್ಯಾಸಕರೊಬ್ಬರನ್ನು ಕರೆತಂದು ಕಾಲೇಜಿ

ನಸ್ರೂ ಅಣ್ಣ ಜಬಿಯ ಹತ್ಯೆ ಮತ್ತೆ ಫೀಲ್ಡಿಗೆ ನಿಂತ ಮಾಹಿನ್

ರೇಪಿಸ್ಟ್ ನಸ್ರು ಮನೆಯ ಸೂತಕಕ್ಕೆ ಮತ್ತೊಂದು ಸೇರ್ಪಡೆಯಾಗಿದೆ.


ಜಬಿ

ಆಗಸ್ಟ್ 14 ರ ರಾತ್ರಿ ಏಕಾಏಕಿ ತನ್ನ ಮನೆಗೇ ನುಗ್ಗಿ ಬಂದು ಕತ್ತರಿಸಿದ ಮಾಹಿನ್ ಶಿಷ್ಯರಿಂದ ಹೆಣವಾದ ಜಬಿ ಉರ್ಫ್ ಜಬೀವುಲ್ಲಾ ಕೊಲೆಯಾಗಿದ್ದು ಆತ ನಸ್ರೂನ ಅಣ್ಣ ಎಂಬ ಒಂದೇ ಕಾರಣಕ್ಕೆ. ರೌಡಿಜಮ್ಮಿಗೆ ಆತ ಗುಡ್‌ಬೈ ಹೇಳಿದ್ದ, ತನ್ನದೇ ಗ್ಯಾಂಗ್ ಅಂತ ಆತನಿಗಿರಲಿಲ್ಲ, ಗ್ಯಾಂಗ್ ವಾರ್, ಜಿದ್ದು, ಡೀಲು, ಮಸ್ತಿ ಯಾವುದಕ್ಕೂ ತಲೆ ಕೊಡದೇ ತನ್ನ ಪಾಡಿಗೆ ತಾನಿದ್ದ ಜಬಿಯನ್ನು ವಿನಾಕಾರಣ ಕೊಲ್ಲಿಸಿದವನು ರೌಡಿ ಮಾಹಿನ್!

ಸದ್ಯ ಪೊಲೀಸರ ಕಣ್ಣಿಗೆ ಬೀಳದೇ ಭೂಗತನಾಗಿರುವ ಮಾಹಿನ್ ತಾನು ಕೂಡ ರೌಡಿಜಮ್ಮಿಗೆ ಗುಡ್‌ಬೈ ಹೇಳಿದ್ದೇನೆಂದೇ ಸಾಧಿಸಿದ್ದನಲ್ಲವೆ? ತನ್ನದೇ ಕತೆಯೆಂದು ಶಿವರಾಜ್‌ಕುಮಾರ್ ಹಾಕಿಕೊಂಡು 'ನಂದ' ಎಂಬ ಚಿತ್ರವನ್ನೂ ನಿರ್ಮಿಸಿದ ರೌಡಿ ಮಾಹಿನ್‌ಗೂ, ಎಂದೋ ಪೊಲೀಸರ ಗುಂಡಿಗೆ ಬಲಿಯಾದ ನಸ್ರೂಗೂ ಯಾವುದೇ ಸಂಬಂಧವಿಲ್ಲ, ನಸ್ರೂ ಅಣ್ಣ ಜಬಿಗೂ ಮಾಹಿನ್‌ಗೂ ಪರಿಚಯವಾಗಲಿ, ದುಷ್ಮನಿಯಾಗಲಿ ಇಲ್ಲವೇ ಇಲ್ಲ.


ನಸ್ರು

ದುಷ್ಮನಿಯಿದ್ದದ್ದು ನಸ್ರು, ತಮ್ಮಂದಿರಾದ ಜಪ್ಪು ಮತ್ತು ವಸೀಮ್ ಹಾಗೂ ಖತರ್‌ನಾಕ್ ಪಾತಕಿ ಭೈರಸಂದ್ರದ ಅಜಗರ್ ಮಧ್ಯೆ. ಮುಸ್ಲಿಂ ಅಂಡರ್‌ವರ್ಲ್ಡ್ ಕಂಡ ಖತರ್‌ನಾಕ್ ಪಾತಕಿ ಭೈರಸಂದ್ರದ ಅಜಗರ್‌ಗೂ, ನಸ್ರೂ ಗ್ಯಾಂಗಿಗೂ ಹಳೇ ದುಷ್ಮನಿಯಿದೆ. ಮೊದಮೊದಲು ಒಟ್ಟಿಗೇ ರಾಬರಿ, ರೇಪು ಮಾಡಿಕೊಂಡಿದ್ದ ಅಜಗರ್ ಮತ್ತು ನಸ್ರೂ ಮಧ್ಯೆ ಘರ್ಷಣೆಯಾಗಿದ್ದು 2001 ರಲ್ಲಿ.


ಮಂಗಮ್ಮನಪಾಳ್ಯದ ಮಸೀದಿ ಪಕ್ಕದಲ್ಲಿ ಅಜಗರ್‌ನನ್ನು ಹಿಡಿದು ಕತ್ತರಿಸಿದ ನಸ್ರು ಆತ ಸತ್ತೇ ಹೋದನೆಂದು ಭಾವಿಸಿ ಬಿಟ್ಟು ಹೋದರೆ ಗಟ್ಟಿ ಗುಂಡಿಗೆಯ ಅಜಗರ್ ಆಸ್ಪತ್ರೆ ಸೇರಿ ಬಚಾವಾಗಿದ್ದ.

ಮುಂದೆ ಬೆಂಗಳೂರಿಗೇ ಭಯಾನಕನಾದ ನಸ್ರು ಹತ್ತಾರು ಲೈವ್‌ಬ್ಯಾಂಡ್ ಹುಡುಗಿಯರನ್ನು ಹೊತ್ತೊಯ್ದು ರೇಪ್ ಮಾಡಿ ಕೊನೆಗೆ ಪೊಲೀಸರ ಗುಂಡಲ್ಲೇ ನಿಕಾಲಿಯಾದ. ಉಳಿದವರು ನಸ್ರು ತಮ್ಮಂದಿರಾದ ಜಪ್ಪು ಮತ್ತು ವಸೀಮ್. ಇದೆಲ್ಲಕ್ಕೂ ಮೊದಲೇ ಅಣ್ಣ ಜಬಿ ಜೈಲಿಂದ ಹೊರಬಿದ್ದು ತನ್ನ ಪಾಡಿಗೆ ತಾನಿದ್ದುಬಿಟ್ಟ. ಅತ್ತ ಜೈಲುಪಾಲಾದ ಜಪ್ಪು ಮತ್ತು ವಸೀಮ್ ವಿರುದ್ಧ ಡಜನ್ನುಗಟ್ಟಲೇ ಕೇಸುಗಳಿದ್ದವು. ಕೋರ್ಟು, ಕೇಸು, ಜೈಲು ಎಂದೆಲ್ಲ ಹೈರಾಣಾದ ಜಪ್ಪು ಮತ್ತು ವಸೀಮ್ ಕೊನೆಕೊನೆಗೆ ಬೀಡಾ ಕಾಸಿಗೂ ಗತಿಯಿಲ್ಲದೆ ಜೈಲಲ್ಲೇ ಕೊಳೆತು ಬರ್ಬಾದಾಗಿ ಹೋದರು.

ಆದರೆ ಅಜಗರ್ ವಿರುದ್ಧದ ದುಷ್ಮನಿಯಿತ್ತಲ್ಲ, ಅದಕ್ಕೆ ತಕ್ಕಂಥೆ ಕೋಲಾರ ಜೈಲಿಂದ ಎಸ್ಕೇಪಾಗಿದ್ದ ಅಜಗರ್ ಪರಪ್ಪನ ಅಗ್ರಹಾರ ಜೈಲಿಗೇ ಬಂದುಬಿಟ್ಟ. ಅಜಗರ್ ಜೊತೆಗೇ ಗುರಪ್ಪನಪಾಳ್ಯದ ಪಂಟರ್ ಕಲೀಮ್ ಎಂಬ ಮತ್ತೊಬ್ಬ ರೌಡಿಯೂ ಜೈಲಿಗೆ ಎಂಟ್ರಿಯಾದ. ಇಲಿಯಾಸ್‌ನಗರದ ಅಕ್ಮಲ್ ಕೊಲೆ ಕೇಸಲ್ಲಿ ಅಜಗರ್ ಮತ್ತು ಕಲೀಮ್ ಇಬ್ಬರೂ ಭಾಗಿಧಾರರಾಗಿ ಜೈಲು ಸೇರಿದ್ದು ಒಂದೆಡೆಯಾದರೆ, ಮತ್ತೊಂದೆಡೆ ಬನ್ನೇರಘಟ್ಟದ ಬಿಸ್ಮಿಲ್ಲಾನಗರದ ಸಮೀರ್ ಮತ್ತು ನವಾಜ್; ತಿಲಕ್‌ನಗರದ ಮಚ್ಚ ಕಾಕತ್‌ನನ್ನು ಕೊಂದು ಪರಪ್ಪನ ಅಗ್ರಹಾರ ಜೈಲಿಗೇ ಬಂದಿದ್ದರು.


ವಸೀಮ್

ಎಲ್ಲರೂ ಸೋಕಾಲ್ಡ್ ಡಾನ್ ಮಾಹಿನ್‌ನ ಬಂಟರೇ. ಪಂಟರ್ ಕಲೀಮ್ ಮತ್ತು ಅಜಗರ್ ಮಾಹಿನನ ಎಡಗೈ ಬಲಗೈಗಳಾದರೆ ಸಮೀರ್-ನವಾಜ್ ಮಾಹಿನ್ ಪಾಲಿಗೆ ಎರಡು ಕಣ್ಣುಗಳಿದ್ದಂತೆ. ಈ ಪೈಕಿ ಪಂಟರ್ ಕಲೀಮ್ ಜೈಲು ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿ ಮೈಸೂರು ಜೈಲಿಗೆ ಎತ್ತಂಗಡಿಯಾದರೆ, ಅಜಗರ್, ಸಮೀರ್, ನವಾಜ್ ಮತ್ತವರ ಶಿಷ್ಯವರ್ಗ ಪೂರ್ತಿ ಬೆಂಗಳೂರು ಜೈಲಿನಲ್ಲಿ ಒಂದೇ ಸೆಲ್ಲಿನಲ್ಲಿ ಜಮೆಯಾಯಿತು. ಅದೇ ಜೈಲಲ್ಲಿ ನಸ್ರೂ ತಮ್ಮಂದಿರಾದ ವಸೀಮ್ ಮತ್ತು ಜಪ್ಪು ಇದ್ದರಲ್ಲ; ಅಜಗರ್‌ಗೂ ನಸ್ರೂ ತಮ್ಮಂದಿರಿಗೂ ಪದೇಪದೇ ವಿನಾಕಾರಣ ಬಡಿದಾಟಗಳಾದವು.


ಮಾಹಿನ್


ಹೀಗೆ ಸಾಗುತ್ತಿದ್ದ ಜೈಲು ಗ್ಯಾಂಗ್ ವಾರ್ ಅಕ್ಟೋಬರ್ ಮೊದಲ ವಾರದ ಹೊತ್ತಿಗೆ ಅತಿರೇಕಕ್ಕೆ ಹೋಗಿದೆ. ಎದುರು ಸಿಕ್ಕ ಅಜಗರ್‌ನನ್ನು ನಸ್ರು ತಮ್ಮಂದಿರಾದ ಜಪ್ಪು ಮತ್ತು ವಸೀಮ್ ಹಿಡಿದು ಮುಖಾ ಮೂತಿ ಚಚ್ಚಿಬಿಟ್ಟರು. ಒದೆ ತಿಂದ ಅಜಗರ್ ಬಾಲ ತುಳಿದ ಹಾವಿನಂತೆ ಜಿದ್ದಿಗೆ ಬಿದ್ದು ಏನಾದರೂ ಮಾಡುವಂತೆ ಮಾಹಿನ್‌ಗೆ ದುಂಬಾಲುಬಿದ್ದ. ಇನ್ನು ಮಾಹಿನ್ ಕೇಳಬೇಕೆ? ಜೈಲಲ್ಲಿರುವ ತನ್ನ ಬಂಟರಿಗಾಗಿ ಏನಾದರೂ ಮಾಡಲೇಬೇಕಲ್ಲ? ಬಡಿದಾಟವಾಗಿದ್ದು ಅಜಗರ್ ಮತ್ತು ವಸೀಮ್-ಜಪ್ಪು ಮಧ್ಯೆಯಾದರೂ ಜೈಲಿಗೇ

ಪ್ರಭಾರೆ ಪ್ರಿನ್ಸಿಪಾಲರನ್ನಾಗಿ ನೇಮಿಸಿದ್ದ. ಆದರೆ ಆತನೂ ಸಹ ರೆಡ್ಡಿಯ ಕಿರುಕುಳ ತಾಳಲಾರದೆ ಪರಾರಿಯಾದ.

ಈತನ ಈ ಎಲ್ಲಾ ಕುಕೃತ್ಯಗಳೊಂದಿಗೆ ಸಂಸ್ಥೆಯ ಕಾರ್ಯದರ್ಶಿ ಡಾ.ಸಿ.ಎಸ್.ಪದ್ಮ ಮತ್ತು ಜಂಟಿ ಕಾರ್ಯದರ್ಶಿ ಚಿಕ್ಕನಾಗಯ್ಯ ಎಂಬಿಬ್ಬರು ಕೈಜೋಡಿಸಿರುವುದು ಈತನ ಕೊಳಕು ಕೆಲಸಗಳಿಗೆ ಮತ್ತಷ್ಟು ಪುಷ್ಟಿ ನೀಡಿದೆ.

ಪ್ರತಿಭಟನೆಗೆ ಮುಂದಾದರು

ಎಂ.ಇ.ಎಸ್ ಸಂಸ್ಥೆಯಲ್ಲಿ ನಡೆಯುತ್ತಿರುವ ರೆಡ್ಡಿಯ ದೌರ್ಜನ್ಯದ ವಿರುದ್ಧ ಅಲ್ಲಿನ ಸಿಬ್ಬಂದಿ ಈಗ ತಿರುಗಿಬಿದ್ದಿದ್ದಾರೆ. ಕಳೆದ ಜುಲೈ 7ರಂದು ಅಲ್ಲಿನ ಎಲ್ಲ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ರೆಡ್ಡಿಯ ವಿರುದ್ಧ ಕಾಲೇಜಿನ ಮುಂದೆ ಪ್ರತಿಭಟನೆಗೆ ಕುಳಿತಿದ್ದರು. ಈ ವಿಚಾರ ಪತ್ರಿಕೆಗಳಲ್ಲಿ ಸುದ್ದಿಯಾಯಿತಾದರೂ ರೆಡ್ಡಿಯ ಜೊಗರು ಮಾತ್ರ ಕಡಿಮೆಯಾಗಲಿಲ್ಲ.



ರಾಮಲಿಂಗರೆಡ್ಡಿ

ಇತ್ತ ರೆಡ್ಡಿಯ ಅವ್ಯವಹಾರ, ಅತಿರೇಕಗಳ ಬಗ್ಗೆ ಸಂಸ್ಥೆಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಬೀದಿಗಿಳಿದು ಪ್ರತಿಭಟಿಸುತ್ತಿದ್ದರೆ, ಅತ್ತ ಬಿಟಿಎಂ ಲೇಔಟ್ ಶಾಸಕ, ಮಾಜಿ ಮಂತ್ರಿ ರಾಮಲಿಂಗಾ ರೆಡ್ಡಿ ಈತನ ಬೆಂಬಲಕ್ಕೆ ನಿಂತಿದ್ದಾರೆ. ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ಈತನ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಮೈಕೋ ಲೇಔಟ್ ಪೊಲೀಸ್ ಠಾಣೆಗೆ ದೂರು ಕೊಟ್ಟರೆ, ಪೊಲೀಸರಿಗೆ ಫೋನು ಹಾಕಿದ ರಾಮಲಿಂಗಾ ರೆಡ್ಡಿ ಈ ಭ್ರಷ್ಟ ವೆಂಕಟ ರೆಡ್ಡಿಯ ವಿರುದ್ಧ ಕ್ರಮ ಕೈಗೊಳ್ಳದಂತೆ ಪೊಲೀಸರಿಗೆ ಬೆದರಿಕೆ ಹಾಕಿದ್ದಾರೆ. ಸಾಕ್ಷಾತ್ ಶಾಸಕರೇ ವಂಚಕನ ಬೆನ್ನಿಗೆ ನಿಂತಾಗ ಪೊಲೀಸರು ತಾನೆ ಏನುಮಾಡಲು ಸಾಧ್ಯ? ಹೀಗಾಗಿ ಮೈಕೋ ಲೇಔಟ್ ಇನ್ಸ್‌ಪೆಕ್ಟರ್ ಜನಾರ್ಧನ್ ದೂರು ಪಡೆದು ಸೀಲು ಹಾಕಿ ಕಳಿಸುವುದನ್ನೇ ತನ್ನ ಕಾಯಕ ಮಾಡಿಕೊಂಡಿದ್ದಾರೆ.

ನೋಡುವುದಕ್ಕೆ ರಾಮಲಿಂಗಾ ರೆಡ್ಡಿಯ ತಮ್ಮನಂತೆ ಕಾಣುವ ವೆಂಕಟ ರೆಡ್ಡಿ ತನ್ನ ಎಲ್ಲ ಅವ್ಯವಹಾರಗಳಿಗೂ ಮಾಜಿ ಮಂತ್ರಿಯ ಹೆಸರು ಬಳಸುತ್ತಿರುವುದು ರಾಮಲಿಂಗಾ ರೆಡ್ಡಿಗೆ ಇನ್ನೂ ಯಾಕೆ ಗೊತ್ತಾಗಿಲ್ಲ? ಅಥವಾ ಗೊತ್ತಿದ್ದರೂ ಸುಮ್ಮನಿದ್ದಾರೇಕೆ?

ಅಷ್ಟಕ್ಕೂ ಜ್ಞಾನ ಸಂಪಾದನೆಗಾಗಿ, ಭವಿಷ್ಯದ ಬದುಕಿಗಾಗಿ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳು, ಹೆಣ್ಣುಮಕ್ಕಳ ನಡುವೆ ವೆಂಕಟ ರೆಡ್ಡಿಯಂಥ ಧೂರ್ತನನ್ನು ಹಾಗೇ ಉಳಿಯಲು ಬಿಟ್ಟರೆ ಅದೆಷ್ಟು ಮುಗ್ಧರು ಈತನಿಗೆ ಬಲಿಯಾಗುತ್ತಾರೋ?

● ಅರುಣ್‌ಕುಮಾರ್ ಜಿ.

ಬಗ್ಗಿ ಕತ್ತರಿಸಲಾಗುತ್ತಾ? ಮಾಹಿನ್‌ನ ಹುಚ್ಚು ಬುದ್ಧಿ ವಿಪರೀತ ಓಡಿದೆ. ವಸೀಮ್ ಮತ್ತು ಜಪ್ಪುಗೆ ಬಿಸಿ ಮುಟ್ಟಿಸಬೇಕೆಂದರೆ ತನ್ನ ಪಾಡಿಗೆ ತಾನಿರುವ ಅವರಣ್ಣ ಜಬಿಯ ತಲೆದಂಡಕ್ಕೆ ಅಣಿಯಾಗಿದ್ದಾನೆ.

ಅದಕ್ಕೆಂದು ಮಾಹಿನ್ ಛೂ ಬಿಟ್ಟಿದ್ದು ತನ್ನ ಮತ್ತೊಬ್ಬ ಬಚ್ಚಿಕಸ್ತ ಬಂಟ ಮೋತಿನಗರದ ಗುಲಾಮ್‌ನನ್ನು. ಆಗಸ್ಟ್ 14 ರ ರಾತ್ರಿ ಗುಲಾಮ್ ಗ್ಯಾಂಗ್ ಎಲೆಕ್ಟ್ರಾನಿಕ್ ಸಿಟಿ ಪಕ್ಕದ ಸುಭಾಷ್‌ನಗರದ ಜಬಿಯ ಮನೆಗೆ ಬಂದಿದೆ. ವೃದ್ಧ ತಾಯಿ, ಗಾರ್ಮೆಂಟ್ ಕೆಲಸಕ್ಕೆ ಹೋಗಿ ಹೊಟ್ಟೆ ಹೊರೆಯುವ ಪತ್ನಿ ಮತ್ತು ಇಬ್ಬರು ಪುಟ್ಟಪುಟ್ಟ ಮಕ್ಕಳ ಜೊತೆ ಕುಂತು ಜಬಿ ಟೀವಿ ನೋಡುತ್ತಿದ್ದ. ಮೊಬೈಲಿಗೆ ಯಾರದೋ ಕರೆ ಬಂತು. ಮಾತಾಡಿದ್ದು ಕೇಳಿಸುತ್ತಿಲ್ಲ. ಮನೆಯಿಂದ ಕೊಂಚ ಹೊರಕ್ಕೆ ಮನೆಬಾಗಿಲು ದಾಟಬೇಕು ಅಷ್ಟರಲ್ಲೇ ಹಂತಕ ಪಡೆ ನುಗ್ಗಿ ಬಂತು. ತಡೆಯಲು ಬಂದ ತಾಯಿ, ಪತ್ನಿಯನ್ನೂ ಬಿಡದೇ ಹಂತಕಪಡೆ ಕತ್ತರಿಸಿ ಹಾಕಿತು. 'ಸಕ್ಕೋ ಗುಲಾಮ್ ನಕ್ಕೋರೇ; ಅಲ್ಲಾಹ್ ಕಸಮ್ ಮೈ ಕುಚ್ ಭೀ ನೈ ಕಿಯಾರೇ....' ಎಂದು ಜಬೀ ಕಿರುಚುತ್ತಿದ್ದರೆ ಮಾಹಿನ್ ಹಂತಕ ಬಂಟರು ಕೊಚ್ಚಿಸುತ್ತಲೇ ಇದ್ದರು.

ಯಾರದೋ ಜಿದ್ದಿಗೆ, ಏನೂ ಮಾಡದ, ತನ್ನದಲ್ಲದ ತಪ್ಪಿಗೆ ಜಬಿ ಹೆಣವಾಗಿದ್ದ. ಅಜಗರ್-ಪಪ್ಪೂ ತಂಡದ ದೀರ್ಘ ಕಾಲದ ಗ್ಯಾಂಗ್‌ವಾರ್ ಅನ್ಯಾಯವಾಗಿ ಜಬಿಯನ್ನು ನುಂಗಿ ಹಾಕಿತ್ತು. ಅತ್ತ ಜೈಲಲ್ಲಿ ಅಜಗರ್, ವಸೀಮ್, ನವಾಬ್ ಬಿರಿಯಾನಿ ತರಿಸಿಕೊಂಡು ತಿಂದರೆ ಪಪ್ಪೂ-ವಸೀಮ್ ಎದ್ದೂಬಿದ್ದೂ ಅಳುತ್ತಿದ್ದರು. ಸದ್ಯ ಮಾಹಿನ್ ನಾಪತ್ತೆಯಾಗಿದ್ದಾನೆ. ಸಿಸಿಬಿ ಪೊಲೀಸರು ಬೆನ್ನು ಬಿಡುತ್ತಿಲ್ಲ. ಏನೂ ಮಾಡದೆ, ಎಲ್ಲಾ ತೊರೆದೂ ತನ್ನ ಪಾಡಿಗೆ ಇದ್ದ ಸಜ್ಜನ ಅಣ್ಣ ಜಬೀಯನ್ನು ವಿನಾಕಾರಣ ಕೊಲ್ಲಿಸಿ ರಕ್ತ ಹರಿಸಿದ ಮಾಹಿನ್ ಕೊನೆಗೂ ಏನನ್ನು ಸಾಧಿಸಿದ?

● ರಾ. ಸೋಮನಾಥ್


ಚಿಮೂ ಆ್ಯಂಡ್ ಸೂಕಾ ಕೃತಿಚೌರ್ಯದಲ್ಲಿ ಸುಖಾ!

ಎಂ. ಚಿದಾನಂದ ಮೂರ್ತಿ (ಚಿಮೂ) ಸಂಶೋಧಕರು. ಸೂರ್ಯನಾಥ ಕಾಮತ್ (ಸೂಕಾ) ಇತಿಹಾಸಕಾರರು. ಕನ್ನಡ ಸಂಶೋಧನಾ ಲೋಕಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ್ದ ಚಿಮೂ ಕಳೆದೆರಡು ದಶಕಗಳಲ್ಲಿ ಹಿಂದೂತ್ವದ ಅಮಲು ಏರಿಸಿಕೊಂಡು ಮೊಸರಲ್ಲೇ ಗೋಮಾಂಸದ ವಾಸನೆ ಸಂಶೋಧಿಸುವ ಮಟ್ಟಕ್ಕೆ ಕುಗ್ಗಿದವರು. ಇನ್ನು ಸೂಕಾ ಬಿಡಿ; ಅವರ ಇತಿಹಾಸ ಸಂಶೋಧನೆಯ ಆಕರಗ್ರಂಥಗಳೆಲ್ಲ ಒಟ್ಟಾಗಿ ಸಿಗುವುದು ಕೇಶವ ಶಿಲ್ಪದಲ್ಲಿ ಮಾತ್ರ.

ಅಂದರೆ ಚಿಮೂ, ಸೂಕಾ ಈಗ ಸಮಾನ ಮನಸ್ಕರು, 'ಸಮಾನ ನೀತಿ ಸಂಹಿತೆ'ಯ ಆರಾಧಕರು. ಹಂಪಿಯಲ್ಲಿ ಒಡೆದುಹೋದ ವಿಗ್ರಹವೊಂದನ್ನು ನೋಡಿದಾಗ ಸೂಕಾ ಮುಸ್ಲಿಂ ಅರಸರ ವಿರುದ್ಧ ಕೆಂಡ ಕಾರುವರು, ಚಿಮೂ ಕೂಡಾ ಹಾಗೇ ಬೆಂಕಿಯುಗುಳಿ ಇತಿಹಾಸ ಪ್ರಜ್ಞೆ ಪ್ರದರ್ಶಿಸುವರು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವ ಚಿಮೂಗೆ ಹಂಪಿಯಲ್ಲಿ ಕರಕುಶಲ ವಸ್ತು ಮಾರುವ ಕಾಶ್ಮೀರಿ ಸಾಬರೆಲ್ಲ ಲಷ್ಕರ್-ಇ-ತೊಯಿಬಾಗಳಂತೆ ಕಾಣುವರು. ಒಟ್ಟಿನಲ್ಲಿ ಚಿಮೂ, ಸೂಕಾ ಈಗ ಒಂದೇ ಕಮಲದ ದಳ(ವಾಯಿ)ಗಳು....

* * * * * *

ಈಗ್ಯಾಕೆ ಚಿಮೂ, ಸೂಕಾರವರ ಪ್ರಸ್ತಾಪ ಎನ್ನುತ್ತೀರೋ? ಇವರಿಬ್ಬರೂ ಬೆಂಗಳೂರಿನ ಇತಿಹಾಸ ಕುರಿತು ಬರೆದಿರುವ ಎರಡು ಲೇಖನಗಳು 98.3 ಪರ್ಸೆಂಟ್ ಡಿಟ್ಟೋ ಅಂದ್ರೆ ಡಿಟ್ಟೋ, ಸೇಮ್ ಅಂದ್ರೆ ಸೇಮ್ ಆಗಿವೆ. ಇಂತಹ ಶೇಮ್ ಶೇಮ್ ಕೃತಿಚೌರ್ಯ ಇಲ್ಲಿವರೆಗೆ ಚರ್ಚೆಯೇ ಆಗದಿರುವುದನ್ನು ಕುರಿತು ತಮ್ಮ 'ಪುಸ್ತಕ ಮನೆ' ಮಾಸಿಕದಲ್ಲಿ ಹರಿಹರಪ್ರಿಯರು ವಿವರವಾಗಿ ಬರೆದಿದ್ದಾರೆ.




ಹಾಗೆಯೇ 1975-2005ರ ಅವಧಿಯಲ್ಲಿ ಬೆಂಗಳೂರು ಕುರಿತು ಸೂರ್ಯನಾಥ ಕಾಮತ್‌ರು ಬರೆದ ಮೂರು ಲೇಖನಗಳು ಬಹುತೇಕ ಸಾಮ್ಯತೆ ಹೊಂದಿದ್ದರೂ, ಹಲವಾರು ಐತಿಹಾಸಿಕ ವಿವರಗಳಲ್ಲಿ 'ವೈವಿಧ್ಯತೆ' ಕಂಡು ಬಂದಿರುವುದನ್ನೂ ಬಿಡಿಬಿಡಿಯಾಗಿ ಎತ್ತಿ ತೋರಿಸಿರುವ ಹರಿಹರಪ್ರಿಯರು ಸೂರ್ಯನಾಥ ಕಾಮತ್ ನಿಜವಾಗಿಯೂ ಇತಿಹಾಸಕಾರರೇ ಎಂಬ ಸಕಾರಣಾತ್ಮಕ ಪ್ರಶ್ನೆಯನ್ನೂ ಎತ್ತಿದ್ದಾರೆ. ಮೊದಲಿಗೆ ಹರಿಹರಪ್ರಿಯರು ಗುರ್ತಿಸಿರುವ ಸೂಕಾರ ಬೆಂಗಳೂರು ಕುರಿತ ಮೂರು ಲೇಖನಗಳ ವೈರುಧ್ಯಗಳಲ್ಲಿ ಕೆಲವು ಹೀಗಿವೆ:


* ಮೊದಲ ಲೇಖನದಲ್ಲಿ ಛತ್ರಪತಿ ಶಿವಾಜಿಯ ತಂದೆಯ ಹೆಸರು 'ಶಾಜಿ ಭೋಂಸ್ಲೆ' ಎಂದಿರುವುದು ಎರಡನೆಯದರಲ್ಲಿ ಅದು 'ಷಹಾಜಿ ಭೋಸ್ಲೆ' ಯಾಗಿಯೂ, ಮೂರನೇ ಲೇಖನದಲ್ಲಿ 'ಷಾಜಿ ಭೋಂಸ್ಲೇ'ಯಾಗಿಯೂ ರೂಪಾಂತರಗೊಂಡಿದೆ.

* ಮೊದಲ ಲೇಖನದಲ್ಲಿ 1820ರಲ್ಲಿ ವೆಸ್ಲಿಯನ್ ಮಿಷನರಿಗಳು ಬೆಂಗಳೂರಲ್ಲಿ ಕಾರ್ಯಾಚರಣೆ ಶುರು ಮಾಡಿದರೆ, ಎರಡನೇ ಲೇಖನದಲ್ಲಿ 1821ರಲ್ಲಿ ಅವರು ಕಾರ್ಯಾಚರಣೆ ಆರಂಭಿಸುತ್ತಾರೆ.

* ಬೆಂಗಳೂರಿನ ಪತ್ರಿಕೋದ್ಯಮದ ಬಗೆಗಿನ ವಿವರದಲ್ಲಿ 'ಕಿಡಿ' ಶೇಷಪ್ಪ, ಬಿ.ಎನ್. ಗುಪ್ತ ಖಾದ್ರಿ ಶಾಮಣ್ಣ, ವೈ.ಎನ್.ಕೆ.ಯಂತಹ ಹಳೆ ತಲೆಗಳ ಪ್ರಸ್ತಾಪವಿಲ್ಲ, ಒಕ್ಕಲಿಗರ ಪತ್ರಿಕೆ, ಆರ್.ಕಲ್ಯಾಣಮ್ಮನವರ 'ಸರಸ್ವತಿ', ಎಂ.ಆರ್. ಲಕ್ಷ್ಮಮ್ಮ ಅವರ 'ಸೋದರಿ' ಪತ್ರಿಕೆಗಳು ಇತಿಹಾಸಕಾರ 'ಸೂಕಾ'ಗೆ ಮುಖ್ಯವೇ ಅಲ್ಲ! ಸಾಹಿತ್ಯದ ವಿಷಯದಲ್ಲೂ ಇಂಥದೇ ಪ್ರಮಾದಗಳಿವೆ.



ಚಿಮೂ



ಸೂಕಾ

ಈ ಮೇಲಿನ ವಿಷಯಗಳನ್ನು ಎತ್ತುವ ಹರಿಹರಪ್ರಿಯ ಸೂರ್ಯನಾಥ ಕಾಮತ್‌ರ 'ಇತಿಹಾಸ ದರ್ಶನ' ಯಾವ ದರ್ಜೆಯದು ಎಂಬ ಪ್ರಶ್ನೆ ಎತ್ತಿದ್ದಾರೆ.

ಚಿಮೂ, ಸೂಕಾ : ಕಾಪಿಕ್ಯಾಟ್ ಯಾರು?

ಈಗ 1975ರ ಸೂರ್ಯನಾಥ ಕಾಮತ್ ಲೇಖನ, 1993ರ ಚಿಮೂ ಲೇಖನಗಳ ಸಾಮ್ಯತೆ ಬಗ್ಗೆ ನೋಡೋಣ. ಮೇಲೆ ಉಲ್ಲೇಖಿಸಿದ ಬೆಂಗಳೂರು ಕುರಿತ ಲೇಖನವನ್ನು ಸೂರ್ಯನಾಥ ಕಾಮತರೇ ಮೊದಲು ಬರೆದಿದ್ದು, ನಂತರ ಬರೆದಿದ್ದು ಚಿಮೂ ಎನ್ನುತ್ತಾರೆ ಹರಿಹರಪ್ರಿಯ.

ಅಂದರೆ ಸೂಕಾ ಲೇಖನವನ್ನು ಚಿಮೂ ಕೃತಿಚೌರ್ಯ ಮಾಡಿದ್ದಾರೆಂದಾಯಿತು.

ಈ ಎರಡು ಲೇಖನಗಳಲ್ಲಿ ವಾಕ್ಯವಾಕ್ಯಗಳೂ ಒಂದೇ ಇವೆ. ಅಲ್ಲಲ್ಲಿ ಸಣ್ಣಪುಟ್ಟ ಮಾರ್ಪಾಡುಗಳಿವೆ. ಉದಾಹರಣೆಗೆ:

* ಕಾಮತರು ತಮ್ಮ ಲೇಖನದ ಮೊದಲ ಸಾಲಿನಲ್ಲಿ 'ಬೆಂಗಳೂರು ಕರ್ನಾಟಕ ರಾಜ್ಯದ ಪ್ರಸಕ್ತ ರಾಜಧಾನಿ' ಎಂದು ಬರೆದರೆ, ಚಿಮೂ 'ಬೆಂಗಳೂರು: ಮೈಸೂರು ರಾಜ್ಯದ ಪ್ರಸಕ್ತ ರಾಜಧಾನಿ' ಎಂದು ಬರೆದಿದ್ದಾರೆ. 1993ರ ಚಿಮೂ ಲೇಖನದಲ್ಲಿ 'ಮೈಸೂರು ರಾಜ್ಯ'ದ ಪ್ರಸ್ತಾಪ! ಎಂಥಾ ಸಂಶೋಧಕರಪ್ಪ ಇವರು!!

* ಎರಡನೇ ಪ್ಯಾರಾದಲ್ಲಿ ಮೊದಲ ಸಾಲು...

ಸೂಕಾ : ನಾಮ ನಿಷ್ಪತ್ತಿಯ ವಿಚಾರ ನಿರ್ಣಯ ಕಷ್ಟ

ಚಿಮೂ : ನಾಮ ನಿಷ್ಪತ್ತಿಯ ವಿಚಾರ ತಪ್ಪು

ಇನ್ನೊಂದು ಕಡೆ ಸೂಕಾ 'ಬೇಗೂರು ನಾಗೇಶ್ವರ' ಎಂದು ಬರೆದರೆ, ಚಿಮೂ ಸ್ವಲ್ಪ ಚೇಂಜ್ ಮಾಡಿ 'ಬೇಗೂರು ವಾಗೇಶ್ವರ' ಎಂದು ಬರೆದಿದ್ದಾರೆ.

ಇವು ಕೆಲ ಉದಾಹರಣೆಗಳಷ್ಟೇ.... ಒಟ್ಟಿನಲ್ಲಿ ಲೇಖನಗಳು ಪ್ರಕಟಗೊಂಡ ಕಾಲದ ಪ್ರಕಾರ, ಮೇಲುನೋಟಕ್ಕೆ ಅನಿಸುವುದೆಂದರೆ ಸೂಕಾರ ಲೇಖನದ ಕೆಲಶಬ್ದಗಳನ್ನು ಬದಲಿಸಿ ಚಿಮೂ ಕೃತಿಚೌರ್ಯ ಮಾಡಿದ್ದಾರೆ.

ಇವೆಲ್ಲ ಹರಿಹರಪ್ರಿಯರ ಸಂದೇಹಗಳು. ಸೂಕಾ, ಚಿಮೂ ಲೇಖನಗಳ ಪೂರ್ಣಪಾಠ, ಪ್ರಕಾಶಕರು ಇತ್ಯಾದಿ ವಿವರಕ್ಕಾಗಿ ನವೆಂಬರ್ 2009ರ 'ಪುಸ್ತಕ ಮನೆ' ನೋಡಿ

(ಸಂಪರ್ಕ : 9845867184)

ನಮ್ಮ ಸಂದೇಹಗಳು!

ಈಗ ಹರಿಹರಪ್ರಿಯರ ವಿಚಾರ ಬಿಡಿ; ನಾವು-ನೀವು ಒಂದಿಷ್ಟು ಚರ್ಚಿಸೋಣ. ಬೆಂಗಳೂರು ಇತಿಹಾಸ ಕುರಿತ ಲೇಖನದ ಮಟ್ಟಿಗೆ ಸೂಕಾರನ್ನು ಚಿಮೂ ಕಾಪಿ ಹೊಡೆದರೋ? ಅಥವಾ ಚಿಮೂರನ್ನು ಸೂಕಾ ಫಾಲೋ ಮಾಡಿದರೋ? ಅದಿರಲಿ, ಇನ್ಯಾರದಾದರೂ ಮೂಲ ಲೇಖನದಿಂದ ಚಿಮೂ, ಸೂಕಾರ ಲೇಖನಗಳು ಜನ್ಮ ತಾಳಿದವೋ?

ಪ್ರಮೇಯ 1 : ಸೂಕಾರನ್ನು ಚಿಮೂ ಕಾಪಿ ಮಾಡಿದ್ದಾರೆ.

ಸಾಧನೆ : ಸೂಕಾ ಲೇಖನ 1975ರಲ್ಲಿ ಪ್ರಕಟವಾಗಿದೆ. ಮತ್ತು 1975-2005ರ ನಡುವೆ ಲಿಟಲ್ ಚೇಂಜಸ್‌ನೊಂದಿಗೆ ಮೂರು ಬಾರಿ ಪ್ರಕಟಗೊಂಡಿದೆ. ಚಿಮೂ ಲೇಖನ 1993ರ ಸುಮಾರಿಗೆ ಪ್ರಕಟಗೊಂಡಿದೆ.

ಆದ್ದರಿಂದ ಇಲ್ಲಿ ಚಿಮೂ ಕಾಪಿ ಮಾಡಿ ಸಿಕ್ಕಿಹಾಕಿಕೊಂಡಿದ್ದಾರೆ.

ಪ್ರಮೇಯ 2: ಚಿಮೂ ಒರಿಜಿನಲ್, ಸೂಕಾ ಕಾಪಿಕ್ಯಾಟ್!

ಸಾಧನೆ : ಪ್ರಮೇಯ 1ರಲ್ಲಿ ಹೇಳಿದಂತೆ ಚಿಮೂ ಲೇಖನ ಪ್ರಕಟವಾದದ್ದು 1993ರಲ್ಲಿ ಇರಬಹುದು. ಆದರೆ ಅವರು ಸೂಕಾಗೂ ಮೊದಲೇ ಅಂದರೆ 1975ಕ್ಕೂ ಮೊದಲೇ ಬರೆದು ಇಟ್ಟುಕೊಂಡಿರಬಹುದು ಅಲ್ಲವೇ? ಅದಕ್ಕೆ ಪುರಾವೆಯಾಗಿ ಲೇಖನದ ಮೊದಲ ಸಾಲಲ್ಲೇ 'ಬೆಂಗಳೂರು : ಮೈಸೂರು ರಾಜ್ಯದ ಪ್ರಸಕ್ತ ರಾಜಧಾನಿ' ಎಂದಿದೆ. ಅಂದರೆ 'ಕರ್ನಾಟಕ' ಉದಯಕ್ಕೂ ಮೊದಲೇ (1972ಕ್ಕೂ ಮುಂಚೆ) ಚಿಮೂ ಇದನ್ನು ಬರೆದಿದ್ದಾರೆ. ಸೂಕಾ ಸಹ 1975ರಲ್ಲಿ ಪ್ರಕಟಗೊಂಡ ಲೇಖನವನ್ನು 1972ಕ್ಕಿಂತಲೂ ಮೊದಲೇ ಬರೆದಿರಬಹುದೇ ಎನ್ನುವ ಪ್ರಶ್ನೆ ಬರಬಹುದು. ಆದರೆ ಬೆಂಗಳೂರು ಕುರಿತ ಲಭ್ಯ ಮೂರು ಲೇಖನಗಳಲ್ಲೂ 'ಬೆಂಗಳೂರು : ಕರ್ನಾಟಕ ರಾಜ್ಯದ ಪ್ರಸಕ್ತ ರಾಜಧಾನಿ' ಎಂದಿರುವುದರಿಂದ ಅವರು 1972ಕ್ಕೂ ಮೊದಲು ಬರೆದಿರಲಾರರು. ಸೋ ಚಿಮೂ ಒರಿಜಿನಲ್, ಸೂಕಾ ಕಾಪಿಕ್ಯಾಟ್ ಅಂತಾಯ್ತು.

ಪ್ರಮೇಯ 3: ಚಿಮೂ, ಸೂಕಾ-ಇಬ್ಬರೂ ಕಾಪಿಕ್ಯಾಟ್

ಸಾಧನೆ : ಚಿಮೂದೇ ಒರಿಜಿನಲ್ ಆಗಿದ್ದರೆ ಅವರು ಸೂಕಾ ವಿರುದ್ಧ ಕೆಂಡಕಾರಬೇಕಿತ್ತು. ಸೂಕಾದೇ ಒರಿಜಿನಲ್ ಆಗಿದ್ದರೆ ಅವರು ಚಿಮೂ ವಿರುದ್ಧ ಎದ್ದು ನಿಲ್ಲಬೇಕಿತ್ತು. ನಮಗೆ ಕಂಡುಬಂದ ಪ್ರಕಾರ, ಈ ಎರಡೂ ಆಗಿಲ್ಲ. ಚಿಮೂ, ಸೂಕಾ ಅಣ್ಣ-ತಮ್ಮಂದಿರಂತೇ ಇದ್ದಾರೆ.

ಆ ಕಾರಣದಿಂದ ಮೂಲ ಸಂಶೋಧನೆಯನ್ನು ಯಾರೋ ಮಾಡಿದ್ದು, ಚಿಮೂ, ಸೂಕಾ ಇಬ್ಬರೂ ಆ ಮೂಲ ಸಂಶೋಧನೆಯ ಪ್ರಮುಖ ಅಂಶಗಳನ್ನು ಕಾಪಿ ಮಾಡಿ, ಜಂಟಿಯಾಗಿ ಲೇಖನ ಬರೆದಿರಬಹುದು ಎಂದು ತರ್ಕಿಸಬಹುದೇನೋ?

* * * * * *

ಹುಡುಗಾಟ ಸಾಕು ಬಿಡಿ. ಆದರೆ ಹರಿಹರಪ್ರಿಯ ಎತ್ತಿರುವ 'ಸೀರಿಯಸ್' ಪ್ರಶ್ನೆಗಳಿಗೆ ಉತ್ತರಿಸುವ ಜವಾಬ್ದಾರಿ ಈಗ ಚಿಮೂ, ಸೂಕಾ ಮೇಲಿದೆ. ಅಂತೆಯೇ ಇತರರೂ ಕಾಮೆಂಟು ಮಾಡಬಹುದು.

● ಪಿ.ಕೆ.ಮಲ್ಲನಗೌಡರ್

ನೀನಾಸಂ 'ಆಕಾಶಭೇರಿ': ಒಂದು ಸಕಾಲಿಕ ಕ್ರಾಂತಿಗೀತೆ...

ಈ ಸಲದ ನೀನಾಸಂ 'ತಿರುಗಾಟ'ದ ನಾಟಕ 'ಆಕಾಶಭೇರಿ' ಎಲ್ಲ ಕಡೆ ಜನಮೆಚ್ಚುಗೆ ಗಳಿಸುತ್ತಿದೆ. ಹದಿನೈದು ದಿನಗಳ ಅಂತರದಲ್ಲೇ ಬೆಂಗಳೂರಿನಲ್ಲಿ ಎರಡು ಫುಲ್‌ಪ್ಯಾಕ್ಡ್ ಶೋ ನಡೆದಿವೆ.


ಕ್ರಾಂತಿಕಾರಿ ಭಗತ್‌ಸಿಂಗ್ ಮತ್ತಾತನ ಸಂಗಾತಿಗಳ ಸ್ವಾತಂತ್ರ್ಯ ಹೋರಾಟದ ಕತೆಯ 'ಆಕಾಶಭೇರಿ' (ಮೂಲ ಹಿಂದಿ: ಪಿಯೂಷ್ ಮಿಶ್ರಾ, ಅನು: ಸಿದ್ದಲಿಂಗ ಪಟ್ಟಣಶೆಟ್ಟಿ) ನೈಜ ಸ್ವಾತಂತ್ರ್ಯದ ಕಲ್ಪನೆಯನ್ನು ಮೂಡಿಸುವುದರೊಂದಿಗೆ, ಸ್ವಾತಂತ್ರ್ಯ ಹೋರಾಟದಲ್ಲಿನ ವೈರುಧ್ಯ ವಿಫಲತೆಗಳನ್ನು ಸೂಕ್ಷ್ಮವಾಗಿ ತೆರೆದಿಡುತ್ತದೆ. ಸಂಜಯ ಉಪಾಧ್ಯಾಯ ಅವರ ನಿರ್ದೇಶನದಲ್ಲಿ ನೀನಾಸಂನ ಯುವ ಕಲಾವಿದರು ಅತ್ಯಂತ ಶ್ರದ್ಧೆಯಿಂದ ಅಭಿನಯಿಸಿದ ಈ ನಾಟಕದ ಹೈಲೈಟ್ ಫೋರ್ಸ್‌ಫುಲ್ ಹಿಂದಿ ಹಾಡುಗಳು, ಆ ಹಾಡುಗಳಿಗೆ ಅಳವಡಿಸಿರುವ ಗಂಭೀರ ಆದರೆ ಬಿರುಸು ಎನ್ನುವಂತಹ ರೋಮಾಂಚಕ ನೃತ್ಯ ಸಂಯೋಜನೆ.



ಅಲ್ಲಲ್ಲಿ ಗಾಂಧಿ, ನೆಹರೂ ಮಾದರಿಯ ಹೋರಾಟದ ಬಗ್ಗೆ ವಿಮರ್ಶಾತ್ಮಕ ಸಂಭಾಷಣೆಗಳಿರುವ ಈ ನಾಟಕ ಒಂದು ಅಚ್ಚುಕಟ್ಟಾದ ಕ್ರಾಂತಿಗೀತೆಯಂತೆ ಭಾಸವಾಗುತ್ತದೆ. ನೆರಳು-ಬೆಳಕಿನ ಸಂಯೋಜನೆ, ಸಂಗೀತ ಕತೆಗೆ ಪೂರಕವಾಗಿವೆ.

'ಪುನರ್ಜನ್ಮದಲ್ಲಿ ನಾನವಳ ಎದೆಗೊರಗಿ ನನ್ನ ಪ್ರೀತಿ ನಿವೇದಿಸುವೆ' ಎಂದು ನಾಸ್ತಿಕ, ಕಮ್ಯೂನಿಸ್ಟ್ ಭಗತ್‌ಸಿಂಗ್ ಪಾತ್ರ ಹೇಳುವುದು ಮತ್ತು ಆತನ ಸಂಗಾತಿಯೊಬ್ಬ ಮಡಿದಾಗ ಅವನಿಗೆ ಬ್ರಾಹ್ಮಣ ಸಂಸ್ಕಾರದಂತೆ ಅಂತ್ಯ ಸಂಸ್ಕಾರ ಮಾಡುವುದು ಅಭಾಸದಂತೆ ಕಾಣುತ್ತವೆ ಎನ್ನುವುದನ್ನು ಬಿಟ್ಟರೆ, ಒಟ್ಟಾರೆಯಾಗಿ ಇದೊಂದು ಸಕಾಲಿಕ ಪ್ರಯೋಗ.

● ಮಲ್ಲಿ



ಬಿಜೆಪಿ ಮಾನ ಬೀದಿಪಾಲು

ರೌಡಿಗಳ ವಿರುದ್ಧ ಕೇಡಿಗಳ ಜಗಳ

ಯಡ್ಡಿ ಬಾಲವನ್ನು ರೆಡ್ಡಿಗಳು ಕತ್ತರಿಸಿದರೋ, ಇಲ್ಲಾ ರೆಡ್ಡಿಗಳ ರೆಕ್ಕೆಪುಕ್ಕಗಳನ್ನು ಯಡ್ಡಿಯೇ ಕತ್ತರಿಸಿ ಬಿಸಿ ಮುಟ್ಟಿಸುವಲ್ಲಿ ಯಶಸ್ವಿಯಾದರೋ..... ಏನೊಂದೂ ಸ್ಪಷ್ಟವಾಗಿ ಬೆಳಕಿಗೆ ಬರದೆ ಬಿಜೆಪಿಯೊಳಗಿನ ಗಲಾಟೆ ಮುಂದುವರೆಯುತ್ತಿದೆ.



ಆದರೆ ಈ ಕೆಟ್ಟಾಕೊಳಕು ಜಗಳದಿಂದಾಗಿ ಬಿಜೆಪಿಯ ಮಾನವಂತೂ ಬೀದಿಪಾಲಾಗಿದೆ.

ಮೆರಿಟ್ ದೃಷ್ಟಿಯಿಂದ ಹೇಳಬೇಕೆಂದರೆ ಜಗಳಕ್ಕೆ ಬಿದ್ದಿರುವ ಎರಡೂ ಗುಂಪುಗಳವರು ಭ್ರಷ್ಟಾಚಾರ, ಲೂಟಿ, ದುರಾಡಳಿತದಲ್ಲಿ ಸಮಾನರೇ ಆಗಿದ್ದಾರೆ. ಯಡ್ಡಿ-ರೆಡ್ಡಿಗಳ ಜಗಳ ಕರ್ನಾಟಕದ ಜನರಿಗೆ ಹೇಗೆ ಒಳ್ಳೇದು ಮಾಡಬೇಕೆಂಬ ಬಗೆಗಿನ ಜಗಳವಾಗಿಲ್ಲ. ಬದಲಿಗೆ, ತಮ್ಮ ತಮ್ಮ ಬಲ ಹೆಚ್ಚಿಸಿಕೊಳ್ಳಲು ಯಡ್ಡಿ-ರೆಡ್ಡಿಗಳು ನಡೆಸುತ್ತಿರುವ ತಂತ್ರ-ಕುತಂತ್ರಗಳ ಪ್ರಹಸನವಾಗಿದೆ.

ಈ ಲೇಟೆಸ್ಟ್ ಕದನದಲ್ಲಿ ರೆಡ್ಡಿ ಬ್ರದರ್ಸ್ ಜಗದೀಶ್ ಶೆಟ್ಟರ್ ಎಂಬ ಧೈರ್ಯವಿರದ ಕುದುರೆಯ ಮೂಗಿಗೆ ಕಟ್ಟಿರುವ ಸಿಎಂ ಕುರ್ಚಿಯೆಂಬ ಕ್ಯಾರೆಟ್ ಮಾತ್ರ ಅತಂತ್ರವಾಗಿ ನೇತಾಡುತ್ತಲೇ ಇದೆ.

ಬಗಲ್ ಮೆ ದುಷ್ಮನ್

ಈ ಬಾರಿಯ ಜಗಳದಲ್ಲಿ ಅತ್ಯಂತ ಕರುಣಾಜನಕವಾಗಿ, ಹಾಸ್ಯಾಸ್ಪದವಾಗಿ ಕಾಣಿಸುತ್ತಿರುವುದು ಶ್ರೀಮಾನ್ ಯಡಿಯೂರಪ್ಪ ವಿನಃ ಬೇರ್‍ಯಾರೂ ಅಲ್ಲ. ಹಾಲಿ ಬಿಜೆಪಿಯಲ್ಲಿರುವ ನೂರಿಪ್ಪತ್ತು ಚಿಲ್ಲರೆ ಶಾಸಕರ ಪೈಕಿ 70 ಜನ ಜಗದೀಶ್ ಶೆಟ್ಟರ್ ಪರವಾಗಿದ್ದಾರೆ. ಇನ್ನು ದುರಂತ ಏನೆಂದರೆ ಯಡ್ಡಿ ಸರ್ಕಾರದಲ್ಲೇ ಮಂತ್ರಿಗಳಾಗಿರುವ ಶಿವನಗೌಡ ನಾಯಕ್, ಆನಂದ್ ಅಸ್ನೋಟಿಕರ್, ಗೂಳಿಹಟ್ಟಿ ಶೇಖರ್, ಸುಧಾಕರ್, ಜಾರಕಿಹೊಳಿ, ರೇವೂನಾಯಕ್, ಉದಾಸಿ ಮುಂತಾದವರು ರೆಡ್ಡಿ ಕ್ಯಾಂಪಿನಲ್ಲಿ ಗುರುತಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ ನಿಗಮ ಮಂಡಳಿಗಳಲ್ಲಿರುವ ರೇಣುಕಾಚಾರ್ಯ, ನರಸಿಂಹಸ್ವಾಮಿಗಳಿಗೂ ಯಡ್ಡಿ ಬಗ್ಗೆ ಅಸಹ್ಯವಿದೆ. ಇವರೊಂದಿಗೆ ಬಂಡಾಯ ಗುಂಪಿನ ಲೀಡರ್‌ಗಳಾಗಿರುವ ಜನಾರ್ದನ ರೆಡ್ಡಿ ಕರುಣಾಕರ ರೆಡ್ಡಿ, ಮೇಕಪ್ ರಾಮುಡು, ಸ್ಪೀಕರ್ ಶೆಟ್ಟರ್, ಸಂಸದರಾದ ಶಾಂತಾ, ಫಕೀರಪ್ಪ, ಅನಂತ್‌ಕುಮಾರ್‌ರ ಸಿಟ್ಟು ಸೇಡುಗಳನ್ನು ಒಂದು ತಕ್ಕಡಿಯಲ್ಲಿಟ್ಟು ನೋಡಿದರೆ ಯಡ್ಡಿ ಈಗಲೂ ಬಿಜೆಪಿಯ ಅಲ್ಪಸಂಖ್ಯಾತ ಬೆಂಬಲಿಗರ ನಾಯಕನೇ ವಿನಃ ಸರ್ವಸಮ್ಮತ ಲೀಡರ್ ಅಲ್ಲ.



ಇವರೆಲ್ಲಾ ಯಡ್ಡಿಯ ಅಕ್ಕಪಕ್ಕದಲ್ಲೇ ತಿರುಗಾಡಿಕೊಂಡಿದ್ದೂ ಜಗಳ ಶುರುವಾದ ತಕ್ಷಣ ಯಡ್ಡಿ ವಿರೋಧಿ ಕ್ಯಾಂಪಿಗೆ ಬಹಿರಂಗವಾಗಿಯೇ ಹಾರುತ್ತಿದ್ದಾರೆ. ಯಡ್ಡಿಯ ದುಷ್ಮನ್‌ಗಳು ಬಗಲಲ್ಲೇ ಇದ್ದಾರೆ ಮತ್ತು ಯಡ್ಡಿಯ ಕಂಟ್ರೋಲಿನಲ್ಲಿಲ್ಲ.

ಈ ಬಂಡಾಯ ಬೆಳೆಸಲು ರೆಡ್ಡಿಗಳು ಮಾಡಿದ ತಂತ್ರ, ಅದಕ್ಕೆ ಯಡ್ಡಿ ಹೂಡಿದ ಪ್ರತಿತಂತ್ರ ಬಹಳ ರಂಜಕವಾಗಿವೆ. ರೆಡ್ಡಿಗಳು ಹೈದರಾಬಾದ್, ಗೋವಾ, ಬೆಂಗಳೂರುಗಳಲ್ಲೆಲ್ಲಾ ಶಾಸಕರ ಸೀಕ್ರೆಟ್ ಮೀಟಿಂಗ್ ಎಂದು ಟಾಂಟಾಂ ಹೊಡೆದರಾದರೂ ಬಳ್ಳಾರಿ ಬಿಟ್ಟು ಕದಲಿರಲಿಲ್ಲ, ಇತ್ತ ಯಡ್ಡಿ ಒಂದು ಹಂತದಲ್ಲಿ ಯಾವ ಲೆವೆಲ್‌ಗೆ ಹೋದರೆಂದರೆ ಬಿಜೆಪಿಯನ್ನೇ ಒಡೆದು ಜೆಡಿಎಸ್ ಸಖ್ಯ ಬೆಳೆಸಲೂ ರೆಡಿ ಎಂಬರ್ಥದ ಸಿಗ್ನಲ್ ಅನ್ನು ಹೈಕಮಾಂಡಿಗೂ ರವಾನಿಸಿದರು. ಆ ತಂತ್ರದ ಭಾಗವಾಗಿಯೇ ನೆರೆ ಸಂತ್ರಸ್ತರಿಗೆ ಮನೆ ನಿರ್ಮಿಸಿ ಕೊಡುವ ಕಾರ್ಯಕ್ರಮದ ಉದ್ಘಾಟನೆಗೆ ದೇವೇಗೌಡರನ್ನೇ ಕರೆಸುವ ಮಾತಾಡಿದ್ದರು. ಗೌಡರು ಇದಕ್ಕೆ ಒಪ್ಪುತ್ತಿದ್ದರಾ ಎಂಬುದು ಬೇರೆ ಮಾತು. ಆದರೆ ಯಡ್ಡಿ ತಮ್ಮ ಸಿಎಂಗಿರಿ ಉಳಿಸಿಕೊಳ್ಳಲು ಬಿಜೆಪಿ ಪಾರ್ಟಿಗೆ ಸೂಯಿಸೈಡ್ ಬಾಂಬರ್ ಆಗಲೂ ತಯಾರಿದ್ದರೆಂಬುದೇ ಗಮನಾರ್ಹ ವಿಚಾರ. ಈ ದಿಸೆಯಲ್ಲಿ ಘಟನೆಗಳು ಚಲಿಸಿದ್ದವೆನ್ನಲು ಒಂದು ಸಾಕ್ಷಿಯೂ ಇದೆ. ತೀರಾ ಇತ್ತೀಚೆಗೆ ಎಚ್.ಡಿ. ಕುಮಾರಸ್ವಾಮಿ ಮಾಗಡಿಗೆ ಹೋಗಿದ್ದಾಗ 'ಜೆಡಿಎಸ್ ಶಾಸಕ ಬಾಲಕೃಷ್ಣ ಇನ್ನೆರಡು ತಿಂಗಳಲ್ಲಿ ಮಂತ್ರಿ ಆಗಲಿದ್ದಾರೆ' ಎಂದು ಭಾಷಣದಲ್ಲಿ ಹೇಳಿದ್ದರು!

ಏನಿದರ ಅರ್ಥ?


ಬಿಜೆಪಿಯ ಯಡ್ಡಿ ಬಣ ಹಾಗೂ ಜೆಡಿಎಸ್‌ನ ಪುನರ್ ಮೈತ್ರಿಯ ಒಂದು ಸಾಧ್ಯತೆಯ ಬಾಗಿಲನ್ನು ಯಡ್ಡಿ ತೆರೆದಿಟ್ಟುಕೊಂಡಿರಲು ಯತ್ನಿಸಿದ್ದರೆಂದು ತಾನೆ? ಯಡ್ಡಿಯ ಈ ಮೂವ್ ಪ್ರಧಾನವಾಗಿ ಬಿಜೆಪಿ ಹೈಕಮಾಂಡ್‌ಗೆ ಹಾಗೂ ರೆಡ್ಡಿಗಳಿಗೆ ತಾನು ಯಾವುದಕ್ಕೂ ರೆಡಿ ಎಂದು ಸೂಚಿಸುವುದೇ ಆಗಿತ್ತು. ಆದರೆ ಈ ದಿಕ್ಕಿನೆಡೆಗೆ ನಂತರ ಏನೂ ಘಟಿಸಲಿಲ್ಲವಾದರೂ ಯಡ್ಡಿಯ ಈ ತಂತ್ರಕ್ಕೆ ರೆಡ್ಡಿಗಳು ಬ್ರಹ್ಮಾಸ್ತ್ರ ಒಂದನ್ನು ರೆಡಿ ಮಾಡಿಕೊಳ್ಳುತ್ತಿದ್ದಾರೆ.

ಮುಂದೈತೆ ಮಾರಿಹಬ್ಬ

ಈ ಬಾರಿಯ ಬಂಡಾಯ ವಿಫಲವಾದರೆ, ಅಕಸ್ಮಾತ್ ಯಡ್ಡಿಯ ನಾಯಕತ್ವ ಬದಲಾವಣೆಗೆ ಬಿಜೆಪಿ ಹೈಕಮಾಂಡ್ ಒಪ್ಪದೆ ಹೋದರೆ ಅಂತಿಮ ಬ್ರಹ್ಮಾಸ್ತ್ರವೊಂದು ರೆಡ್ಡಿಗಳ ಬಳಿ ರೆಡಿಯಾಗುತ್ತಿದೆ. ಬಳ್ಳಾರಿ, ಹೈದರಾಬಾದ್ ಹಾಗೂ ದೆಹಲಿಯ ರೆಡ್ಡಿ ವಲಯಗಳ ಪ್ರಕಾರ ಅದು ಯಡ್ಡಿಗೆ ರಾಜಕೀಯ ಬಿಕ್ಕಟ್ಟು ಸೃಷ್ಟಿಸಿ ಹೊರದೂಡುವ ಒಂದು ತಂತ್ರ.

ಅದೇನೆಂದರೆ ಬಿಜೆಪಿಯ ಕನಿಷ್ಠ 20 ಶಾಸಕರನ್ನು ರಾಜೀನಾಮೆ ಕೊಡಿಸಿ ಯಡ್ಡಿ ಸರ್ಕಾರವನ್ನು ಅತಂತ್ರ ಸ್ಥಿತಿಗೆ ತಳ್ಳಿಬಿಡುವುದು! ಆಗ ಸರಳ ಬಹುಮತವೂ ಇರದೆ ಯಡ್ಡಿ ರಾಜೀನಾಮೆ ಕೊಡಬೇಕಾಗುತ್ತದೆ ಅಥವಾ ಸರ್ಕಾರ ವಿಸರ್ಜನೆಯಾಗಬೇಕಾಗುತ್ತದೆ. ಏನಿಲ್ಲವೆಂದರೂ ಕನಿಷ್ಠಪಕ್ಷ ಪ್ರೆಸಿಡೆಂಟ್ ರೂಲ್ ಆದರೂ ಬಂದೇ ಬರಬೇಕು ತಾನೆ?

ಅಂತಹ ಒಂದು ಅವಕಾಶ ಕೂಡ ರಾಜ್ಯ ಕಾಂಗ್ರೆಸ್‌ಗೆ ಬೇಕಾಗಿದೆ. ಏಕೆಂದರೆ ಕಳೆದ ವರ್ಷ ಅಧಿಕಾರಕ್ಕೆ ಬಂದಾಗಿನಿಂದ ಬಿಜೆಪಿ ಎಲ್ಲೆಡೆ ತನ್ನ ಶಕ್ತಿಯನ್ನು ವೃದ್ಧಿಸಿಕೊಳ್ಳುತ್ತಿದೆಯಲ್ಲದೇ ಪ್ರತಿ ಹಂತದಲ್ಲೂ ತನ್ನ ಆರೆಸ್ಸೆಸ್ ಸಿದ್ಧಾಂತವಾದ ಕೋಮುದ್ವೇಷವನ್ನು ಹರಡಿಸುತ್ತಿದೆ. ಆ ಕಾರಣಕ್ಕೆ ಪ್ರತಿ ಸರ್ಕಾರಿ ಯೋಜನೆಗಳಲ್ಲಿ ಆರೆಸ್ಸೆಸ್ ಮತ್ತು ಬಿಜೆಪಿಯ ಕಾರ್ಯಕರ್ತರನ್ನೇ ತೊಡಗಿಸುತ್ತಾರೆ. ಇದೆಲ್ಲದರ ಜೊತೆಗೆ ಬಿಜೆಪಿಯ ಪ್ರತಿ ಮಂತ್ರಿ ಮತ್ತು ಜಿಲ್ಲಾ ನಾಯಕರು ಮನಸೋಇಚ್ಛೆ ರಾಜ್ಯವನ್ನೇ ಲೂಟಿ ಮಾಡಿ ತಮ್ಮ ತಿಜೋರಿಗಳನ್ನು ತುಂಬಿಕೊಳ್ಳುತ್ತಿದ್ದಾರೆ. ಇದು ಬರುವ ಮೂರು ವರ್ಷಗಳ ಕಾಲ ಹೀಗೆ ಮುಂದುವರೆದರೆ ಮುರುದಿನ ಚುನಾವಣೆಯ ಹೊತ್ತಿಗೆ ಬಿಜೆಪಿ ಅಪಾರ ಹಣ ಬಲವನ್ನು ಹೊಂದಿರುತ್ತದಲ್ಲದೆ, ರಾಜ್ಯದೆಲ್ಲೆಡೆ ತನ್ನ ಹಿಂದೂತ್ವವಾದಿ ಸಿದ್ಧಾಂತದಿಂದ ಸಮಾಜವನ್ನೂ ಧರ್ಮದ ಹೆಸರಲ್ಲಿ ಒಡೆದುಹಾಕಿರುತ್ತಾರೆ. ಆಗ ಅದನ್ನು ಮತಪೆಟ್ಟಿಗೆಯಲ್ಲಿ ಎದುರಿಸುವುದು ಕಷ್ಟ ಎಂಬ ಭಾವನೆ ಕೆಲ ಕಾಂಗ್ರೆಸ್ಸಿಗರದ್ದು.



ಆದ್ದರಿಂದ, ಬಿಜೆಪಿಯೇ ಈಗ ತೋಡಿಕೊಂಡಿರುವ ಹಳ್ಳಕ್ಕೆ ಬಿದ್ದು ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಬಂದರೆ ಇತ್ತ ಬಿಜೆಪಿಯ ಲೂಟಿಯನ್ನು ತಡೆಯಬಹುದು, ಅತ್ತ NREGA ತರಹದ ಕಾರ್ಯಕ್ರಮಗಳ ಮುಖಾಂತರ ಕಾಂಗ್ರೆಸ್‌ಗೂ ಒಂದಿಷ್ಟು ಜನಪ್ರಿಯತೆಯನ್ನು ತಂದುಕೊಡಬಹುದು ಎಂಬುದು ಕಾಂಗ್ರೆಸ್‌ನ ಲೆಕ್ಕಾಚಾರ ಆಕಸ್ಮಾತ್ ಅಂಥ ಸನ್ನಿವೇಶ ಬಂದಲ್ಲಿ ಇನ್ನಾರು ತಿಂಗಳ ನಂತರ ಹೊಸ ಚುನಾವಣೆಯಲ್ಲಿ ಕಾಂಗ್ರೆಸ್ ಜೆಡಿಎಸ್ ಮೈತ್ರಿಯಾಗಿ (ಮಹಾರಾಷ್ಟ್ರದ ಕಾಂಗ್ರೆಸ್-ಎನ್‌ಸಿಪಿ ರೀತಿ) ಹೋರಾಡಿ ಗೆದ್ದು.... ಹೀಗೆ ಅನೇಕ ತರ್ಕಗಳು ಈಗ ಹರಿದಾಡುತ್ತಿವೆ.

ಈ ಸನ್ನಿವೇಶ ಉದ್ಭವವಾಗಬೇಕೆಂದರೆ ಎರಡು ಮೂರು ಮುಖ್ಯ ವಿಷಯಗಳು ಈ ಹಂತದಲ್ಲೇ ಬಗೆಹರಿಯಬೇಕಾಗುತ್ತದೆ.

ಒಂದು, ಕಾಂಗ್ರೆಸ್ ಹೈಕಮಾಂಡ್ ಈಗಾಗಲೇ ರೆಡ್ಡಿಗಳ ಜೊತೆ ಈ ಬಗ್ಗೆ ಮಾತಾಡಿಕೊಳ್ಳಬೇಕು. ದೇವೇಗೌಡ ರೆಡ್ಡಿಗಳ ಜಗಳ ನಿಲ್ಲಬೇಕು-ಹೀಗೆ....

ರಾಜಕೀಯದಲ್ಲಿ ಅಸಾಧ್ಯ ಯಾವುದಿದೆ?

ಯಡ್ಡಿಗಾದರೆ ರಾಜಕೀಯದಲ್ಲಿ ಸೋಲು-ಗೆಲುವಿನ ಆಟ ಎರಡೂ ಗೊತ್ತು. ಆದರೆ ಕಳೆದ 10 ವರ್ಷಗಳ ರಾಜಕೀಯ ಜೀವನದಲ್ಲಿ ಬಳ್ಳಾರಿ ರೆಡ್ಡಿಗಳು ಸೋಲುವಂಥ ಒಂದೇ ಒಂದು ಆಟವನ್ನು ಆಡಿಲ್ಲ. ಅವರು ಸೋಲೊಪ್ಪುವವರೂ ಅಲ್ಲ.

ಯಡ್ಡಿಗೆ ಬರಬಹುದಾದ ದೌರ್ಭಾಗ್ಯ, ಜಗದೀಶ್ ಶೆಟ್ಟರ್‌ಗೆ ಒಲಿಯಬಹುದಾದ ಸೌಭಾಗ್ಯವೆಲ್ಲವೂ ಇದರಲ್ಲೇ ಅಡಗಿದೆ.

● ಪಾರ್ವತೀಶ್

ಯಡ್ಡಿಗೆ ಹೆಡೆಮುರಿ ಕಟ್ಟಲು ಶೆಟ್ಟರ್ ಯಾಕೆ ಬೇಕು?

ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ರಾಜ್ಯ ಬಿಜೆಪಿಯ ತಿಜೋರಿ ರೆಡ್ಡಿ ಬ್ರದರ್ಸ್ ನಡುವಿನ ಮುಸುಕಿನ ಗುದ್ದಾಟವೀಗ ಬಹಿರಂಗ ಬೀದಿ ಕಾಳಗದ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ ಎಲ್ಲರಿಗಿಂತ ಹೆಚ್ಚು ಖುಷಿಯಾಗುತ್ತಿರುವುದು ಉತ್ತರ ಕರ್ನಾಟಕದ ಪ್ರಭಾವಿ ಲಿಂಗಾಯತ ಲೀಡರ್ ಹಾಗೂ ವಿಧಾನಸಭೆಯ ಹಾಲಿ ಸ್ಪೀಕರ್ ಜಗದೀಶ್ ಶೆಟ್ಟರ್ ಅವರಿಗೆ. ಯಾಕೆಂದರೆ, ಯಡ್ಡಿಯನ್ನು ಹೆಡೆಮುರಿ ಕಟ್ಟಿ ಕೆಡವದಕ್ಕೆ ರೆಡ್ಡಿ ಬ್ರದರ್ಸ್ ಜಗದೀಶ್ ಶೆಟ್ಟರ್‌ನನ್ನೇ ಮುಂದೆಬಿಟ್ಟಿರುವುದರಿಂದ ಯಡ್ಡಿ ಸರ್ಕಾರದಲ್ಲಿ ಕನಿಷ್ಠ ಒಂದು ಚಿಕ್ಕ ಮಂತ್ರಿಗಿರಿಯೂ ಸಿಗದೇ ಸ್ಪೀಕರ್ ಎಂಬ ಕೆಲಸಕ್ಕೆ ಬಾರದ ಅಲಂಕಾರದ ಕುರ್ಚಿಗೆ ದೂಡಲ್ಪಟ್ಟಿದ್ದ ಶೆಟ್ಟರ್‌ಗೆ ಮುಖ್ಯಮಂತ್ರಿಯಾಗುವ ದಿಢೀರ್ ಯೋಗ ಬಂದುಬಿಟ್ಟಿದೆ. ಹಾಗಾಗಿ, ಸ್ವರ್ಗಕ್ಕೆ ಇನ್ನೇನು ಮೂರೇ ಗೇಣು ಎಂಬಂತಹ ಸ್ಥಿತಿಯಲ್ಲಿರುವ ಶೆಟ್ಟರ್ ಮುಖದಲ್ಲಿ ಮಂದಹಾಸ ಮೂಡಿದೆ.



ಮುಖ್ಯಮಂತ್ರಿಯಾಗೇ ಬಿಟ್ಟೆ ಎಂಬಂತೆ ಪೋಜು ಕೊಡುತ್ತಾ ಬಹಳ ಲವಲವಿಕೆಯಿಂದ ಸುತ್ತೂರು ಮಠಕ್ಕೆ ಹೋಗಿ ಶಿವರಾತ್ರೀಶ್ವರ ದೇಶೀಕೇಂದ್ರ ಸ್ವಾಮಿಗೆ ಅಡ್ಡಬಿದ್ದು ಬಂದಿದ್ದಾರೆ.

ಇಷ್ಟಕ್ಕೂ ರೆಡ್ಡಿಗಳು ಎಲ್ಲರನ್ನು ಬಿಟ್ಟು ಶೆಟ್ಟರ್ ಅನ್ನೇ ಯಡ್ಡಿ ವಿರುದ್ಧದ ಕದನದ ಕಣಕ್ಕೆ ಯಾಕೆ ಇಳಿಸಿದರು ಎಂಬ ಪ್ರಶ್ನೆಯೂ ಬಹಳ ಪ್ರಸ್ತುತವಾಗಿದೆ. ತೋಳ್ಬಲದ ಮೂಲಕ ಬೀದಿ ಕಾಳಗಕ್ಕೆ ಹೆಸರಾದ, ಭೂಗರ್ಭ ಬಗೆದು ಅದಿರನ್ನು ಲೂಟಿ ಮಾಡುವ ದಂಧೆಯಲ್ಲಿ ನಿಸ್ಸೀಮರಾದ, ರಾಜಕಾರಣಿಗಳನ್ನು ದುಡ್ಡು ಕೊಟ್ಟು ತರಕಾರಿಯಂತೆ ಖರೀದಿಸುವಲ್ಲಿ ಹೆಸರುವಾಸಿಯಾದ ರೆಡ್ಡಿಗಳು ತಂತ್ರ-ಕುತಂತ್ರಗಳನ್ನು ಹೆಣೆಯಬಲ್ಲ ಪ್ರಬುದ್ಧ ರಾಜಕಾರಣಿಗಳಾಗಿರುವುದನ್ನೂ ಶೆಟ್ಟರ್ ಆಯ್ಕೆ ತೋರಿಸುತ್ತದೆ.

ಯಡ್ಡಿ-ರೆಡ್ಡಿ ಜಗಳ ಬಹಿರಂಗ ಕಾಳಗವಾಗಿ ಪರಿವರ್ತನೆಯಾಗಿರುವಾಗ ಯಡ್ಡಿಯನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಡವಿ ತಾವೇ ಆ ಗಾದಿಯಲ್ಲಿ ಕುಳಿತುಕೊಳ್ಳುವುದಕ್ಕೆ ರೆಡ್ಡಿಗಳಿಗೆ ಸಾಧ್ಯವಿಲ್ಲ. ಅದಕ್ಕೆ ಹಲವು ಕಾರಣಗಳಿವೆ. ಮೊದಲನೇಯದಾಗಿ ಅವರು ಬಿಜೆಪಿಯಲ್ಲಿ ಸೈದ್ಧಾಂತಿಕವಾಗಿ, ರಾಜಕೀಯವಾಗಿ ಅಷ್ಟೊಂದು ಪ್ರಬುದ್ಧರೇನಲ್ಲ. ಬಿಜೆಪಿಯ ಬೆನ್ನಿಗಿರುವ ಆರೆಸ್ಸೆಸ್ ತನ್ನ ಹಿಂದೂತ್ವ ಸಿದ್ಧಾಂತ-ರಾಜಕೀಯಗಳನ್ನು ಅಂತರ್ಗತ ಮಾಡಿಕೊಂಡಿರುವ ಕಮಿಟೆಡ್ ನಾಯಕನೇ ಮುಖ್ಯಮಂತ್ರಿಯಾಗುವುದನ್ನು ಬಯಸುತ್ತದೆ. ರೆಡ್ಡಿಗಳಿಗೆ ಅಂಥ ಯಾವುದೇ ಸಿದ್ಧಾಂತ-ರಾಜಕೀಯದ ಗಂಧಗಾಳಿ ಗೊತ್ತಿಲ್ಲ. ಅವರೇನಿದ್ದರೂ ಬೀದಿಯಲ್ಲಿ ಹೊಡೆದಾಟ ಬಡಿದಾಟ ಮಾಡುವುದರಲ್ಲಿ ಸಿದ್ಧಹಸ್ತರು. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ಭೂಗರ್ಭವನ್ನು ಬಗೆದು ಮಣ್ಣಿನಿಂದ ಹೊನ್ನು ಮಾಡುವ ಗಣಿಗಾರಿಕೆ ದಂಧೆಯಲ್ಲಿ ಪಳಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಚೆಲ್ಲಬಲ್ಲ ಶಕ್ತಿಪಡೆದುಕೊಂಡವರು. ಅದೇ ಶೆಟ್ಟರ್ ಆದರೆ ಆರೆಸ್ಸೆಸ್‌ಗೂ ಅಂಥ ಸಮಸ್ಯೆಯೇನಿಲ್ಲ, ಏಕೆಂದರೆ ಶೆಟ್ಟರ್ ಆರಂಭದ ದಿನಗಳಿಂದಲೂ ಆರೆಸ್ಸೆಸ್‌ನ ಅಂಗಳದಲ್ಲಿ ಬೆಳೆದು ಅದರ ಹಿಂದೂತ್ವ ಸಿದ್ಧಾಂತವನ್ನು ಅಂತರ್ಗತ ಮಾಡಿಕೊಂಡವ



ಹೀಗಾಗಿ, ಯಡ್ಡಿ ತೊಲಗಲೇಬೇಕ ಎಂತಾದರೆ ಆ ಸ್ಥಾನಕ್ಕೆ ರೆಡ್ಡಿಗಳ ಬದಲಿ ಶೆಟ್ಟರ್ ಅವರೇ ಸೂಕ್ತ ಎಂದು ಸಹಜವಾ ಆರೆಸ್ಸೆಸ್‌ಗೆ ಅನ್ನಿಸುತ್ತದೆ. ರೆಡ್ಡಿಗಳು ಯ ವಿರುದ್ಧ ಶೆಟ್ಟರ್ ಅವರನ್ನು ಮುಂದೆ ನಿಲ್ಲಿ ವುದಕ್ಕೆ ಇದೂ ಒಂದು ಕಾರಣವಾಗಿದೆ

ಇನ್ನು ಎರಡನೇ ಹಾಗೂ ಅತಿ ಮು ಕಾರಣ ಜಾತಿ. ಕಳೆದ ಚುನಾವಣೆಯ ಲಿಂಗಾಯತರು ತಮ್ಮಲ್ಲಿನ ಒಳಪಂಗಡಗ ಕ್ಷುಲ್ಲಕ ರಾಜಕೀಯವನ್ನು ಬಿಟ್ಟು ಒಗ್ಗಟ್ಟಿನಿಂ 'ನಾವೆಲ್ಲರೂ ಲಿಂಗಾಯತರು, ಲಿಂಗಾಯ ನೊಬ್ಬ ಮುಖ್ಯಮಂತ್ರಿಯಾಗಲಿ' ಎಂದು ಪಾಲಿಡಾ ಬಿಜೆಪಿಗೆ ಓಟು ಹಾಕಿ ಯಡಿಯೂರಪ್ಪನನ್ನು ಮುಖ್ಯಮಂ ಮಾಡಿದ್ದರು. ಈಗ ದಿಢೀರನೇ ಬೇರೆ ಜಾತಿಯವರ ತಂದು ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸಿದರೆ ಇ ಲಿಂಗಾಯತ ಸಮುದಾಯದ ವಿರೋಧ ಕಟ್ಟಿಕೊ

▸▸▸ 13

ನೆರೆ ಸಂತ್ರಸ್ತರ ಹೆಸರಲ್ಲಿ ಯಡ್ಡಿ-ರೆಡ್ಡಿ ಹೊಲಸಾಟ

ಕರ್ನಾಟಕದ ರಾಜಕೀಯದ ಇತಿಹಾಸದಲ್ಲೇ ಹಿಂದೆಂದೂ ನೋಡಿರದಂತಹ ರಾಜಕೀಯದಾಟ ಕಳೆದೆರಡು ದಿನಗಳಿಂದ ಬೆಂಗಳೂರು ಮತ್ತು ಬಳ್ಳಾರಿಯಲ್ಲಿ ನಡೆಯುತ್ತಿದೆ. ಇದು ಒಂದು ರೀತಿಯಲ್ಲಿ ಆಯಾ ರಾಮ್ ಗಯಾ ರಾಮ್ ರಾಜಕೀಯಕ್ಕಿಂತಲೂ ಹೀನಾಯವಾಗಿದೆ. ರಾಜ್ಯ ಹಿಂದೆಂದೂ ಕಾಣದಂತಹ ಭೀಕರ ನೆರೆಯಿಂದ ತತ್ತರಿಸುತ್ತಿರುವ ಈ ಸಂಕಷ್ಟದ ಸಂದರ್ಭದಲ್ಲಿ, ಅದನ್ನೇ ನೆಪವಾಗಿಟ್ಟು ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳುತ್ತಿರುವ ಭಾರತೀಯ ಜನತಾ ಪಕ್ಷದ ರಾಜಕಾರಣಿಗಳ ಲಜ್ಜೆಗೇಡಿತನ ಮತ್ತೊಮ್ಮೆ ಸಾಬೀತಾಗಿದೆ.


ಕೆಎಂಎಫ್ ಕಬ್ಜಾ

ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಗಣಿಧಣಿಗಳಾದ ರೆಡ್ಡಿ ಬಣಗಳ ನಡುವೆ ಯುದ್ಧ ಆರಂಭವಾಗಿ ಆಗಲೇ ಒಂದು ವರ್ಷ ಸಂದುಹೋಗಿದೆ. ರಾಜ್ಯ ರಾಜಕೀಯದಲ್ಲಿ ತನ್ನ ಸಿಂಹಾಸನವನ್ನು ಅಲುಗಾಡಿಸಲು ರೆಡ್ಡಿ ಗ್ಯಾಂಗ್‌ಅನ್ನು ಬಿಟ್ಟರೆ ಬೇರೆ ಯಾರಿಂದಲೂ ಸಾಧ್ಯವಿಲ್ಲ ಎಂಬ ಸತ್ಯ ಅರಿತ ನಂತರ ಯಡಿಯೂರಪ್ಪ ರೆಡ್ಡಿ ಗ್ಯಾಂಗ್‌ಅನ್ನು ಮಟ್ಟ ಹಾಕಲು ಹೊಂಚು ಹಾಕಿ ಕುಳಿತಿದ್ದರು. ಉತ್ತರ ಕರ್ನಾಟಕದಲ್ಲಿ ಭೀಕರ ನೆರೆ ಅಪ್ಪಳಿಸಿದ ನಂತರ ಜನಜೀವನ ಅಸ್ತವ್ಯಸ್ಥವಾಗಿರುವ ಈ ಸಂದರ್ಭವೇ ರೆಡ್ಡಿಗಳನ್ನು ಮಟ್ಟಹಾಕಲು ಪ್ರಶಸ್ತ ಸಮಯ ಎಂಬುದು ಚತುರ ರಾಜಕಾರಣಿ ಯಡ್ಡಿಯ ಲೆಕ್ಕಾಚಾರ.

ಇದರ ಕಾರ್ಯತಂತ್ರದ ಫಲವಾಗಿಯೇ ಅದಿರು ಸಾಗಣೆ ಲಾರಿಗಳ ಮೇಲೆ ಒಂದು ಸಾವಿರ ರೂಪಾಯಿ ಸುಂಕವನ್ನು ವಿಧಿಸುವ ನಿರ್ಧಾರವನ್ನು ಯಡ್ಡಿ ತೆಗೆದುಕೊಂಡರು. ಮೇಲ್ನೋಟಕ್ಕೆ ಇದು ನೆರೆ ಸಂತ್ರಸ್ತರ ಪುನರ್ವಸತಿಗಾಗಿ ಯಡ್ಡಿ ಕೈಗೆತ್ತಿಕೊಂಡ ಅಪರೂಪದ ಕ್ರಮದಂತೆ ಕಂಡರೂ ವಾಸ್ತವವಾಗಿ ದಿನಕ್ಕೆ ಸುಮಾರು ಐವತ್ತು ಕೋಟಿ ರೂಪಾಯಿ ವಹಿವಾಟನ್ನು ನಡೆಸುವ ರೆಡ್ಡಿ ಗ್ಯಾಂಗಿನ ಆಧಿಪತ್ಯಕ್ಕೆ ಕಡಿವಾಣ ಹಾಕುವುದು ಯಡ್ಡಿಯ ಹಿಡನ್ ಅಜೆಂಡಾ ಆಗಿತ್ತು.

ಇದರ ಹಿಂದಿದ್ದ ಇನ್ನೊಂದು ಉದ್ದೇಶ: ಜನಪರ ಕಾರ್ಯಕ್ರಮಕ್ಕೆ ವಿಧಿಸಿದ ಸುಂಕವನ್ನು ರೆಡ್ಡಿ ಗ್ಯಾಂಗ್ ಬಹಿರಂಗವಾಗಿ ವಿರೋಧಿಸಲಾಗುವುದಿಲ್ಲ, ಒಂದು ವೇಳೆ ವಿರೋಧಿಸಿದರೆ ರೆಡ್ಡಿ ಗ್ಯಾಂಗ್ 'ಜನವಿರೋಧಿಗಳು' ಎಂಬ ಹಣೆಪಟ್ಟಿಗೆ ಒಳಗಾಗುತ್ತಾರೆ. ಹೀಗಾಗಿ ಸುಂಕವನ್ನು ವಿಧಿ ಇಲ್ಲದೆ ಒಪ್ಪಿಕೊಂಡು ಕೊಡಲೇಬೇಕು.... ಎಂಬಿತ್ಯಾದಿ ರಾಜಕೀಯ ಲೆಕ್ಕಾಚಾರ ಯಡ್ಡಿಯದ್ದಾಗಿತ್ತು.



ಹೀಗೆ ಸುಂಕವನ್ನು ವಿಧಿಸುವ ಮುಖಾಂತರ ರೆಡ್ಡಿ ಸಹೋದರರ ಜೇಬಿಗೆ ಕೈ ಹಾಕಿದ್ದಕ್ಕೆ ಕಾಂಗ್ರೆಸ್, ಜೆಡಿಎಸ್ ಪಕ್ಷದವರು ಮಾತ್ರವಲ್ಲ ನಾಡಿನ ಜನತೆ ಕೂಡಾ ತನಗೆ ಭೇಷ್ ಎನ್ನುತ್ತಾರೆ ಎಂಬುದು ಯಡ್ಡಿಯ ಕನಸಾಗಿತ್ತು. ಅಷ್ಟು ಮಾತ್ರವಲ್ಲ, ರಾಜಕೀಯವಾಗಿ ತನ್ನ ಅಲುಗಾಡಿಸಬಲ್ಲ ಶಕ್ತಿಯುಳ್ಳ ಗಣಿಧಣಿಗಳ ದನಿಯನ್ನೇ ಅಡಗಿಸಿದ ಕೀರ್ತಿ ತನ್ನದಾಗುತ್ತದೆ. ಆ ಮೂಲಕ ಇಡೀ ಪಕ್ಷವನ್ನು ತನ್ನ ತೆಕ್ಕೆಗೆ ಕೈಗೊಂಡ ಹಾಗಾಗುತ್ತದೆ ಎಂಬುದೂ ಯಡ್ಡಿಯ ಸುಂಕದ ಹಿಂದಿನ ಸಾರಾಂಶ.

ಹೀಗೆ, ಅತ್ತ ನೆರೆಯಲ್ಲಿ ಎಲ್ಲವನ್ನು ಕಳೆದುಕೊಂಡ ಉತ್ತರ ಕರ್ನಾಟಕದ ಜನತೆ ನರಳುತ್ತಿದ್ದರೆ, ಇತ್ತ ಅದನ್ನೇ ನೆಪ ಮಾಡಿಕೊಂಡು ಯಡ್ಡಿ ಮತ್ತು ರೆಡ್ಡಿ ಗ್ಯಾಂಗ್ ರಾಜಕೀಯದ ಚದುರಂಗ ಆಟವಾಡುತ್ತಿದ್ದಾರೆ. ಯಡ್ಡಿಯಾಗಲಿ, ರೆಡ್ಡಿ ಗ್ಯಾಂಗ್ ಆಗಲಿ ನೆರೆಯ ಸಂತ್ರಸ್ತರ ಬಗ್ಗೆ ಆಸಕ್ತಿ ವಹಿಸುವ ಬದಲು ತಮ್ಮ ತಮ್ಮ ಅಧಿಕಾರವನ್ನು ಗಟ್ಟಿ ಮಾಡಿಕೊಳ್ಳುವ ನಿಟ್ಟಿನಲ್ಲಿ ಹಗಲೂ ರಾತ್ರಿ ಆಲೋಚಿಸುತ್ತಿದ್ದಾರೆ. ತಮ್ಮ ಕೋಟ್ಯಾಂತರ ರೂಪಾಯಿಗಳ ವಹಿವಾಟಿಗೇ ಕೈಹಾಕುವ ಧೈರ್ಯ ತೋರಿದ ಯಡ್ಡಿ ಮುಂದೆ ಖಂಡಿತವಾಗಿಯೂ ತಮ್ಮನ್ನು ರಾಜಕೀಯವಾಗಿ ಮುಗಿಸಿಬಿಡುತ್ತಾನೆ ಎಂದು ಆತಂಕಗೊಂಡ ರೆಡ್ಡಿ ಗ್ಯಾಂಗ್ ಸಹಜವಾಗಿಯೇ 'ಮಾಡು ಇಲ್ಲವೇ ಮಡಿ' ಎಂಬಂತೆ ಈಗ ಅಖಾಡಕ್ಕೆ ಇಳಿದಿದ್ದಾರೆ. ಇಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಅದೇನೆಂದರೆ ಆಂಧ್ರದ ಮುಖ್ಯಮಂತ್ರಿ ವೈ.ಎಸ್. ರಾಜಶೇಖರ ರೆಡ್ಡಿ ಅಕಾಲಿಕ ಮರಣಕ್ಕೆ ಈಡಾದ ನಂತರ ಈ ರೆಡ್ಡಿ ಸಹೋದರರ ರಾಜಕೀಯ ಶಕ್ತಿ [illegible] ಕುಗ್ಗಿಹೋಗಿದೆ. ಇದನ್ನೇ ಉಪಯೋಗಿಸಿಕೊಂಡು ಅವರನ್ನು ರಾಜಕೀಯವಾಗಿ ಮುಗಿಸಲು ಯಡ್ಡಿ ಹೊರಟಿದ್ದಾರೆ.


'ಆಪರೇಷನ್ ಕಮಲ'

ಈ ಪೊಲಿಟಿಕಲ್ ಗೇಮ್ ನೋಡಿದಾಗ ಮೇಲ್ನೋಟಕ್ಕೆ ಸಿಎಂ ಬಗ್ಗೆ ಸಹಾನುಭೂತಿ ಕಾಣಿಸುತ್ತದೆ. ಆದರೆ ನೀವಂದುಕೊಂಡಂತೆ ಈ ಯಡ್ಡಿ ಸಾಚಾ ಏನಲ್ಲ. ರೆಡ್ಡಿ ಸಹೋದರರಿಗೂ ಸೈಲೆಂಟಾಗಿ ಕೊಳ್ಳಿ ಇಟ್ಟದ್ದೇ ಯಡ್ಡಿ. ಇಲ್ಲದಿದ್ದರೆ ರೆಡ್ಡಿ ಗ್ಯಾಂಗಿನ ಕಡುವೈರಿಯಾದ ಆಂಧ್ರದ ಹೊಸ ಮುಖ್ಯಮಂತ್ರಿ ರೋಸಯ್ಯರನ್ನು [illegible] ಕೂರಿಸಿ ಪೇಟ ತೊಡಿಸಿ ಸನ್ಮಾನಿಸುವ ಅಗತ್ಯವಾದರೂ ಏನಿತ್ತು? ಇದು ರೆಡ್ಡಿಗಳ ಗಾಯದ ಮೇಲೆ ಯಡ್ಡಿ ಹಾಕಿದ ಬರೆಯಲ್ಲದೆ ಏನು? ಅಷ್ಟಕ್ಕೇ ಸುಮ್ಮನಾಗದ ಯಡ್ಡಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ರೆಡ್ಡಿ ಗ್ಯಾಂಗಿನ ಜನ್ಮ ಜನ್ಮಾಂತರದ ಶತ್ರು, ದೇವೇಗೌಡರನ್ನು ನಿರಾಶ್ರಿತರ [illegible] ಉದ್ಘಾಟಿಸಲು ಆಹ್ವಾನಿಸಿದ್ದು, ರಾಜ್ಯಸಭಾ ಸದಸ್ಯ [illegible] ಚಂದ್ರಶೇಖರ್ ಅವರನ್ನು ಈ ಪುನರ್ವಸತಿ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದ್ದು... ಹೀಗೆ ಮೊದಲಾದ ಯಡ್ಡಿಯ ಕ್ರಮಗಳು ಗಣಿಧಣಿಗಳ ಕಂಪನಕ್ಕೆ ಕಾರಣವಾಯಿತು. ಎಲ್ಲೋ ಒಂದು ಕಡೆ ದೇವೇಗೌಡರು ಮತ್ತು ಯಡ್ಡಿ ಸೇರಿ ನಮ್ಮನ್ನು ಮುಗಿಸಲು ಸಂಚು ರೂಪಿಸುತ್ತಿದ್ದಾರೆ ಎಂಬ ಗಾಬರಿಗೆ ಬಿದ್ದ ರೆಡ್ಡಿ [illegible] ತಮ್ಮೆಲ್ಲಾ ಶಕ್ತಿಯನ್ನು ಒಟ್ಟು ಸೇರಿಸಿ ಈಗ ಬಂಡಾಯದ [illegible] ಬಹಿರಂಗವಾಗಿ ಸಾರಿದ್ದಾರೆ.

ಯಡ್ಡಿ ಮತ್ತು ರೆಡ್ಡಿ ನಡುವಿನ ವೈರತ್ವ ಮತ್ತು ಗುದ್ದಾಟ ಆರಂಭವಾಗಿದ್ದೇ ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ. ಬಳ್ಳಾರಿಯ ರೆಡ್ಡಿ ಗ್ಯಾಂಗ್ ರಿಮೋಟ್ ಕಂಟ್ರೋಲ್ ಮೂಲಕ ಯಡ್ಡಿಯನ್ನು ನಿಭಾಯಿಸುತ್ತಾರೆ ಎಂದು ದೇವೇಗೌಡರಾದಿಯಾಗಿ ಜನಸಾಮಾನ್ಯರೂ ಯಾವಾಗ ಆಡಿಕೊಳ್ಳತೊಡಗಿದರೋ ಆಗಿನಿಂದಲೇ ಇಂತಹ ಕಪ್ಪು ಚುಕ್ಕೆಯಿಂದ ತಾನು ಮುಕ್ತಿ ಪಡೆಯಬೇಕೆಂದು ಯಡ್ಡಿ ಹಲವಾರು ತಂತ್ರಗಳನ್ನು ರೂಪಿಸುತ್ತಾ ಬಂದರು. ಉದಾಹರಣೆಗೆ ಅಸೆಂಬ್ಲಿ ಚುನಾವಣೆ ಸಂದರ್ಭದಲ್ಲಿ ಯಡ್ಡಿ ಮತ್ತು ರೆಡ್ಡಿಗಳು ಪರಸ್ಪರ ಹೆಗಲಿಗೆ ಹೆಗಲು ಕೊಟ್ಟು ರಾಜ್ಯಾದ್ಯಂತ ಪ್ರವಾಸ ಮಾಡಿದ್ದರೆ, ಲೋಕಸಭಾ ಚುನಾವಣೆ ಬರುವಹೊತ್ತಿಗೆ ಅವರಿಬ್ಬರೂ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದೇ ಅಪರೂಪವಾಗಿತ್ತು. ಅಷ್ಟೇ ಯಾಕೆ ಗದಗ್, ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಈ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ರೆಡ್ಡಿ ಗ್ಯಾಂಗ್ ಚುನಾವಣೆ ಬಗ್ಗೆ ಆಸಕ್ತಿ ವಹಿಸಿತೇ ವಿನಃ ಬೇರೆ ಕ್ಷೇತ್ರಗಳ ಅಭ್ಯರ್ಥಿಗಳಿಗೆ ಫಂಡ್ ಕೂಡಾ ನೀಡಲಿಲ್ಲ. ಇದಕ್ಕೆ ಪ್ರತಿತಂತ್ರವಾಗಿ ಬಳ್ಳಾರಿಯಲ್ಲಿ ಶ್ರೀರಾಮುಲು ಸಹೋದರಿ ಶಾಂತಾಳನ್ನು ಸೋಲಿಸಲು ಯಡ್ಡಿ ಒಳಗೊಳಗೇ ಸಂಚು ಹೂಡಿದರು. ಆಕೆಯನ್ನು ಸೋಲಿಸುವ ಮುಖಾಂತರ ಗಣಿ ಧಣಿಗಳ ಆರ್ಭಟಕ್ಕೆ ಅಂಕುಶವಿಡಬಹುದು ಎಂಬುದು ಯಡ್ಡಿಯ ಪ್ಲಾನ್ ಆಗಿತ್ತು, ಆದರೆ ಅಲ್ಪ ಅಂತರದಿಂದ ಶಾಂತಾ ಚುನಾವಣೆಯಲ್ಲಿ ಗೆದ್ದು ಯಡ್ಡಿಯ ಪ್ಲಾನ್ ನುಚ್ಚುನೂರಾಯಿತು. ಆ ಸಂದರ್ಭದಲ್ಲಿ ಎಚ್ಚೆತ್ತ ರೆಡ್ಡಿಗಳು ಇನ್ನು ಮುಂದೆ ಯಡ್ಡಿ ಬಗ್ಗೆ ಹುಷಾರಾಗಿರಬೇಕೆಂದು ತೀರ್ಮಾನಿಸಿದರು.

ಅದಾದ ನಂತರ ಕೆಎಂಎಫ್ ಅಧ್ಯಕ್ಷ ಪದವಿಗೆ ಸಂಬಂಧಿಸಿದಂತೆಯೂ ರೆಡ್ಡಿ ಗ್ಯಾಂಗ್ ತುಂಬಾ ಜಾಣತನದಿಂದ ಯಡ್ಡಿಯನ್ನು ಬ್ಲ್ಯಾಕ್‌ಮೇಲ್ ಮಾಡಿತು. "ಅಸೆಂಬ್ಲಿ ಚುನಾವಣೆಯಲ್ಲಿ ನಾವು ನೂರು ಕೋಟಿ ರೂಪಾಯಿ ಖರ್ಚು ಮಾಡಿ ನಲವತ್ತು ಶಾಸಕರನ್ನು ಗೆಲ್ಲಿಸಿದ್ದೇವೆ. ಹೀಗಾಗಿ ನಮಗೆ ಒಂದೋ, ಖಾಲಿಯಾಗುವ ಸದಾನಂದ ಗೌಡರ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನವನ್ನು ಕೊಡಿ. ಇಲ್ಲದಿದ್ದರೆ ಕೆಎಂಎಫ್ ಅಧ್ಯಕ್ಷ ಗಾದಿ ಕೊಡಿ'' ಎಂದು ಶರತ್ತು ಹಾಕಿತ್ತು. ಆಗ ರಾಜ್ಯ ಬಿಜೆಪಿಯನ್ನೇ ರೆಡ್ಡಿ ಗ್ಯಾಂಗಿಗೆ ಒಪ್ಪಿಸುವುದು ಬೇಡ ಎಂದು ಒಲ್ಲದ ಮನಸ್ಸಿನಿಂದಲೇ ಯಡ್ಡಿ ಹಾಲಿನ ಕ್ಯಾನನ್ನು ಸೋಮಶೇಖರ ರೆಡ್ಡಿಯ ಕೈಗೆ ನೀಡಿದ್ದರು.

ಹೀಗೆ ತಮ್ಮ ಹಣ ಬಲ ಮತ್ತು ಚಾಣಾಕ್ಷತೆಯಿಂದ ಸಮಯ ಸಿಕ್ಕಾಗಲೆಲ್ಲ ರೆಡ್ಡಿ ಗ್ಯಾಂಗ್ ಯಡ್ಡಿಯನ್ನು ರಾಜಕೀಯವಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಾ ಮೇಲುಗೈ ಸಾಧಿಸುತ್ತಿತ್ತು. ಆದರೆ ಪ್ರತೀ ಬಾರಿಯೂ ಬಳ್ಳಾರಿ ಧಣಿಗಳಿಂದ ಅವಮಾನಕ್ಕೆ ಒಳಗಾಗುತ್ತಿದ್ದ ಯಡ್ಡಿ ಬಳ್ಳಾರಿ ಧಣಿಗಳನ್ನು ರಾಜಕೀಯವಾಗಿ ಮುಗಿಸಲು ಈ ನೆರೆ ಸಂದರ್ಭವನ್ನು ಬಳಸಿಕೊಂಡಿದ್ದಾರೆ.

ಇದಕ್ಕಿಂತ ಮೊದಲು 'ಆಪರೇಷನ್ ಕಮಲ' ಸಂದರ್ಭದಲ್ಲೂ ರೆಡ್ಡಿ ಗ್ಯಾಂಗ್ ತುಂಬಾ ಚಾಕಚಕ್ಯತೆಯಿಂದ ಯಡ್ಡಿಯನ್ನು ಕಟ್ಟಿಹಾಕಿತ್ತು. ಮೂರು-ನಾಲ್ಕು ಶಾಸಕರನ್ನು ಬೇರೆ ಪಕ್ಷಗಳಿಂದ ಬಿಜೆಪಿಗೆ ತರುವ ಆ ಸಂದರ್ಭದಲ್ಲಿ ಯಡ್ಡಿ ತನಗೆ ಬೇಕಾದವರನ್ನು ಅಥವಾ ಹಿತೈಷಿಗಳನ್ನು ತರಲು ಸ್ಕೆಚ್ ಹಾಕಿಕೊಂಡು ಕುಳಿತಿದ್ದಾಗ ದಿಢೀರನೆ ರೆಡ್ಡಿ ಗ್ಯಾಂಗ್ ತಮ್ಮ ಹಿಂಬಾಲಕರಾದ ಬಾಲಚಂದ್ರ ಜಾರಕಿಹೊಳಿ, ಆನಂದ್ ಅಸ್ನೋಟಿಕರ್, ಶಿವನಗೌಡ, ಶೇಖರ್ ಗೂಳಿಹಟ್ಟಿ ಮೊದಲಾದವರನ್ನು ಕರೆತಂದಿದ್ದರು. ಹಾಗೆ ಮಾಡುವ ಮೂಲಕ ಯಡ್ಡಿಯ ಸಿಂಹಾಸನ ಭದ್ರಪಡಿಸಿದ ಕೀರ್ತಿ ತಮಗೆ ಸಿಗಬೇಕು ಎಂಬುದು ಮಾತ್ರ ಅವರ ಇರಾದೆಯಾಗಿರಲಿಲ್ಲ, ಪಕ್ಷದಲ್ಲಿ ತಮ್ಮ ಹಿಂಬಾಲಕರ ಸಂಖ್ಯೆಯನ್ನು ವೃದ್ಧಿಸುವುದು ಮತ್ತು ಆ ಮೂಲಕ ಅಗತ್ಯ ಬಿದ್ದಾಗ ತಮ್ಮ ಸಂಖ್ಯಾಬಲದಿಂದಲೇ ಯಡ್ಡಿಯನ್ನು ಅಧಿಕಾರದಿಂದ ಇಳಿಸುವುದೂ ಅವರ ಈ ಆಪರೇಷನ್ ಹಿಂದಿನ ಅಸಲಿ ಉದ್ದೇಶವಾಗಿತ್ತು.

ಹೀಗೆ ತನ್ನ ಸಾರ್ವಭೌಮತ್ವ ಪ್ರದರ್ಶಿಸಲು ಆಗಾಗ ಅಡ್ಡಿಯಾಗುತ್ತಿರುವ ರೆಡ್ಡಿ ಗ್ಯಾಂಗ್ ಒಂದು ರೀತಿಯಲ್ಲಿ ಯಡಿಯೂರಪ್ಪನ ಪಾಲಿಗೆ ನುಂಗಲಾರದ ತುತ್ತಾಗಿತ್ತು. ಈಗ ದೆಹಲಿಯಲ್ಲಿರುವ ಬಿಜೆಪಿ ಹೈಕಮಾಂಡ್ ಕೂಡಾ ವೀಕ್ ಆಗಿರುವ ಈ ಸಂದರ್ಭದಲ್ಲಿ ಪಕ್ಷದಲ್ಲಿರುವ ತನ್ನ 'ಕಡುವೈರಿ' ಬಳ್ಳಾರಿ ಧಣಿಗಳನ್ನು ಮಟ್ಟಹಾಕಲು ಕೊನೆಗೂ ಯಡ್ಡಿ ಧೈರ್ಯ ಮಾಡಿ ರಣಕಹಳೆ ಊದಿದ್ದರಿಂದ ಇಷ್ಟೆಲ್ಲಾ ಅವಾಂತರ ನಡೆದುಹೋಗಿದೆ.

ಹೀಗಾಗಿ "ಯಡಿಯೂರಪ್ಪನವರ ಕಾರ್ಯವೈಖರಿ ಸರಿ ಇಲ್ಲ'' ಎಂಬ ಹಳೇ ಸವಕಲು ವಾದವನ್ನು ಮುಂದಿಟ್ಟುಕೊಂಡು ಬಳ್ಳಾರಿ ಧಣಿಗಳು ಮುಖ್ಯಮಂತ್ರಿ ವಿರುದ್ಧ ಭಿನ್ನಮತೀಯ ಚಟುವಟಿಕೆ ಆರಂಭಿಸಿದ್ದಾರೆ. ಇದು ಅವರ ಮತ್ತು ಮುಖ್ಯಮಂತ್ರಿಯ ನಡುವಿನ ದ್ವೇಷದ ರಾಜಕೀಯದಾಟವಾಗಿದೆ. ಕಳೆದ ಮೂರ್ನಾಲ್ಕು ದಿನಗಳಿಂದ ಯಡ್ಡಿ ದಿನಕ್ಕೊಂದು ಬೌನ್ಸರ್ ಅನ್ನು ಬಳ್ಳಾರಿ ಧಣಿಗಳತ್ತ ಎಸೆಯುತ್ತಲೇ ಇದ್ದಾರೆ. ಆದರೆ ರೆಡ್ಡಿ ಗ್ಯಾಂಗ್ ಇನ್ನೂ ಔಟ್ ಆಗಿಲ್ಲ, ಆಗುವ ಸೂಚನೆಯೂ ಕಾಣಿಸುತ್ತಿಲ್ಲ. ಈ ಹಿಂದೆ ಆದಂತೆ ಈ ಬಾರಿಯೂ ಇವರ ಅಧಿಕಾರ ದಾಹದ ಆಟ ಯಾವುದೇ ಫಲಿತಾಂಶವಿಲ್ಲದೆ ಡ್ರಾನಲ್ಲಿ ಮುಕ್ತಾಯಗೊಂಡರೂ ಆಶ್ಚರ್ಯವಿಲ್ಲ. ಆದರೆ ಅದು ಮತ್ತೆ ಕೆಲ ದಿನಗಳಲ್ಲೇ ಸ್ಫೋಟಗೊಳ್ಳುವುದು ಖಂಡಿತಾ..

ಇವರಿಬ್ಬರ ಪರಸ್ಪರ ಹೇಳಿಕೆ ಮತ್ತು ಪ್ರತ್ಯಾರೋಪಗಳು ಕನ್ನಡ ನಾಡಿನ ಜನತೆಗೆ ಟ್ವೆಂಟಿ-ಟ್ವೆಂಟಿ ಕ್ರಿಕೆಟ್ ಪಂದ್ಯಕ್ಕಿಂತಲೂ ಹೆಚ್ಚು ರೋಮಾಂಚನ ಮತ್ತು ರಂಜನೆಯನ್ನು ನೀಡುತ್ತಿದೆ. ಆದರೆ ಈಗಾಗಲೇ ಮನೆ, ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡ ಜನರ ಬಗ್ಗೆ ಚಿಂತಿಸುವವರೇ ಇಲ್ಲದಂತಾಗಿದೆ. ಇದು ನಮ್ಮ ರಾಜ್ಯದ ದುರಂತವಲ್ಲದೇ ಮತ್ತೇನು?

● ಸದಾಶಿವ ಶೆಣೈ

ಕಂದಾಯ ಮಂತ್ರಿ ಮನೆಯಲ್ಲೇ


ಕರುಣಾಕರ ರೆಡ್ಡಿ

ಕಿಡ್ನಾಪ್-ಟಾರ್ಚರ್


ಹನ್ನೆರಡು ಮಂದಿ ರೌಡಿ ದಾಂಢಿಗರ ಗ್ಯಾಂಗು ಸರ್ಕಾರಿ ಕಚೇರಿಯಲ್ಲೇ ಅಡ್ಡೆ ಹಾಕುತ್ತದೆ. ಟೆಂಡರ್ ಸಲ್ಲಿಸದಂತೆ ಅಧಿಕಾರಿಗಳ ಎದುರೇ ಧಮಕಿ ಹಾಕುತ್ತದೆ. ಅದಾಗ್ಯೂ ಟೆಂಡರ್ ಸಲ್ಲಿಸಿದನೆಂಬ ಒಂದೇ ತಪ್ಪಿಗೆ ಆತನನ್ನು ಕಾರಿಗೆ ಎತ್ತಿಹಾಕಿಕೊಳ್ಳುತ್ತದೆ. ಅಲ್ಲಿಂದ ನೇರವಾಗಿ ಕಂದಾಯ ಮಂತ್ರಿಯ ಮನೆಗೇ ಎಳೆದೊಯ್ದು ಅಲ್ಲಿ ಹಿಗ್ಗಾಮುಗ್ಗಾ ಥಳಿಸುತ್ತಾರೆ. ಅಲ್ಲಿ ನಿನ್ನ ತಲೆ ಕಡಿಯುತ್ತೇನೆ ಅಂದವನು ಕಂದಾಯ ಮಂತ್ರಿಯ ಅಣ್ಣ ಮತ್ತು ಬಳ್ಳಾರಿಯ ಎಮ್ಮೆಲ್ಲೆ ಸೋಮಶೇಖರ ರೆಡ್ಡಿ!


ಸೋಮಶೇಖರ್ ರೆಡ್ಡಿ

ಥೇಟು ತೆಲುಗು ಸಿನಿಮಾದ ದೃಶ್ಯಾವಳಿಯೊಂದನ್ನು ಹೋಲುವ ಅಕ್ಟೋಬರ್ 24 ರ ಈ ಘಟನೆಯೊಂದೇ ರೆಡ್ಡಿ ಗ್ಯಾಂಗ್ ಅಟ್ಟಹಾಸಕ್ಕೊಂದು ತಾಜಾ ಉದಾಹರಣೆಯಾಗಿದೆ. 'ಬಳ್ಳಾರಿಯಲ್ಲಾಗಿದ್ದರೆ ನಿನ್ನ ತಲೆ ಕಡಿಯುತ್ತಿದ್ದೆ.....' ಎಂದು ಎಸ್‌ಎಸ್‌ಸಿ ಕಾರ್ಪೊರೇಷನ್ನಿನ ಮ್ಯಾನೇಜರ್ ಪ್ರಶಾಂತ್‌ಗೆ ಧಮಕಿ ಹಾಕಿದ ಕೆಎಂಎಫ್ ಅಧ್ಯಕ್ಷ ಸೋಮಶೇಖರ ರೆಡ್ಡಿಗೆ ತಾನೊಬ್ಬ ಎಮ್ಮೆಲ್ಲೆ ಎಂದಾಗಲಿ, ತಾನು ಎಸಗುತ್ತಿರುವ ಕ್ರೈಮಿನ ತಾಣ ಕಂದಾಯ ಮಂತ್ರಿಯಾಗಿರುವ ತನ್ನ ತಮ್ಮನ ಸರ್ಕಾರಿ ಬಂಗಲೆಯೆಂಬ ಕನಿಷ್ಠ ಪ್ರಜ್ಞೆ ಕೂಡ ಇರಲಿಲ್ಲ.

ಉಪ್ಪಾರಪೇಟೆ ಪೊಲೀಸ್ ಠಾಣೆಯ ತಾಕತ್ತುದಾರ ಇನ್ಸ್‌ಪೆಕ್ಟರ್ ಲೋಕೇಶ್ವರ್ ಮುಲಾಜಿಲ್ಲದೇ ಕೆಎಂಎಫ್ ಅಧ್ಯಕ್ಷ ಸೋಮಶೇಖರ ರೆಡ್ಡಿಯ ವಿರುದ್ಧ ಎಫ್‌ಐಆರ್ ದಾಖಲಿಸುತ್ತಾರೆಂದರೆ ರೆಡ್ಡಿ ರಕ್ಕಸರ ಪಾಪದ ಕೊಡ ಇನ್ನೆಷ್ಟು ತುಂಬಿರಬೇಕು?

ಅಷ್ಟಕ್ಕೂ ರೆಡ್ಡಿ ಗ್ಯಾಂಗ್ ಇಂಥದೊಂದು ಕೇಡಿ ಕೃತ್ಯಕ್ಕೆ ಕೈಹಾಕಿದ್ದು ಹೈದರಾಬಾದಿನ ಜೆವಿಪಿಆರ್ ಇಂಜನಿಯರಿಂಗ್ ಕಂಪನಿಗೆ ಕೆಪಿಸಿಎಲ್‌ನ 58 ಕೋಟಿಯ ಟೆಂಡರ್ ಕೊಡಿಸುವುದಕ್ಕಾಗಿ. ಕರ್ನಾಟಕ ವಿದ್ಯುತ್ ನಿಗಮ ಬಳ್ಳಾರಿಯಲ್ಲಿ ನಿರ್ಮಿಸುತ್ತಿರುವ ವಿದ್ಯುತ್ ಉತ್ಪಾದನಾ ಘಟಕದ ವಾಟರ್ ಪಾಂಡ್ ಕಾಮಗಾರಿಗಾಗಿ 58 ಕೋಟಿಯ ಟೆಂಡರ್‌ಗೆ ಬೇರೆ ಯಾರೂ ಅರ್ಜಿ ಸಲ್ಲಿಸದಂತೆ ಗೂಂಡಾ ಬೆದರಿಕೆ ಹಾಕಲೆಂದೇ ಕೆಎಂಎಫ್ ಅಧ್ಯಕ್ಷ ಸೋಮಶೇಖರ ರೆಡ್ಡಿ ಕೆರಳಿ ನಿಂತಿದ್ದ. ತಮ್ಮ ಮರ್ಜಿಗೆ ವಿರುದ್ಧವಾಗಿ ಯಾರೇ ಬಳ್ಳಾರಿಯಲ್ಲಿ ಟೆಂಡರ್ ದಕ್ಕಿಸಿಕೊಳ್ಳಕೂಡದು ಎಂಬ ಮಸ್ತಿಗೆ ನಿಂತ ರೆಡ್ಡಿ ಗ್ಯಾಂಗ್‌ಗೆ ಡೀಲು ಕೊಟ್ಟವನು ಹೈದರಾಬಾದಿನ ಜೆವಿಪಿಆರ್ ಇಂಜನಿಯರಿಂಗ್ ಕಂಪೆನಿಯ ಚೀಫ್ ಮ್ಯಾನೇಜರ್ ಮಾಧವಗೌಡ.


ಲೋಕೇಶ್ವರ್

ಜೆವಿಪಿಆರ್ ಕಂಪೆನಿಯ ಹೈದರಾಬಾದಿ ಧಣಿಯನ್ನು ಗಣಿ ರೆಡ್ಡಿಗಳಿಗೆ ಪರಿಚಯಿಸಿಕೊಟ್ಟವನು ಆಂಧ್ರದ ಗತ ಮುಖ್ಯಮಂತ್ರಿ ವೈಎಸ್‌ಆರ್ ಪುತ್ರ ಜಗನ್‌ಮೋಹನ್ ರೆಡ್ಡಿ. 58 ಕೋಟಿಯ ಟೆಂಡರ್ ಎಂದರೆ ಸಣ್ಣ ಮೊತ್ತವಾ? ಆಂಧ್ರದ ಜೆವಿಪಿಆರ್ ಕಂಪೆನಿಗೆ ಟೆಂಡರಿನಲ್ಲಿ ಪೈಪೋಟಿ ಒಡ್ಡಿದ್ದು ಬೆಂಗಳೂರಿನ ಎಸ್‌ಎಸ್‌ಸಿ ಪವರ್ ಕಾರ್ಪೊರೇಷನ್ನಿನ ಎಂ.ಡಿ. ಡಾ. ಎಸ್. ಸೀತಾರಾಂ ಶೆಟ್ಟಿಯಿಂದ. ವೃತ್ತಿನಿಷ್ಠ ಎಸ್‌ಎಸ್‌ಸಿ ಕಂಪೆನಿಯೇನಾದರೂ ಟೆಂಡರ್ ಸಲ್ಲಿಸಿತೆಂದರೆ ಆಂಧ್ರದ ಜೆವಿಪಿಆರ್ ಕಂಪೆನಿ ಖಂಡಿತಾ ಗಂಟುಮೂಟೆ ಕಟ್ಟಲೇಬೇಕೆಂಬುದು ರೆಡ್ಡಿ ಗ್ಯಾಂಗಿಗೆ ನಿಕ್ಕಿಯಾಗಿತ್ತು.

ಗೂಂಡಾ ಬೆದರಿಕೆಯಲ್ಲದೇ ಬೇರಾವುದಕ್ಕೂ ಎಸ್‌ಎಸ್‌ಸಿ ಕಂಪೆನಿ ಜಗ್ಗುವುದಿಲ್ಲ ಎಂದೇ ಲೆಕ್ಕ ಹಾಕಿದ ಸೋಮಶೇಖರ ರೆಡ್ಡಿ ಮಾಧವಗೌಡನ ಪರವಾಗಿ ಹನ್ನೆರಡು ಮಂದಿ ಧಾಂಡಿಗರನ್ನು ಆನಂದರಾವ್ ಸರ್ಕಲ್ಲಿನ ಕೆಪಿಸಿಎಲ್ ಕಚೇರಿಗೆ ಅಕ್ಟೋಬರ್ 24ರ ಬೆಳ್ಳಂಬೆಳಗ್ಗೆಯೇ ಕಳಿಸಿಕೊಟ್ಟಿದ್ದ. ಅವತ್ತೇ ಟೆಂಡರ್ ಸಲ್ಲಿಕೆಗೆ ಕೊನೆಯ ಗಡುವಿದ್ದುದರಿಂದ ಎಸ್‌ಎಸ್‌ಸಿ ಕಂಪೆನಿಯವರು ಟೆಂಡರ್ ಸಲ್ಲಿಸಲು ಬಂದೇ ಬರುತ್ತಾರೆಂಬುದು ಹೈದರಾಬಾದ್ ಖದೀಮರಿಗೆ ಗ್ಯಾರಂಟಿಯಾಗಿತ್ತು.

ಇದಕ್ಕೂ ಮೊದಲೇ ಅಂದರೆ ಅಕ್ಟೋಬರ್ 21 ರಂದೇ ಎಸ್‌ಎಸ್‌ಸಿ ಮ್ಯಾನೇಜರ್ ಪ್ರಶಾಂತ್ ಮೊಬೈಲಿಗೆ ಫೋನ್ ಮಾಡಿದ ಸೋಮಶೇಖರ ರೆಡ್ಡಿ ಧಮಕಿ ಹಾಕಿದ್ದ. ಅಕ್ಟೋಬರ್ 24ರ ಮಧ್ಯಾಹ್ನ ಕೆಪಿಸಿಎಲ್ ಕಚೇರಿಗೇ ನುಗ್ಗಿದ ಧಾಂಡಿಗರು ಇಡೀ ಕಚೇರಿಯ ಸಿಬ್ಬಂದಿಗೇ ಧಮಕಿ ಹಾಕಿದ್ದಾರೆ. ಇಷ್ಟಾಗಿಯೂ ಎದೆಗುಂದದೇ ಟೆಂಡರ್ ಸಲ್ಲಿಸಿದ ಎಸ್‌ಎಸ್‌ಸಿ ಮ್ಯಾನೇಜರ್ ಪ್ರಶಾಂತ್‌ನನ್ನು ಕೆಪಿಸಿಎಲ್ ಕಚೇರಿಯಿಂದಲೇ ರೆಡ್ಡಿ ಗ್ಯಾಂಗ್ ಹೊತ್ತೊಯ್ದು ಹಿಂಸಿಸುತ್ತದೆ ಎಂದು ಹೇಗೆ ತಾನೇ [illegible] ಸಾಧ್ಯವಿತ್ತು!


▶▶▶ 12

ರೆಡ್ಡಿಗಳ ಚೇಲಾ ಅಧಿಕಾರಿಗಳಿಗೆ ಯಡ್ಡಿ ಏಟು!

ಬಳ್ಳಾರಿ ಕಡುಭ್ರಷ್ಟ ಡಿಎಫ್‌ಓ ಮುತ್ತಯ್ಯ, ಕಾವು ಹುಟ್ಟುತ್ತವೆಯೆಂದರೆ ಹಾಯ ತುರುಬಗೇ ಕೈ ಹಾಕುವ ಹಾಖಂಡಿ ಜಿಲ್ಲಾಧಿಕಾರಿ ಶಿವಪ್ಪ ಮತ್ತು ಗಣಿರೆಡ್ಡಿಗಳ ಪಾಲಿನ ಸಾಕುನಾಯಿಯಂತಿದ್ದ ಬಳ್ಳಾರಿಯ ಎಸ್.ಪಿ. ಸೀಮಂತ್‌ಕುಮಾರ್ ಸಿಂಗ್ ಎಂಬ ಮೂವರು ದುಷ್ಟ ಅಧಿಕಾರಿಗಳನ್ನು ಎತ್ತಂಗಡಿ ಮಾಡುವ ಮೂಲಕ ಯಡ್ಡಿ ಗಣಿದೈತ್ಯರ ವಿರುದ್ಧದ ಅಂತಿಮ ಕಾರ್ಯಾಚರಣೆಗೆ ಕೈಹಾಕಿದ್ದಾರೆ.

ಇದರ ಫಲಾಫಲಗಳೇನೇ ಇರಲಿ, ಗಣಿ ರೆಡ್ಡಿಗಳ ಮರ್ಮಕ್ಕೆ ಪೆಟ್ಟು ಬಿದ್ದಿರುವುದಂತೂ ಸತ್ಯ.


ಈ ಮೂವರು ಮನೆಹಾಳ ಅಧಿಕಾರಿಗಳ ಜಾಗಕ್ಕೆ ಬಂದ ಹೊಸ ಅಧಿಕಾರಿಗಳ ವ್ಯಕ್ತಿತ್ವ ಮತ್ತು ಇತಿಹಾಸವೊಂದೇ ಯಡ್ಡಿಯ ಉದ್ದೇಶ ಮತ್ತು ಹುನ್ನಾರವನ್ನು ಬಿಚ್ಚಿಡುತ್ತವೆ. ಬಳ್ಳಾರಿಗೆ ಹೊಸ ಎಸ್‌ಪಿಯಾಗಿ ಕಾಲಿಟ್ಟಿರುವ ಡಾ. ಡಿ.ಸಿ. ರಾಜಪ್ಪ ಕರ್ನಾಟಕ ಕಂಡ ದಕ್ಷ ಪೊಲೀಸ್ ಅಧಿಕಾರಿಗಳ ಪೈಕಿ ಒಬ್ಬರು. ಈ ಹಿಂದೆ ಬಳ್ಳಾರಿಗೆ ಅಡಿಷನಲ್ ಎಸ್.ಪಿ.ಯಾಗಿದ್ದಾಗಲೇ ಜನಾರ್ದನ ರೆಡ್ಡಿಯನ್ನು ನಡುರಸ್ತೆಯಲ್ಲಿ ಹಾಕಿ ತುಳಿದಿದ್ದರು.



ರಾಜಪ್ಪ



ಹರ್ಷಗುಪ್ತ



ಇನ್ನು ಡೀಸಿಯಾಗಿ ಬಂದಿರುವ ಹರ್ಷಗುಪ್ತಾ ಮತ್ತು ಹೊಸ ಡಿಎಫ್‌ಓ ಆಗಿ ಬಂದ ಬಿಶ್ವಜಿತ್ ಮಿಶ್ರಾ ಇಬ್ಬರೂ ಪಕ್ಕಾ ಕರ್ತವ್ಯನಿಷ್ಠರು. ಯಾವ ಎಮ್ಮೆಲ್ಲೇ ಮಂತ್ರಿಗೂ ಈತನಕ ಮಣೆ ಹಾಕಿದವರಲ್ಲ. ಇಂಥ ಖಡಕ್ ಅಧಿಕಾರಿಗಳನ್ನೆಲ್ಲ ರಾತ್ರೋರಾತ್ರಿ ಬಳ್ಳಾರಿಗೆ ತಂದ ಮುಖ್ಯಮಂತ್ರಿ ಯಡ್ಡಿ ಇದಕ್ಕೂ ಮುನ್ನ ಮಾಡಿಕೊಂಡ ತಳಪಾಯವೇ ನೆರೆಸಂತ್ರಸ್ತರ ಪರಿಹಾರಕ್ಕೆಂದು ಅದಿರು ಲಾರಿಗಳಿಗೆ ಸಾವಿರ ರೂಪಾಯಿಯ ಸರ್ಕಾರಿ ಸುಂಕ!

ಪ್ರತಿ ಅದಿರು ಲಾರಿಗೆ ಸಾವಿರ ರೂಪಾಯಿಯ ಸುಂಕ ವಿಧಿಸುತ್ತೇನೆಂದು, ಮುಖ್ಯಮಂತ್ರಿ ಘೋಷಿಸಿದ ಮರುಗಳಿಗೆಯಿಂದಲೇ ಗಣಿರೆಡ್ಡಿಗಳ ಪಿತ್ತ ನೆತ್ತಿಗೇರಿದ್ದಕ್ಕೂ ಕಾರಣವಿದೆ. ಅದು ಗಣಿರೆಡ್ಡಿಗಳ ಅದಿರು ಲೂಟಿಯ ಕಳ್ಳ ಕಮಾಯಿಗೆ ಬಿದ್ದ ಪೆಟ್ಟಾಗಿತ್ತು. ಬಹುಶಃ ಲಾರಿಯೊಂದಕ್ಕೆ ಸಾವಿರ ರೂಪಾಯಿ ಸುಂಕವಷ್ಟೇ ಆಗಿದ್ದರೆ ಆ ಬಗ್ಗೆ ಗಣಿ ರೆಡ್ಡಿಗಳು ಇಷ್ಟೊಂದು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಹಕೀಕತ್ತಿರುವುದು ಓವರ್‌ಲೋಡಿಂಗ್ ಮತ್ತು ಕಳ್ಳಮಾಲು ಸಾಗಿಸುವುದರಲ್ಲಿ.

ಒಮ್ಮೆ ಚೆಕ್‌ಪೋಸ್ಟ್‌ಗಳು ಸ್ಥಾಪನೆಯಾಗಿ ಪ್ರತಿ ಲಾರಿಗೆ ಸುಂಕ ವಿಧಿಸಲಾರಂಭಿಸಿದರೆಂದರೆ, ಸಹಜವಾಗೇ ಚೆಕ್‌ಪೋಸ್ಟ್ ಸಿಬ್ಬಂದಿಗಳು ಲಾರಿಯ ಪರ್ಮಿಟ್ ಕೇಳುತ್ತಾರೆ. ಈತನಕ ಗಣಿ ರೆಡ್ಡಿಗಳು ಅದಿರು ಸಾಗಿಸುತ್ತಿದ್ದದ್ದು ಪರ್ಮಿಟ್ಟೇ ಇಲ್ಲದೆ, ಅರಣ್ಯಭೂಮಿಯಿಂದ ಅಕ್ರಮವಾಗಿ ದೋಚಿದ ಅದಿರನ್ನು. ಜೊತೆಗೆ ಓವರ್‌ಲೋಡಿಂಗ್ ಬೇರೆ. ಪ್ರತಿ ಲಾರಿಯೊಂದಕ್ಕೆ ಕನಿಷ್ಠ ಹದಿನಾಲ್ಕು ಟನ್ ಭಾರ ತುಂಬಬೇಕೆಂಬುದು ಸರ್ಕಾರಿ ಶಾಸನವಾದರೆ ಅದಿರುಕಳ್ಳರು ಲಾರಿಗಳಿಗೆ ಮೂವತ್ತು ಟನ್ ತುಂಬಿಸುತ್ತಾರೆ. ಪರ್ಮಿಟ್ಟಿಲ್ಲದೇ ಸಾಗಿಸುತ್ತಿದ್ದ ಅದಿರು ಲೂಟಿಯೂ ಬಂದ್, ಹಾಗೊಮ್ಮೆ ಪರ್ಮಿಟ್ಟಿದ್ದರೂ ಸಾಗಿಸುತ್ತಿದ್ದ ಓವರ್ ಲೋಡಿಂಗ್ ದಂಧೆಯೂ ಖತಮ್ಮಾಗುತ್ತದೆ.

ಯಾವ ಗಣಿರೆಡ್ಡಿಗಳು ಅದಿರು ಲೂಟಿಯಲ್ಲೇ ಕೊಬ್ಬಿ ಅಗಣಿತ ಸಾಮ್ರಾಜ್ಯ ಕಟ್ಟಿಕೊಂಡಿದ್ದರೋ ಅವರ ಮರ್ಮಕ್ಕೇ ಡೈನಾಮೈಟ್ ಇಟ್ಟಿದ್ದಾರೆ ಯಡ್ಡಿ. ಇವತ್ತು ಹುಚ್ಚುನಾಯಿಗಳಂತೆ ಬೀದಿ ರಂಪಕ್ಕಿಳಿದ ಗಣಿರೆಡ್ಡಿಗಳ ಆರ್ಭಟಕ್ಕೂ, ಬಳ್ಳಾರಿಯಿಂದ ಎತ್ತಂಗಡಿಗೊಂಡ ಭ್ರಷ್ಟ ಅಧಿಕಾರಿಗಳ ಪಟಾಲಮ್ಮಿಗೂ ಮತ್ತು ಪ್ರತಿ ಬಾರಿಗೆ ವಿಧಿಸಿದ ಸಾವಿರ ರೂಪಾಯಿಯ ಸುಂಕಕ್ಕೂ ಪರಸ್ಪರ ಸಂಬಂಧವಿದ್ದೇ ಇದೆ.

ಸದ್ಯ ಬಳ್ಳಾರಿ, ಹೊಸಪೇಟೆ ಮತ್ತು ಸಂಡೂರು ತಾಲ್ಲೂಕುಗಳ ಅದಿರು ಕೊಳ್ಳಗಳಿಂದ ದಿನವೊಂದಕ್ಕೆ, ಕಮ್ಮಿಯೆಂದರೂ ನಾಲ್ಕರಿಂದ ಐದು ಸಾವಿರದಷ್ಟು ಲಾರಿಗಳು ಅದಿರು ದೋಚುತ್ತವೆ. ವಿರೋಧ ಪಕ್ಷಗಳಾಗಲಿ, ಕನ್ನಡಪರ ಸಂಘಟನೆ, ರೈತ ಸಂಘಟನೆಗಳಾಗಲಿ ಯಾರೂ ಗಣಿ ಲೂಟಿಯ ಆಳಕ್ಕಿಳಿದು ಅಧ್ಯಯನ ಮಾಡಿ ಅದನ್ನು ಜನರೆದುರು ಬಿಚ್ಚಿಡುವ, ಬೀದಿಗಿಳಿದು ಹೋರಾಡುವ ಆಸಕ್ತಿ ತೋರದೇ ಇದ್ದುದೇ ಈ ಮಟ್ಟದ ಅದಿರು ಲೂಟಿಗೆ ಕಾರಣವಾಗಿದೆ.

ಬಳ್ಳಾರಿ ಸುತ್ತಮುತ್ತಲ ಒಟ್ಟೂ 98 ಗಣಿ ಕಂಪೆನಿಗಳ ಪೈಕಿ ಸದ್ಯ ಸಕ್ರಿಯವಾಗಿರುವ 43 ಗಣಿಗಳಲ್ಲಿ ಅರ್ಧಕ್ಕರ್ಧ ಗಣಿ ರೆಡ್ಡಿಗಳ ನೇರ ಹಿಡಿತಕ್ಕೊಳಪಟ್ಟಿವೆ. ಓಬಳಾಪುರಂ ಮೈನಿಂಗ್ ಕಂಪೆನಿಯೊಂದೇ ಆಂಧ್ರ ಗಡಿಗುಂಟ ಮೂರು ಅಕ್ರಮ ಗಣಿಗಳನ್ನು ತೋಡುತ್ತಲೇ ಇದೆ. 25 ಹೆಕ್ಟೇರ್‌ಗಳ ಇನ್ನೂ ಎರಡು ಗಣಿಗಳನ್ನು ಓಬಳಾಪುರಂ ಥಾಸಲೆಯಲ್ಲಿ ಅಗೆಯುತ್ತಿರುವ ಇದೇ ಓಎಂಸಿ ಧೂರ್ತರು ಮಲಪನ ಗುಡಿಯಲ್ಲಿ ಈತನಕ ಅಗೆದ ಅರಣ್ಯ ಭೂಮಿಯ ವಿಸ್ತಾರ 65 ಹೆಕ್ಟೇರ್‌ಗಳು.

ಇಷ್ಟಲ್ಲದೇ ವಿಠಲಾಪುರದಲ್ಲಿ ಹಿಂದ್ ಟ್ರೇಡರ್ಸ್‌ನ. 19 ಹೆಕ್ಟೇರ್, ಭಂಬಟಿಯ ಹತ್ತೊಂಬತ್ತು ಹೆಕ್ಟೇರ್ ಮತ್ತು ನಾಮದ ರತ್ನಯ್ಯ ಶೆಟ್ಟಿ ಎಂಬಾತನ ಹನ್ನೊಂದು ಹೆಕ್ಟೇರ್ ಬೋಗಸ್ ದಾಖಲೆಯ ಗಣಿಗಳು ರೆಡ್ಡಿಗಳದ್ದೇ ರೈಸಿಂಗ್ ಕಾಂಟ್ರಾಕ್ಟ್‌ಗೆ ಒಳಪಟ್ಟಿವೆ. ಈ ಎಲ್ಲಾ ಗಣಿಗಳ ಪೂರ್ತಿ ಒಡೆತನವಲ್ಲದೇ ಮೋದಿಯ BIOP, ಸಂಡೂರಿನ ಬಿ.ಎಂ. ದಿನೇಶ್, ಡೆಕ್ಕನ್ ಮೈನಿಂಗ್ ಕಂಪೆನಿ, KMMI, ವಡ್ಡೆ ನಾಗಪ್ಪ ಮೈನ್ಸ್, ಮನ್ಸೂರ್ ಅಹ್ಮದ್ ಮೈನ್ಸ್, ಹೆಚ್‌ಆರ್‌ಜಿ ನಲವಟ್ಟ ಮೈನ್ಸ್; ಇತ್ಯಾದಿ ಇಪ್ಪತ್ತಕ್ಕೂ ಹೆಚ್ಚು ಗಣಿಗಳ ಅರ್ಧಕ್ಕರ್ಧ ಪಾಲಿಗೆ ರೆಡ್ಡಿಗಳು ಕೈ ಹಾಕಿದ್ದಾರೆ. ತುಮಟಿಯಲ್ಲಿ ಟಪಾಲ್ ನಾರಾಯಣರೆಡ್ಡಿಯ ಇಡೀ ಗಣಿಯನ್ನೇ ಆಕ್ರಮಿಸಿಕೊಂಡ ರೆಡ್ಡಿ ಗ್ಯಾಂಗ್ ಈ ಭಾಗದ ಶೇ. 90ರಷ್ಟು ಗಣಿಗಳಿಂದ ಅವುಗಳ ಲೂಟಿಯ ಪಾಲಿನಲ್ಲಿ ಶೇ. 30ರಷ್ಟು ಕಪ್ಪ ವಸೂಲಿ ಮಾಡುತ್ತಿದೆ. ಇಂಥ ಕಳ್ಳ ಗಣಿಗಳಿಂದ ಪ್ರತಿ ನಿತ್ಯ ಅದಿರು ಸಾಗಿಸುವ ಐದು ಸಾವಿರದಷ್ಟು ಲಾರಿಗಳಲ್ಲಿ ಬಹುತೇಕ ಲಾರಿಗಳು ಯಾವುದೇ ಪರ್ಮಿಟ್ಟಿಲ್ಲದೇ ಕರ್ನಾಟಕ ಸರ್ಕಾರದ ಯಾವ ಅಂಕೆಗೂ ಸಿಲುಕದೇ ಅದಿರು ದೋಚುತ್ತವೆ. ಈ ಪೈಕಿ ಅರ್ಧಕ್ಕರ್ಧ ಲಾರಿಗಳು ರೆಡ್ಡಿಗಳ ಒಡೆತನಕ್ಕೊಳಪಟ್ಟಿವೆ. ಇಂಥ ಎಲ್ಲಾ ಲಾರಿಗಳ ಮೇಲೆ ಹಿಟ್ಲರ್ ಬಳಸುತ್ತಿದ್ದ ನಾಝಿ 'ಸ್ವಸ್ತಿಕ್' ಲಾಂಛನ ವಿರುತ್ತದೆ.



ಬಳ್ಳಾರಿಯಲ್ಲಿನ ಗಣಿಗಾರಿಕಾ ಪ್ರದೇಶ....



ಮದನ್‌ಗೋಪಾಲ್

ಯಾರೇ ಸರ್ಕಾರಿ ಅಧಿಕಾರಿ ಸ್ವಸ್ತಿಕ್ ಲಾಂಛನ ನೋಡಿದನೆಂದರೆ ಅಂಥ ಲಾರಿಗಳತ್ತ ತಲೆ ಎತ್ತಿಕೂಡ ನೋಡಬಾರದೆಂಬುದು ರೆಡ್ಡಿಗಳ ಚಂಡಶಾಸನ. ಕಾರವಾರ, ಬೇಲೇಕೆರೆ ಬಂದರುಗಳಷ್ಟೇ ಅಲ್ಲದೆ ಆಂಧ್ರದ ವಿಶಾಖಪಟ್ಟಣ ಮತ್ತು ಕೃಷ್ಣಪಟ್ಣಂ ಬಂದರುಗಳಿಗೆ ಪ್ರತಿನಿತ್ಯ ಇರುವೆ ಸಾಲಿನಂತೆ ಸಾಗುವ ಇಂಥ ಲಾರಿಗಳೆಲ್ಲವೂ ಓವರ್‌ಲೋಡಿಂಗ್ ಹೊಡೆಯುತ್ತವೆ. ಆಂಧ್ರದ ಇಡೀ ಕೃಷ್ಣಪಟ್ಣಂ ಬಂದರೇ ಗಣಿರೆಡ್ಡಿಗಳ ಖಾಸಗಿ ಅಡ್ಡೆಯಾಗಿ ರೂಪುಗೊಂಡಿದೆ. ಆಂಧ್ರದ ಮುಖ್ಯಮಂತ್ರಿ ರಾಜಶೇಖರರೆಡ್ಡಿ ಬದುಕಿದ್ದಾಗಲೇ ಕರ್ನಾಟಕದಿಂದ ದೋಚಿದ ರೆಡ್ಡಿಗಳ ಅದಿರಿಗೆ ಚಿತ್ತೂರಿನಲ್ಲಿ ನಕಲಿ ಪರ್ಮಿಟ್ ಕಲ್ಪಿಸುವ ವ್ಯವಸ್ಥೆ ಮಾಡಿಕೊಟ್ಟಿದ್ದರು.

ಯಾವುದೇ ಚೆಕ್‌ಪೋಸ್ಟು, ಪರ್ಮಿಟ್ಟು ಯಾವುದಕ್ಕೂ ನಿಲುಕದೆ ದೋಚುತ್ತಿದ್ದ ಇಂಥ ಕಳ್ಳಮಾಲಿನ ಲೂಟಿಯ ಲೆಕ್ಕಾಚಾರವೇ ಭಯಂಕರ. 63 ಗ್ರೇಡ್ ಅದಿರಿನ ಸದ್ಯದ ಮಾರುಕಟ್ಟೆ ರೇಟೇ ಟನ್ನಿಗೆ 1200 ರೂಪಾಯಿಯಷ್ಟಿದೆ. ಪ್ರತಿ ನಿತ್ಯ ಕನಿಷ್ಠ 4000 ಲಾರಿಗಳು ತಲಾ 30 ಟನ್ನಿನಂತೆ ಸಾಗಿಸಿದರೂ ದಿನಕ್ಕದು 12 ಲಕ್ಷ ಟನ್ನುಗಳಷ್ಟಾಯಿತು. ಇಂಥ ಹನ್ನೆರಡು ಲಕ್ಷ ಟನ್ನುಗಳ ಮಾರುಕಟ್ಟೆ ಬೆಲೆಯೇ ಹದಿನಾಲ್ಕು ಕೋಟಿಗಳಷ್ಟಾಗುತ್ತದೆ.

ಅಂದರೆ ದಿನವೊಂದಕ್ಕೆ, ಬಳ್ಳಾರಿ, ಹೊಸಪೇಟೆ, ಸಂಡೂರು ಭಾಗದಿಂದ ದೋಚಲ್ಪಡುವ ಅದಿರಿನ ಕನಿಷ್ಠ ಮೊತ್ತವೇ ಹದಿನಾಲ್ಕು ಕೋಟಿ!


ಈ ಪೈಕಿ ಅರ್ಧಕ್ಕರ್ಧ ರೆಡ್ಡಿಗಳದಾದರೆ, ಇನ್ನರ್ಧದಲ್ಲಿ ಶೇ. 30 ರಷ್ಟು ಕಮಿಷನ್ ಗಿಟ್ಟುತ್ತದೆ. ಆರೋಗ್ಯ ಮಂತ್ರಿ ಶ್ರೀರಾಮುಲು, ಕಂದಾಯ ಮಂತ್ರಿ ಕರುಣಾಕರ ರೆಡ್ಡಿ, ಪ್ರವಾಸೋದ್ಯಮ ಸಚಿವ ಗಾಲಿ ಜನಾರ್ದನ ರೆಡ್ಡಿ ಮತ್ತು ಕೆ.ಎಂ.ಎಫ್ ಅಧ್ಯಕ್ಷ ಸೋಮಶೇಖರ ರೆಡ್ಡಿ ಸೇರಿದಂತೆ ಬಳ್ಳಾರಿ ದೊರೆಗಳ ದಿನವೊಂದರ ಆದಾಯವೇ ಎಂಟು ಕೋಟಿ!

ಇಂಥ ಆದಾಯಕ್ಕೆ ಕಲ್ಲು ಬಿದ್ದದ್ದು ಮೊನ್ನೆ, ಪ್ರತೀ ಲಾರಿಗೆ ಸಾವಿರ ರೂಪಾಯಿ ಸುಂಕ ವಿಧಿಸಿದರೆ, ಕಡ್ಡಾಯವಾಗಿ ಪ್ರತೀ ಲಾರಿಯವನೂ ತನ್ನ ಪರ್ಮಿಟ್, ತೋರಿಸಬೇಕಾಗುತ್ತದೆ. ಪರ್ಮಿಟ್ಟೇ ಇಲ್ಲದೆ ಸಾಗಿಸುತ್ತಿದ್ದ ರೆಡ್ಡಿ ಗ್ಯಾಂಗ್ ಪರ್ಮಿಟ್ ಎಲ್ಲಿಂದ ತರುತ್ತದೆ? ಜೊತೆಗೆ ಸುಂಕ ವಸೂಲಿಗೆಂದೇ ಈಗ ಹಗರಿ, ಬೊಮ್ಮನಾಳ, ರೂಪನಾಳ ಮತ್ತು ರಾಮದುರ್ಗಗಳಲ್ಲಿ ಚೆಕ್‌ಪೋಸ್ಟ್‌ಗಳಾಗಿವೆ. ಇಂಥ ಚೆಕ್‌ಪೋಸ್ಟುಗಳ ಮುಂದೆ ರೆಡ್ಡಿಗಳ ಲಾರಿಗಳು ಸಾಲುಗಟ್ಟಿ ನಿಲ್ಲಬೇಕು. ಜೊತೆಗೆ ಕಡ್ಡಾಯವಾಗಿ ಹದಿನಾಲ್ಕು ಟನ್ನುಗಳಷ್ಟನ್ನೇ ಸಾಗಿಸಬೇಕು. ಹಿಂದಾದರೆ, ಒಂದೇ ಲಾರಿಯಲ್ಲಿ ಮೂವತ್ತು ಟನ್ ಸಾಗಿಸುತ್ತಿದ್ದರು. ಈಗ ಅಷ್ಟೇ ಅದಿರು ಸಾಗಿಸಲು ಎರಡು ಲಾರಿಗಳು ಬೇಕು. ಪರ್ಮಿಟ್ ಪ್ರಕಾರವೇ ಸಾಗಿಸಬೇಕು ಎಂದಾದಮೇಲೆ ಇಡೀ ಅಕ್ರಮ ದಂಧೆಯೇ ನಿಂತಂತಾಯಿತಲ್ಲ.

ಇದು ಗಣಿ ಧೂರ್ತರ ಹೊಟ್ಟೆ ಸಂಕಟ. ಈ ತನಕ ಇಂಥ ಹಗಲು ದರೋಡೆಗೆ ಬೆಂಗಾವಲಾಗಿ ನಿಂತಿದ್ದು ಬಳ್ಳಾರಿ ಡಿಸಿ ಶಿವಪ್ಪ, ಎಸ್ಪಿ ಸೀಮಂತಕುಮಾರ್ ಸಿಂಗ್ ಮತ್ತು ಡಿಎಫ್‌ಓ ಮುತ್ತಯ್ಯ. ಇಂಥ ದಗಲುಬಾಜಿ ಅಧಿಕಾರಿಗಳನ್ನು ರಾತ್ರೋರಾತ್ರಿ ಎತ್ತಂಗಡಿ ಮಾಡಿರುವ ಯಡ್ಡಿ ಇಡೀ ರೆಡ್ಡಿ ಗ್ಯಾಂಗಿನ ಬುಡಕ್ಕೇ ಕೊಳ್ಳಿ ಇಟ್ಟಿದ್ದಾರೆ. ಜೊತೆಗೆ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಮತ್ತೊಬ್ಬ ಪ್ರಾಮಾಣಿಕ ಅಧಿಕಾರಿ ಮದನಗೋಪಾಲ್‌ರನ್ನು ತಂದು ಅಲ್ಲಿದ್ದ ಶ್ರೀರಾಮುಲು ಭಂಟ ಪೆರುಮಾಳ್‌ನನ್ನು ಒದ್ದೋಡಿಸಿದ್ದಾರೆ. ರೌಡಿ ಶ್ರೀರಾಮುಲುವಿನ ಮತ್ತೊಬ್ಬ ಭಂಟ ಗದಗ್ ಜಿಲ್ಲಾಧಿಕಾರಿಯಾಗಿದ್ದ ಪ್ರಸಾದ್‌ನನ್ನು ಕಿಕ್‌ಔಟ್ ಮಾಡಿದ್ದಾರೆ. ಅಲ್ಲಿಗೆ ರೆಡ್ಡಿಗಳ ಅರ್ಧ ಸೊಕ್ಕು ಉಡುಗಿದಂತಾಗಿದೆ.

ಸ್ವಾರ್ಥಕ್ಕೋ, ಜಿದ್ದಿಗೋ, ಪ್ರಾಬಲ್ಯಕ್ಕೋ ಯಡ್ಡಿ ಗಣಿಕಳ್ಳರ ಸೊಕ್ಕು ಮುರಿದಷ್ಟೂ ಅದು ಕರ್ನಾಟಕದ ಮಟ್ಟಿಗೆ ಒಳಿತೇ ಹೊರತು, ಕೆಡುಕಲ್ಲ. ಜಗದೀಶ್ ಶೆಟ್ಟರ್, ಈಶ್ವರಪ್ಪನಂಥವರೇನಾದರೂ ಯಡ್ಡಿ ಮೇಲಿನ ಜಿದ್ದಿಗೆ ರೆಡ್ಡಿಗಳ ಬೆನ್ನಿಗೆ ನಿಂತರೆಂದರೆ, ಅದು ಬಿಜೆಪಿಗಷ್ಟೇ ಅಲ್ಲ ನಾಡಿಗೂ ಕಂಟಕ.

● ರಾ. ಸೋಮನಾಥ್



Page 3 of 4


ದಿನಾಂಕ 24-10-2009 ರಂದು ...

11 ◄◄◄

ಟೆಂಡರ್ ಸಲ್ಲಿಸಿ ಕೆಳಗಿಳಿಯುತ್ತಿದ್ದ ಪ್ರಶಾಂತರನ್ನು ಬಳ್ಳಾರಿ ರೌಡಿ ಪಡೆ ಕೆಪಿಸಿಎಲ್ ಕಚೇರಿಯಿಂದಲೇ ಕ್ವಾಲೀಸ್ ಗಾಡಿಯೊಂದಕ್ಕೆ ಎತ್ತಾಕಿಕೊಂಡಿದೆ. ಅಲ್ಲಿಂದ ಸೀದಾ ರೇಸ್‌ಕೋರ್ಸ್ ರಸ್ತೆಯ ಕಂದಾಯ ಮಂತ್ರಿ ಕರುಣಾಕರ ರೆಡ್ಡಿಯ ಸರ್ಕಾರಿ ನಿವಾಸಕ್ಕೆ ಕರೊತ್ತೊಯ್ದು ಅಲ್ಲಿದ್ದ ಸೋಮಶೇಖರ ರೆಡ್ಡಿಯ ಎದುರೇ ಹಿಗ್ಗಾಮುಗ್ಗಾ ಥಳಿಸಿದೆ. ಇತ್ತ ರೌಡಿ ಗ್ಯಾಂಗ್ ಪ್ರಶಾಂತ್‌ನನ್ನು ಹಿಡಿದು ಬಡಿಯುತ್ತಿದ್ದರೆ ಪಕ್ಕಾ ವಿಲನ್ ಗೆಸ್ಟಿನಲ್ಲಿ ಜಿವಿಆರ್ ಕಂಪೆನಿಯ ಧೂರ್ತ ಮಾಧವಗೌಡನ ಜೊತೇಗೇ ಏರಿ ಬಂದ ಸೋಮಶೇಖರ್ ರೆಡ್ಡಿ 'ಬೆಂಗಳೂರು ಅಂತ ನಿನ್ನನ್ನು ಬಿಡ್ತಾ ಇದ್ದೀನಿ. ಇದೇನಾದ್ರೂ ಬಳ್ಳಾರಿಯಾಗಿದ್ರೆ ನಿನ್ನ ತಲೆ ಕಡಿದು ಹಾಕುತ್ತಿದ್ದೆ' ಎಂದು ಹೂಂಕರಿಸಿಬಿಟ್ಟ.

ಒದೆ ತಿಂದು ಹೈರಾಣಾದ ಪ್ರಶಾಂತ್‌ನನ್ನು ಆಸ್ಪತ್ರೆಗೆ ಸೇರಿಸಿದ ಸೀತಾರಾಮ್ ಶೆಟ್ಟಿ ಮರುದಿನವೇ ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟಿದ್ದಾರೆ. ಅವರದೇ ಬಿಜೆಪಿ ಸರ್ಕಾರವಿದ್ದೂ ಮುಖ್ಯಮಂತ್ರಿಯೇ ಥರಗುಟ್ಟುವಂಥ ಸ್ಥಿತಿಯಿದ್ದೂ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಸೋಮಶೇಖರ ರೆಡ್ಡಿಯ ವಿರುದ್ಧ ಇನ್‌ಸ್ಪೆಕ್ಟರ್ ಲೋಕೇಶ್ವರ್ ಎಫ್‌ಐಆರ್ ಹರಿಯುತ್ತಾರೆಂದರೆ, ಅದು ರೆಡ್ಡಿಗಳ ಪಾಪದ ಕೊಡ ತುಂಬಿ ಬಂದಿದ್ದರ ಸ್ಪಷ್ಟ ಶಕುನವಲ್ಲದೇ ಮತ್ತೇನಾಗಿರಲಿಲ್ಲ, ಕೆಎಂಎಫ್ ಅಧ್ಯಕ್ಷ ರೆಡ್ಡಿ ವಿರುದ್ಧ ಪ್ರಕರಣ ದಾಖಲಿಸುವ ಬಗ್ಗೆ ಕಮೀಷನರ್ ಬದರಿಗೆ ತಕ್ಷಣವೇ ಮಾಹಿತಿ ರವಾನೆಯಾಗಿತ್ತು. ಬದರಿ ಅದನ್ನು ಮುಖ್ಯಮಂತ್ರಿ ಕಚೇರಿಗೆ ತಿಳಿಸಿಯೂ ಇದ್ದರು. ಬಹುಶಃ ಯಡ್ಡಿಯಿಂದ ಸ್ಪಷ್ಟ ಸೂಚನೆ ಸಿಕ್ಕಿಯೇ ಪ್ರಕರಣ ದಾಖಲಿಸಲು ಬದರಿ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ.

ಗಣಿ ರೆಡ್ಡಿಗಳ ನಿರಂಕುಶ ದುರಾಚಾರ ಕೊನೆಗೆ ಯಡ್ಡಿನೇ ಮುಳುಗು ನೀರು ತರುತ್ತಿರುವುದಕ್ಕೆ ಉಪ್ಪಾರಪೇಟೆಯ ಎಫ್‌ಐಆರ್ ಮುನ್ನುಡಿಯಲ್ಲದೇ ಮತ್ತೇನು?



The Inspector Of Police
Upparpet Police Station
Bangalore.

From,
Dr N. Sitaram Shetty
Managing Director
S N C Power Corporation
No 7 Residency Road
Bangalore-560025

Sir,

I wish to bring to your attention that certain incidents took place on 24/10/09, and on 23/10/09. The first incident took place on 21/10/09 when my manager received a call from ... number 9986600779 and the person introduced himself as Somashekar Reddy MLA Bellary. He intimidated my manager to support GVPR a hyderabad based company in the forthcoming tender in Bangalore and informed the necessary authorities in Bellary to give protection to my staff ... which is located in Bellary District.

Thanking you

Dr N.S Sitaram Shetty
23/10/09


ತಲೆದಂಡಕ್ಕೆ ಮೂರೇ ಗೇಣು?

ಸದ್ಯ ಯಡ್ಡಿ ವಿರುದ್ಧ ಸಿಡಿದೆದ್ದ ಬಿಜೆಪಿ ಶಾಸಕರ ಸಂಖ್ಯೆ ಐವತ್ತೆರಡಂತೆ!

ಇದು ಯಡ್ಡಿ ನಿಷ್ಠರೇ ಹಾಕಿದ ಲೆಕ್ಕಾಚಾರವಂತೆ!

ಅಕ್ಟೋಬರ್ 29ರ ಬೆಳಗ್ಗೆ ಬಿಜೆಪಿ ಶಾಸಕಾಂಗ ಪಕ್ಷದ ಔಪಚಾರಿಕ ಸಭೆಯೊಂದನ್ನು [illegible] ಮನೆಯಲ್ಲೇ ಕರೆದಿದ್ದ ಯಡ್ಡಿಗೆ ಎಂಥಾ ನಿರಾಶೆ ಕಾದಿತ್ತೆಂದರೆ ಗಂಟೆ [illegible]ತ್ತಾದರೂ ಹನ್ನೆರಡು ಮಂದಿ ಎಮ್ಮೆಲ್ಲೇಗಳಿರಲಿಲ್ಲ. ಅದೇ ಹೊತ್ತಿಗೆ ಜಗದೀಶ್ [illegible]ಟ್ಟರ್ ಮನೆಯಲ್ಲಿ 25 ಕ್ಕೂ ಹೆಚ್ಚು ಎಮ್ಮೆಲ್ಲೇಗಳಿದ್ದರೆಂಬ ಸುದ್ದಿ ಸಿಕ್ಕಿದ್ದೇ ತಡ [illegible]ಗಾಲಾದ ಯಡ್ಡಿ ಕರೆದ ಸಭೆಯನ್ನೇ ಹಠಾತ್ತಾಗಿ [illegible]ಮುಂದೂಡಲ್ಪಟ್ಟಗೊಳಿಸಿಬಿಟ್ಟರು.

ಅತ್ತ ಶೆಟ್ಟರ್ ಮನೆಯಲ್ಲಿ ಎಂಥಾ ರಣೋತ್ಸಾಹದ [illegible]ತಾವರಣವೆಂದರೆ ರೋಣದ ಶಾಸಕ ಕಳಕಪ್ಪ ಬಂಡಿ, [illegible]ಳಗಾವಿಯ ಎಮ್ಮೆಲ್ಲೇ ಅಭಯ್ ಪಾಟೀಲ್ ಮತ್ತು [illegible]ಲ್ಬರ್ಗಾದ ಚಂದ್ರಶೇಖರ್ ಪಾಟೀಲ್ ಮೂವರೂ [illegible]ರಿಕೊಂಡೇ ಪತ್ರಿಕಾಗೋಷ್ಠಿ ನಡೆಸಿ 'ಸಿಎಂ. ಆಗೋದಕ್ಕೆ [illegible]ಡ್ಡಿ ನಾಲಾಯಕ್ಕು, ಶೆಟ್ಟರ್‌ರೇ ನಮ್ಮ ನಾಯಕರು....' [illegible]ದುಬಿಟ್ಟರು. ಉತ್ತರ ಕರ್ನಾಟಕದ ಬಹುತೇಕ ಶಾಸಕರು [illegible] ಬೆನ್ನಿಗಿರುವ ಸಂಗತಿ ಗೊತ್ತಾಗಿದ್ದೇ ಯಡ್ಡಿ ಇಂಟಲಿಜೆನ್ಸ್ [illegible]ಮುಖ್ಯಸ್ಥ ಜ್ಯೋತಿಪ್ರಕಾಶ್ ಮಿರ್ಜಿಯನ್ನು ಕರೆದು [illegible]ಕ್ಕಾಮಕ್ಕಾ ರೇಗಿಬಿಟ್ಟರು. "ಅಲ್ರೀ ಇದ್ಯಾವುದೂ ಈತನಕ [illegible]ಮ್ಮ ಗಮನಕ್ಕೆ ಬರಲೇ ಇಲ್ವಾ? ಯಾಕ್ರೀ ಇದನ್ನೆಲ್ಲ [illegible]ನಗೆ ಮೊದ್ಲೇ ಹೇಳ್ಲಿಲ್ಲ?" ಎಂದು ಪೇಚಾಡಿದ ಯಡ್ಡಿಗೆ [illegible]ರ್ಜಿ ತಾನೇ ಏನೆಂದು ಉತ್ತರ ಕೊಟ್ಟಾರು?



ಮತ್ತೊಂದೆಡೆ ಗಣಿ ರೆಡ್ಡಿಗಳ ಬೆಂಬಲಿಗರಾದ ಹದಿನೈದು [illegible]ಂದಿ ಶಾಸಕರು ಹೈದರಾಬಾದಿನ ಬೇಗಂಪೇಟೆ ವಿಮಾನ ನಿಲ್ದಾಣದ ಪಕ್ಕದ [illegible]ಗನ್ ಮೋಹನ್ ರೆಡ್ಡಿಯ ರೆಸಾರ್ಟಿನಲ್ಲಿ ಜಮಾವಣೆಯಾದ ಸುದ್ದಿ ಕೂಡ [illegible]ಡ್ಡಿಯ ದುಗುಡವನ್ನು ಇಮ್ಮಡಿಸಿತ್ತು. ಇದೇ ಶಾಸಕ ಹಿಂಡಿನ ಸಮೇತ ಬಾಲಚಂದ್ರ [illegible]ರಕಿಹೊಳಿ ಗೋವಾ ಪ್ರವಾಸಕ್ಕೆ ಹೋಗುತ್ತಿದ್ದಾರೆಂಬ ಮತ್ತೊಂದು ಮಾಹಿತಿ [illegible]ಕ್ಕಿದ್ದೇ ಯಡ್ಡಿಯ ಹತಾಶೆ ಹೆಚ್ಚಿತು.

ಆರೆಸ್ಸೆಸ್ ಏಜೆಂಟ್ ಮತ್ತು ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಸಂತೋಷ್‌ಜಿ [illegible]ಬಾತನನ್ನು ಮನೆಗೇ ಕರೆಸಿಕೊಂಡು ಗಣಿ ರೆಡ್ಡಿಗಳಿಗೆ ನಿಷ್ಠರಾದ ಎಲ್ಲಾ ಮಂತ್ರಿಗಳನ್ನು [illegible] ಮಾಡಿದರೆ ಹೇಗೆ? ಎಂದು ಚೌಕಾಶಿಗಿಳಿದರೆ ಹೈಕಮಾಂಡ್ ಸಂದೇಶವೇ ಬೇರೆಯಿತ್ತು. ಅಂತಃಕಲಹವನ್ನು ತಣಿಸುವ ಹೊಣೆಯನ್ನು ಈ ಹೊತ್ತಿಗಾಗಲೇ ಹೈಕಮಾಂಡ್ ಅನಂತ್‌ಕುಮಾರ್ ಹೆಗಲಿಗೆ ಹಾಕಿದ್ದಾಗಿತ್ತು. ಅನಂತ್ ಕೂಡ ಎಂಥಾ ಷಡ್ಯಂತ್ರಕ್ಕಿಳಿದರೆಂದರೆ ಶಾಸಕಾಂಗ ಪಕ್ಷದ ಸಭೆ ಕರೆದು ರಹಸ್ಯ ಚುನಾವಣೆ ನಡೆಸಿ ನಾಯಕತ್ವದ ಬಗ್ಗೆ ನಿರ್ಧರಿಸುವುದೇ ಸೂಕ್ತ ಎಂದುಬಿಟ್ಟರು.

ಹಾಗೊಮ್ಮೆ ರಹಸ್ಯ ಮತ ಪರೀಕ್ಷೆಯೇನಾದರೂ ನಡೆದರೆ ಬಹುತೇಕ ಶಾಸಕರೆಲ್ಲ ಯಡ್ಡಿಗೆ ಕೈಕೊಡುತ್ತಾರೆಂಬುದು ಅನಂತ್‌ಗೆ ಚೆನ್ನಾಗಿ ಗೊತ್ತಿತ್ತು. ಅದೇ ಹೊತ್ತಿಗೆ ಅರುಣ್ ಜೈಟ್ಲಿ ತಾಜ್ ಹೋಟೆಲಿನಲ್ಲಿ ಕೂತು ಬೆಂಕಿ ಆರಿಸಲೆತ್ನಿಸಿದರೆ ಕರುಣಾಕರ ರೆಡ್ಡಿ ಗ್ಯಾಂಗ್ ತಾಜ್ ಹೋಟೆಲಿಗೇ ನುಗ್ಗಿ ಯಡ್ಡಿ ವಿರುದ್ಧ ಮತ್ತಷ್ಟು ಬತ್ತಿ ಹಚ್ಚಿತ್ತು. ಹಾಗಂಥ ಜೇಟ್ಲಿ ಗಣಿ ರೆಡ್ಡಿ ಗ್ಯಾಂಗಿಗೆ ಸೊಪ್ಪು ಹಾಕಲಿಲ್ಲ ನಿಜ. ಜೇಟ್ಲಿ ಹೇಳಿದ ಬುದ್ಧಿಗೆ ರೆಡ್ಡಿಗಳೂ ಮಣಿಯಲಿಲ್ಲ.


ಯಡ್ಡಿ ಪಾಲಿಗೆ ಕ್ಷಣಕ್ಷಣಕ್ಕೂ ಕಗ್ಗಂಟು ಬಿಗಿಯಾಗುತ್ತಿದೆಯೇ ಹೊರತು ಸಡಿಲಗೊಳ್ಳುತ್ತಿಲ್ಲ ಎಂಬುದಕ್ಕೆ ಮತ್ತೊಂದು ಬೆಳವಣಿಗೆಯಂತಿದ್ದದ್ದು ಆರೆಸ್ಸೆಸ್ ಅಂತರ್ಯುದ್ಧ. ಮೈ.ಚ. ಜಯದೇವ ಎಂಬ ಲಿಂಗವಂತ ಚೆಡ್ಡಿ ಯಡ್ಡಿಯ ಬೆನ್ನಿಗೆ ಬಲವಾಗಿ ನಿಂತಿದ್ದು ಒಂದೆಡೆಯಾದರೆ, ಅದಕ್ಕೆ ವ್ಯತಿರಿಕ್ತವಾಗಿ, ಮಂಗೇಶ್ ಬೆಂಡೆ ಮತ್ತು ಸಂತೋಷ್‌ಜಿ ಶೆಟ್ಟರ್ ಬೆಂಬಲಕ್ಕೆ ನಿಂತಿದ್ದರು.

ಯಡ್ಡಿಯ ಪಾಲಿಗೆ ಆರೆಸ್ಸೆಸ್ ಬೆಂಬಲ ಕೂಡ ಕ್ಷೀಣಿಸುತ್ತಿತ್ತು. ಶೋಭಾ ಕರಂದ್ಲಾಜೆ ಎಂಬ ಬಿಂಕದ ಹೆಂಗಸನ್ನು ನಂಬಿ ಬೆಂಬಲಿಗರನ್ನೂ, ಶಾಸಕರನ್ನೂ, ಮಂತ್ರಿಗಳನ್ನೂ ತುಚ್ಛವಾಗಿ ಕಂಡ ಯಡ್ಡಿಯ ಮೂರ್ಖತನದಿಂದಾಗಿ ಗಣಿ ರೆಡ್ಡಿಗಳ ಆಂಧ್ರದ ಲಾಬಿಗೆ ಕರ್ನಾಟಕವನ್ನು ಬಲಿ ಕೊಡುವ ಎಲ್ಲಾ ಸಾಧ್ಯತೆಗಳೂ ನಿಚ್ಚಳಗೊಂಡಿದ್ದವು.

'ಯಡ್ಡಿ ಹಠಾವೋ' ರಾಗಕ್ಕೆ ಶೆಟ್ಟರ್, ಅಶೋಕ್, ಈಶ್ವರಪ್ಪ, ಶಂಕರಮೂರ್ತಿಯಂಥವರೆಲ್ಲ ತಾಳ ಹಾಕುತ್ತಿದ್ದರೆ ಅದು ಗಣಿರೆಡ್ಡಿಗಳ ಅಟ್ಟಹಾಸಕ್ಕೆ ಇನ್ನಷ್ಟು ಶಕ್ತಿ ತುಂಬಿದಂತಿತ್ತು. ಕೊನೇ ಗಳಿಗೆಯ ವರ್ತಮಾನವೇನೆಂದರೆ ಯಡ್ಡಿಯ ಕುರ್ಚಿ ಕಾಯುವಲ್ಲಿ ಹೈಕಮಾಂಡ್ ಕೂಡ ಕೈಚೆಲ್ಲಿ ಕೂತುಬಿಟ್ಟದೆ.

● ರಾ. ಸೋ.

ಅಶೋಕ್ ವರಸೆ ಅಂದ್ರೆ



ಮುಖ್ಯಮಂತ್ರಿ ಕುರ್ಚಿಯೇ ಅಲ್ಲಾಡುತ್ತಿರುವಾಗ ತಮಗೆಷ್ಟು ಲಾಭ ಸಿಕ್ಕೀತು ಎಂದು ಅಡ್ಡಗೋಡೆಯೇರಿ ಕುಂತವರ ಪೈಕಿ ದೊಡ್ಡ ಹೆಸರೆಂದರೆ ಅದು ಸಾರಿಗೆ ಮಂತ್ರಿ ಆರ್. ಅಶೋಕ್. ಅರಾಜಕ ಅತಂತ್ರದಲ್ಲಿ ಬಂದಷ್ಟು ಬರಲಿ ಎಂಬ ದುರಾಶೆಗೆ ಬಿದ್ದ ಅಶೋಕ್ ನಿನ್ನೆ ಅಂದರೆ ಅಕ್ಟೋಬರ್ 28 ರ ರಾತ್ರಿ ಬೆಂಗಳೂರು ನಗರದ ಬಿಜೆಪಿ ಶಾಸಕರ ಸಭೆ ನಡೆಸಿದರೆ ಅಲ್ಲಿ ಸೇರಿದ್ದು ಹನ್ನೆರಡು ಮಂದಿಯಂತೆ!


ದಾಸರಹಳ್ಳಿಯ ಮುನಿರಾಜು, ಕೆ.ಆರ್. ಪುರಂನ ನಂದೀಶ್ ರೆಡ್ಡಿ, ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ, ಯಲಹಂಕದ ವಿಶ್ವನಾಥ್ ರೆಡ್ಡಿ, ಮಲ್ಲೇಶ್ವರದ ಅಶ್ವಥ್ ನಾರಾಯಣ, ರಾಜರಾಜೇಶ್ವರಿ ನಗರದ ಎಂ. ಶ್ರೀನಿವಾಸ್, ಬೆಂಗಳೂರು ದಕ್ಷಿಣದ ಕೃಷ್ಣಪ್ಪ, ನೆಲಮಂಗಲದ ನಾಗರಾಜು, ತುಮಕೂರು ಗ್ರಾಮಾಂತರದ ಸುರೇಶ್ ಗೌಡ ಮತ್ತು ಜಯನಗರದ ವಿಜಯ್‌ಕುಮಾರ್ ಸೇರಿದಂತೆ ಒಟ್ಟು ಹನ್ನೆರಡು ಮಂದಿ ಎಮ್ಮೆಲ್ಲೇಗಳನ್ನು ಗುಡ್ಡೆ ಹಾಕಿದ ಅಶೋಕ್ ಶಾಲಲ್ಲಿ ಸುತ್ತಿ ಹೊಡೆದಂತೆ 'ಸದಾನಂದಗೌಡರೇ ನಮ್ಮ ನಾಯಕರು. ನಮ್ಮ ನಿಷ್ಠೆಯೇನಿದ್ದರೂ ಪಕ್ಷದ ಅಧ್ಯಕ್ಷರಿಗೇ ಹೊರತು ಯಡಿಯೂರಪ್ಪನವರಿಗಲ್ಲ' ಎಂದು ಬಿಟ್ಟರು.

ಇದರರ್ಥ ಬಿಜೆಪಿಯಲ್ಲಿ ಒಕ್ಕಲಿಗರ ಲಾಬಿ ಕೂಡ ಚಾಲ್ತಿಯಲ್ಲಿದೆಯೆಂದೂ, ಅದಕ್ಕೆ ತಾನೇ ಅಧಿಪತಿಯೆಂದೂ, ಏನೇ ಆಗುಹೋಗುಗಳಾದರೂ ಅದರಲ್ಲಿ ತಮಗೂ ಒಂದು ಪಾಲು ಬೇಕೆಂದೂ, ತಮ್ಮನ್ನು ಹೊರತುಪಡಿಸಿ ಯಾರೂ ಏನೂ ಮಾಡಕೂಡದೆಂಬ ಸಂದೇಶವೊಂದನ್ನು ಸಂಬಂಧಪಟ್ಟ ಪ್ರತಿಯೊಬ್ಬರಿಗೂ ಮುಟ್ಟಿಸುವುದು ಅಶೋಕ್ ಉದ್ದೇಶ.

ಉರಿಯುವ ಮನೆಯಲ್ಲಿ ಗಳ ಹಿರಿಯುವುದು ಅಂದರೆ ಇದೇ ತಾನೆ?

●

ಸುತ್ತೂರು-ಸಿದ್ದಗಂಗಾ ಸ್ವಾಮಿಗಳು ಶೆಟ್ಟರ್‌ಗೆ ಹೇಳಿದ್ದೇನು?



ಬಿಜೆಪಿಗಳ ಜೇದಿಜಗಳ ಹೈಕಮಾಂಡಿಗೆ ತಲುಪಿ ಬೆಂಗಳೂರಿನಲ್ಲಿ ಕೇಂದ್ರೀಕರಣಗೊಳ್ಳುವ ಮೊದಲು ವೀರಶೈವ ಮಠಗಳ ಸುತ್ತ ಒಂದು ರೌಂಡ್ ಹೊಡೆದುಬಂದಿತ್ತು. ಸುತ್ತೂರು ಹಾಗೂ ಸಿದ್ದಗಂಗಾ ಮಠಕ್ಕೆ ಯಡ್ಡಿ ಒಮ್ಮೆ ಹೋಗಿ ಬಂದರ ಅವರ ಪ್ರತಿಸ್ಪರ್ಧಿ ಜಗದೀಶ್ ಶೆಟ್ಟರ್ ಕೂಡ ಒಮ್ಮೆ ಹೋಗಿಬಂದರು.

ಪ್ರಸ್ತುತ ರಾಜಕೀಯ ಬಿಕ್ಕಟ್ಟಿನ ಬಗ್ಗೆ ಸುತ್ತೂರು ಶ್ರೀಗಳೊಂದಿಗೆ ಶೆಟ್ಟರ್ ಮಾತಾಡುವಾಗ ಸ್ವಾಮಿಗಳ [illegible] ಏನಾಗಿತ್ತು?

[illegible] ಸುತ್ತೂರು ಶ್ರೀಗಳು "ಯಡಿಯೂರಪ್ಪ ಹೋದರ ಲಿಂಗಾಯತರಿಗೆ ನಾಯಕರಿರುವುದಿಲ್ಲ, ನೀವೂ ಲಿಂಗಾಯತರು. ಲಿಂಗಾಯತರ [illegible] ನೀವು ಎಲ್ಲಾರ ರೆಡ್ಡಿಗಳ ಮಾತು ನಂಬಬೇಡಿ. ಇವತ್ತು ಯಡಿಯೂರಪ್ಪನವರನ್ನು ತೆಗದುಹಾಕಲು ರೆಡ್ಡಿಗಳು ನಿಮ್ಮನ್ನ ಬಳಸಿಕೊಳ್ಳುತ್ತಿದ್ದಾರ. ನಾಳೆ [illegible] ಹೀಗೆ ಮಾಡಲ್ಲ ಅಂತ ಏನು ಗ್ಯಾರಂಟಿ?" ಅಂತ ಕೇಳಿದರು ಎಂಬುದಾಗಿದೆ.

[illegible] ದೇವರ ಪ್ರಕಾರ ದೇವರೇಂದ್ರ ಸ್ವಾಮಿಗಳು "ಎಲ್ಲಾ ದೇವ[illegible] ಇಚ್ಛೆ. ಅದರಂತೆ ಏನಾಗುತ್ತದೂ ಅದೇ ಆಗಲಿ" ಎಂದು ಮಾತ್ರ [illegible] ಆದರ ಬರೀ ಹೇಳುವ ಮಾತನ್ನು [illegible] ಸೈಲೆಂಟಾಗಿ ಶೆಟ್ಟರ್ [illegible]

[illegible] ರಾಜಕಾರಣಿಗಳೇ ಅಲ್ಲವೆ? ಅದ್ದರಿಂದ ಯಾರು ಅಧಿಕಾರಕ್ಕೆ ಬಂದರೂ ಅವಂತೂ ಸೇಫ್ ಆಗಿರುತ್ತಾರೆ.

●

10 ◀◀◀

ಬೇಕಾಗುತ್ತದೆ. ಅಲ್ಲದೇ ಲಿಂಗಾಯತ [illegible] ಅದಕ್ಕೆ ಒಪ್ಪುವುದಿಲ್ಲ. ಶೆಟ್ಟರ್ ಕೂಡ ಬಣಜಿಗ ಲಿಂಗಾಯತರಾಗಿರುವುದರಿಂದ ಅವರನ್ನು ಮುಖ್ಯಮಂತ್ರಿ ಮಾಡಿದರೆ ಲಿಂಗಾಯತರೆಲ್ಲರ ಬೆಂಬಲ ಸಿಕ್ಕಿದಂತಾಗುತ್ತದೆ.

ಮೂರನೇಯದಾಗಿ, ಜಗದೀಶ್ ಶೆಟ್ಟರ್ ಉತ್ತರ ಕರ್ನಾಟಕದ ಲಿಂಗಾಯತ ನಾಯಕ. ಯಡಿಯೂರಪ್ಪ ಮಂಡ್ಯದಲ್ಲಿ ಹುಟ್ಟಿ ಶಿಕಾರಿಪುರದಲ್ಲಿ ರಾಜಕಾರಣ ಮಾಡಿದವರು. ಅಂದರೆ ದಕ್ಷಿಣ ಕರ್ನಾಟಕದ ಲಿಂಗಾಯತ. ಕಳೆದ ಚುನಾವಣೆಯಲ್ಲಿ ಬಿಜೆಪಿಗೆ ಭಾರಿ ಜನಬೆಂಬಲ ವ್ಯಕ್ತವಾಗಿದ್ದು ಉತ್ತರ ಕರ್ನಾಟಕದಲ್ಲೇ. ಅದೇ ಕಾರಣಕ್ಕೆ ಉತ್ತರ ಕರ್ನಾಟಕದಲ್ಲೇ ಅತೀ ಹೆಚ್ಚು ಸೀಟುಗಳನ್ನು ಬಿಜೆಪಿ ಗೆದ್ದಿತ್ತು. ಆದರೂ ಅಷ್ಟುಹೊತ್ತಿಗೆ ಯಡಿಯೂರಪ್ಪ ಬಿಜೆಪಿಯ ರಾಜ್ಯ ನಾಯಕನಾಗಿ ಬಿಂಬಿತವಾಗಿದ್ದರಿಂದ ಅವರದ್ದು ದಕ್ಷಿಣ ಕರ್ನಾಟಕವಾದರೂ ಮುಖ್ಯಮಂತ್ರಿ ಸ್ಥಾನಕ್ಕೇರಿದರು. ಈಗ ಜಗದೀಶ್ ಶೆಟ್ಟರ್‌ನನ್ನು ಮುನ್ನೆಲೆಗೆ ತಂದರೆ ಉತ್ತರ ಕರ್ನಾಟಕದ ಲಿಂಗಾಯತರೂ, ಲಿಂಗಾಯತ ಎಮ್ಮೆಲ್ಲೆಗಳೂ 'ತಮ್ಮ ಕಡೆಯವನೇ ಒಬ್ಬ ಮುಖ್ಯಮಂತ್ರಿಯಾಗ್ತಾನೆ' ಎಂದು ಖಂಡಿತವಾಗಿಯೂ ಬೆಂಬಲಿಸುತ್ತಾರೆ.

ನಾಲ್ಕನೆಯದಾಗಿ, ಕಳೆದ ಕೆಲವು ವರ್ಷಗಳಿಂದ ಯಡ್ಡಿ-ಶೆಟ್ಟರ್ ಪರಮ ಶತ್ರುಗಳು. ಈಗ ಯಡ್ಡಿ-ರೆಡ್ಡಿ ಕೂಡ ಶತ್ರುಗಳೇ. ಹಾಗಾಗಿ, 'ದುಷ್ಮನ್ ಕಾ ದುಷ್ಮನ್ ದೋಸ್ತ್ ಹೋತಾ ಹೈ' (ಶತ್ರುವಿನ ಶತ್ರು ಸ್ನೇಹಿತನಾಗುತ್ತಾನೆ) ಎಂಬ ತಂತ್ರವನ್ನು ರೆಡ್ಡಿಗಳು ಅನುಸರಿಸುತ್ತಿದ್ದಾರೆ. ಹಾಗೆ ನೋಡಿದರೆ ಶೆಟ್ಟರ್‌ಗೂ ರೆಡ್ಡಿಗಳಿಗೂ ಹೇಳಿಕೊಳ್ಳುವಂಥ ಗೆಳೆತನವೇನಿರಲಿಲ್ಲ. ತಮಗಿಬ್ಬರಿಗೂ ಯಡ್ಡಿ ಶತ್ರುವಾಗಿರುವುದರಿಂದ ಅವರಿಬ್ಬರೂ ಗಾಢ ಸ್ನೇಹಿತರಾಗಿದ್ದಾರೆ.

ಅಸಲಿಗೆ ಬಿಜೆಪಿಯಲ್ಲಿ ರೆಡ್ಡಿಗಳು ಸೀನ್‌ಗೆ ಬರುವ ಮೊದಲಿನಿಂದಲೂ ಯಡಿಯೂರಪ್ಪ ಮತ್ತು ಶೆಟ್ಟರ್ ಇಬ್ಬರೂ ಪಕ್ಷದ ಹಿರಿಯ ಹಾಗೂ ಪ್ರಭಾವಿ ನಾಯಕರೆ ಆಗಿದ್ದವರು. ಜಗದೀಶ್ ಶೆಟ್ಟರ್ ರಾಜ್ಯ ಬಿಜೆಪಿಯ ಅಧ್ಯಕ್ಷ ಸ್ಥಾನದಂಥ ಮಹತ್ವಪೂರ್ಣ ಹುದ್ದೆಯನ್ನೂ ಅಲಂಕರಿಸಿದ್ದರೆ ಯಡಿಯೂರಪ್ಪ ಜನಪ್ರಿಯ ನಾಯಕನಾಗಿ ಮುಖ್ಯಮಂತ್ರಿ ಸ್ಥಾನಕ್ಕೇರುವ ತಾಕತ್ತು ಬೆಳೆಸಿಕೊಂಡಿದ್ದವರು. ಇಬ್ಬರೂ ಕರ್ನಾಟಕದ ಅತಿ ಪ್ರಭಾವಿ ಜಾತಿಯಾಗಿರುವ ಲಿಂಗಾಯತ ಕೋಮಿಗೆ ಸೇರಿದವರು. ಆದರೆ, ತಂತ್ರ-ಕುತಂತ್ರಗಳಿಗೆ ಹೋಲಿಸಿದರೆ ಯಡಿಯೂರಪ್ಪನದ್ದು ಒಂದು ಕೈ ಮೇಲು. ಈ ಕಾರಣಕ್ಕೇನೆ ಇಡೀ ಲಿಂಗಾಯತ ಸಮುದಾಯದಲ್ಲಿ ಇಬ್ಬಿಬ್ಬರು ನಾಯಕರಿದ್ದರೆ ಮುಂದೊಂದು ದಿನ ಅಗ್ರಮಾನ್ಯ ನಾಯಕತ್ವಕ್ಕಾಗಿ ಕಿತ್ತಾಟ ಗ್ಯಾರಂಟಿ ಎಂಬುದನ್ನು ಮೊದಲೇ ಮನಗಂಡಿದ್ದ ಯಡ್ಡಿ ಜಗದೀಶ್ ಶೆಟ್ಟರ್ ತನಗೆ ಸೆಡ್ಡು ಹೊಡೆಯುವ ಮೊದಲೇ ಅವರನ್ನು ಚಿವುಟುವುದಕ್ಕೆ ಮೊದಲಿನಿಂದಲೂ ಪ್ರಯತ್ನಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದಲ್ಲಿ ತಾನು ಹೇಳಿದಂತೆ ಕೇಳಬಲ್ಲ, ಶೆಟ್ಟರ್ ವಿರುದ್ಧ ಕೌಂಟರ್ ವೇಟ್ ರೀತಿಯಲ್ಲಿ ಬೆಳೆಯಬಲ್ಲ ಸೂಕ್ತ ಲಿಂಗಾಯತ ರಾಜಕಾರಣಿಯೊಬ್ಬನ ತಲಾಶ್‌ನಲ್ಲಿ ಯಡ್ಡಿ ಇದ್ದರು. ಯಾವಾಗ ಬಸವರಾಜ್ ಬೊಮ್ಮಾಯಿ ಬಿಜೆಪಿಯ ಮಡಿಲಿಗೆ ಬಿದ್ದು ಯಡ್ಡಿಗೆ ಹತ್ತಿರವಾದನೋ ಆತನನ್ನೇ ಶೆಟ್ಟರ್‌ಗೆ ಪರ್ಯಾಯವಾಗಿ ಉತ್ತರ ಕರ್ನಾಟಕದ ಲಿಂಗಾಯತ ನಾಯಕನನ್ನಾಗಿ ಯಡ್ಡಿ ಬೆಳೆಸಲಾರಂಭಿಸಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದು ಅಧಿಕಾರಕ್ಕೇರಿ ಯಡ್ಡಿ ಮುಖ್ಯಮಂತ್ರಿಯಾದ ಮೇಲಂತೂ ತನಗೆ ದೊರೆತ ಅಧಿಕಾರ ಮತ್ತು ಜನಪ್ರಿಯತೆಯನ್ನು ಬಳಸಿಕೊಂಡು ಶೆಟ್ಟರ್ ಮೇಲೆ ಮತ್ತೊಂದು ಪೆಟ್ಟು ಕೊಟ್ಟರು. ಅದೆಂದರೆ ಮೊನ್ನೆ ಮೊನ್ನೆ ಬಿಜೆಪಿ ಸೇರಿದ ಬಸವರಾಜ್ ಬೊಮ್ಮಾಯಿಗೆ ಮಂತ್ರಿಗಿರಿ ದಯಪಾಲಿಸಿ ಶೆಟ್ಟರ್‌ನನ್ನು ಕನಿಷ್ಠ ಒಂದು ನಾಮಕಾವಸ್ಥೆಯ ಮಂತ್ರಿಯನ್ನೂ ಮಾಡದೇ ಶಾಶ್ವತವಾಗಿ ಮೂಲೆಗುಂಪು ಮಾಡುವುದಕ್ಕೆ ಪ್ರಯತ್ನಿಸಿದರು. ಕೊನೆಗೆ ಹೈಕಮಾಂಡ್ [illegible] ಅನಂತಕುಮಾರ್ ಬಣದಿಂದ ಹಾಗೂ ಉತ್ತರ ಕರ್ನಾಟಕದ ಕೆಲವು ಬಿಜೆಪಿ ಎಮ್ಮೆಲ್ಲೆಗಳಿಂದ ಒತ್ತಡ ತೀವ್ರವಾದಾಗ ಕೆಲಸಕ್ಕೆ ಬಾರದ ವಿಧಾನಸಭಾಧ್ಯಕ್ಷ ಸೀಟಿನ ಮೇಲೆ ಅವರನ್ನು ಕೂರಿಸಿ ಉತ್ಸವ ಮೂರ್ತಿಯನ್ನಾಗಿಸಿದರು. ತನ್ನಂಥ ಪಕ್ಷದ ಹಿರಿಯ ನಾಯಕನಿಗೆ ಯಡ್ಡಿ ಮಾಡಿದ ಈ [illegible] ಶೆಟ್ಟರ್ [illegible] ಆದರ [illegible]

[illegible]

● ಕುಮಾರ್ ಬುರಡಿಕ

ಬೆಂಗಳೂರು: ಅಲೆಮಾರಿ ಕುಟುಂಬಗಳು ಬೀದಿಪಾಲು

ಬೆಂಗಳೂರಲ್ಲೀಗ ನೆಲಗಳ್ಳರ ಹಾವಳಿ ಎಷ್ಟಾಗಿದೆಯೆಂದರೆ ಅವರು ಸ್ಲಮ್ಮುಗಳನ್ನೂ ಬಿಡುತ್ತಿಲ್ಲ. ಇತ್ತ ಕಡೆ ಬಡವರಿಗೆ ವಸತಿ ಸೌಲಭ್ಯ ಮೂಲಭೂತ ಸೌಕರ್ಯ ಒದಗಿಸಬೇಕಾದ ಸರ್ಕಾರಗಳು ಫ್ಲೈಓವರ್, ರಿಂಗ್‌ರೋಡ್, ಮೆಟ್ರೋಗಳಲ್ಲಿ ಮುಳುಗಿ ಹೋಗುತ್ತಿವೆ.




ಊರೂರು ಸುತ್ತುತ್ತ ಬದುಕು ಸಾಗಿಸುವ ಅಲೆಮಾರಿಗಳಿಗಂತೂ ಸರ್ಕಾರದ ಚೂರುಪಾರು ಸೌಲಭ್ಯಗಳೂ ಸಿಗುತ್ತಿಲ್ಲ. ಬೆಂಗಳೂರಿನ ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಯಶವಂತಪುರ ಹೋಬಳಿಯಲ್ಲಿ ಏಡಿಯಾ ಫ್ಯಾಕ್ಟರಿಯ ಪಕ್ಕದ ಜಾಗದಲ್ಲಿ ಟೆಂಟು ಹಾಕಿಕೊಂಡು ಬದುಕುತ್ತಿದ್ದ 134 ಅಲೆಮಾರಿ ಸಂಸಾರಗಳನ್ನು ರಾತ್ರೋರಾತ್ರಿ ಹೊಡೆದು ಓಡಿಸಲಾಗಿದೆ. ಅವರೆಲ್ಲ ಬೀದಿಪಾಲಾಗಿ ತಿಂಗಳಾಗುತ್ತ ಬಂದರೂ, ಅವರಿಗೆ ಪುನರ್ವಸತಿ ಕಲ್ಪಿಸುವುದಾಗಿ ಹೇಳಿದ್ದ ಕೊಳಚೆ ನಿರ್ಮೂಲನ ಮಂಡಳಿ ಕೆಲ ನೆಲಗಳ್ಳರ ಹಿತಾಸಕ್ತಿ ಕಾಪಾಡಲು ಹವಣಿಸುತ್ತಿದೆಯೇ ವಿನಃ ಅಲೆಮಾರಿಗಳ ಬದುಕು ಕಟ್ಟಲು ಅಲ್ಲ.

ಚಿಂದಿ ಆಯುವ ಕೆಲಸ, ಬುಡಬುಡಿಕೆ, ಗಿಣಿಶಾಸ್ತ್ರ ಹೀಗೆ ಹಲವು ನಿಶ್ಚಿತ ಆದಾಯಗಳಿಲ್ಲದ ಸಣ್ಣಪುಟ್ಟ ವೃತ್ತಿ ಮಾಡುವ ಅಲೆಮಾರಿ ಕುಟುಂಬಗಳು ಅಲ್ಲಿ 13 ವರ್ಷದಿಂದ ವಾಸವಾಗಿದ್ದವು. ಆ 2 ಎಕರೆ 16 ಗುಂಟೆ ಜಾಗವನ್ನು ಸ್ಲಂಬೋರ್ಡ್ ಸ್ಲಮ್ ಎಂದು ಗುರುತಿಸಿತ್ತು. ಆದರೆ ಅಲ್ಲಿ ಯಾವುದೇ ಮೂಲಭೂತ ಸೌಕರ್ಯ ಕಲ್ಪಿಸಲಿಲ್ಲ. ಈ ಭೂಮಿಯ ಒಡೆತನ ಹೊಂದಿರುವ ಚೆಡ್ಡಿ ನಾಯಕ ಪವನ್‌ಕುಮಾರ್ ಎಂಬಾತ ಅರ್ಜೆಂಟಾಗಿ ತನ್ನ ಜಾಗ ಬೇಕೇ ಬೇಕೆಂದ. ಆಗ ಸ್ಪಂದಿಸಿದ ಸ್ಲಂಬೋರ್ಡ್ ಬೆಂಗಳೂರು ದಕ್ಷಿಣ ತಾಲ್ಲೂಕಿನ ಗೊಲ್ಲಹಳ್ಳಿಯಲ್ಲಿ ಈ ಅಲೆಮಾರಿ ಕುಟುಂಬಗಳಿಗೆಂದು 9 ಎಕರೆ ಭೂಮಿಯನ್ನು ಕಂದಾಯ ಇಲಾಖೆಯಿಂದ ಪಡೆಯಿತು. ಆದರೆ ಮುಂದೆ ಅಲ್ಲಿಗೆ ಸ್ಥಳಾಂತರ ಮಾಡಿಸಲೇ ಇಲ್ಲ. ಇತ್ತ ಚೆಡ್ಡಿ ಶಾಸಕ ಮುನಿರಾಜುವಿನ ಬೆಂಬಲವಿರುವ ಪವನ್‌ಕುಮಾರ್ ಸ್ಲಮ್ ಗಣೇಶ್, ಕೆ. ತಮ್ಮಯ್ಯ ಎಂ.ಸಿ. ನಾರಾಯಣ್ ಎಂಬ ಗೂಂಡಾಗಳನ್ನು ಛೂ ಬಿಟ್ಟು ಅಲೆಮಾರಿಗಳ ಮೇಲೆ ದೌರ್ಜನ್ಯ ನಡೆಸಿ, ರಾತ್ರೋರಾತ್ರಿ ಆ ಎಲ್ಲ ಕುಟುಂಬಗಳನ್ನು ಓಡಿಸಿಬಿಟ್ಟ.

ಒಂದಿಷ್ಟು ಕುಟುಂಬಗಳು ಎಲ್ಲಿ ಹೋದವೋ ಗೊತ್ತಾಗಲಿಲ್ಲ, ಉಳಿದ ಕುಟುಂಬಗಳು ತಮಗಾಗಿ ಮೀಸಲಿಟ್ಟ ಗೊಲ್ಲಹಳ್ಳಿಯ 9 ಎಕರೆ ಜಾಗದಲ್ಲಿ ಹೋಗಿ ನೆಲೆಸಲು ನೋಡಿದವು. ಆದರೆ ಬೆಂಗಳೂರು ದಕ್ಷಿಣ ತಾಲೂಕಿನ ಚೆಡ್ಡಿ ಎಂಎಲ್‌ಎ ಎಂ. ಕೃಷ್ಣಪ್ಪನ ಚೇಲಾಗಳಿಗೆ ಈ ಭೂಮಿಯ ಮೇಲೆ ಕಣ್ಣಿದ್ದಿದುದರಿಂದ ಅಲ್ಲಿಯೂ ಅಲೆಮಾರಿ ಕುಟುಂಬಗಳಿಗೆ ತೊಂದರೆ ಕೊಡಲಾಯಿತು. ಗೂಂಡಾಗಳ ದೌರ್ಜನ್ಯ ನಿಲ್ಲಿಸಿ ಎಂದು ನಂದಿನಿ ಲೇಔಟ್ ಪೊಲೀಸ್ ಠಾಣೆ ಎದುರು ಪ್ರತಿಭಟಿಸಿದ ಈ ಕುಟುಂಬಗಳ ಮೇಲೇ ಪೊಲೀಸರು ಲಾಠಿ ಚಾರ್ಜ್ ಮಾಡಿ ಓಡಿಸಿದರು. ಈ ಎಲ್ಲದರಿಂದ ಸಾಕಾಗಿ ಹೋದ 50 ಕ್ಕೂ ಹೆಚ್ಚು ಕುಟುಂಬಗಳು ಎಲ್ಲಿ ಹೋದವೆಂಬುದೇ ಗೊತ್ತಿಲ್ಲ. ಇನ್ನು ಸುಮಾರು 50 ಕುಟುಂಬಗಳು ಲಗ್ಗೆರೆ ರಸ್ತೆಯ ಆಸುಪಾಸಿನಲ್ಲಿ, ತಾವರೆಕೆರೆ ಬಳಿ ಗಿಡ್ಡೇನಹಳ್ಳಿ ಬಳಿ ಟೆಂಟು ಹಾಕಿಕೊಂಡು ಬದುಕಿವೆ.


ನಾರಾಯಣ್


ತಮ್ಮಯ್ಯ


ಕೊಳಚೆ ನಿರ್ಮೂಲನಾ ಮಂಡಳಿಯವರು ಕೂಡಲೇ ಈ ಎಲ್ಲ ಕುಟುಂಬಗಳನ್ನು ಗೊಲ್ಲರಹಳ್ಳಿಗೆ ಸ್ಥಳಾಂತರಿಸಿ, ಅಲ್ಲಿ ಅವರಿಗೆ ವಸತಿ ಮತ್ತು ಮೂಲಸೌಕರ್ಯಗಳನ್ನು ಒದಗಿಸಬೇಕಾಗಿದೆ.

ತೀರ್ಥಹಳ್ಳಿ: ಬಲಾಢ್ಯರ ಪರ ಪುರಸಭೆ

ಇಲ್ಲಿ ಒಬ್ಬ ಅಸಹಾಯಕರ ಮನೆ ಸುತ್ತಲಿನ ಜಾಗವನ್ನು ಮೂರು ಕಡೆಯಿಂದ ಒತ್ತುವರಿ ಮಾಡಲಾಗುತ್ತಿದೆ. ಈ ಕುರಿತು ಮನೆಯೊಡೆಯ ಕೆ. ನಾಗಪ್ಪಚಾರಿ ತೀರ್ಥಹಳ್ಳಿ ಪುರ ಪಂಚಾಯತಿಗೆ ಮನವಿ ಸಲ್ಲಿಸಿ, ಸಲ್ಲಿಸಿ ದಣಿದಿದ್ದಾರೆ. 1930 ರಲ್ಲೇ ಅವರ ತಾತ ತಮಗೆ ನ್ಯಾಯ ಒದಗಿಸಿ ಅಂತಾ ಆಡಳಿತಕ್ಕೆ ಅಹವಾಲು ಸಲ್ಲಿಸಿದ್ದರು. ಅವತ್ತು ಒಂದು ಕಡೆಯಿಂದ ಒತ್ತುವರಿಯಾಗಿದ್ದರೆ ಇವತ್ತು ಮೂರು ಕಡೆಯಿಂದ ಒತ್ತುವರಿಯಾಗಿದೆ.


ಬಾನುಬಿ

ಈ ಚಿತ್ರದಲ್ಲಿರುವ ಔಟ್‌ಹೌಸೇ ಸಮಸ್ಯೆಯ ಕೇಂದ್ರಬಿಂದು. ಅನಂತ ಶೆಣೈಯವರು ನಾಗಪ್ಪಚಾರಿ ಅವರ ಜಾಗ ಒತ್ತುವರಿ ಮಾಡಿಕೊಂಡು ಚರಂಡಿಯ ಮೇಲೆ ಔಟ್‌ಹೌಸ್ ಎಬ್ಬಿಸಿದ್ದಾರೆ. 1939 ರಲ್ಲಿ ಅನಂತ ಶೆಣೈ ತಂದೆ ಟಿ.ವಿ. ಬಾಲಕೃಷ್ಣರಾವ್ ಅವರ ಸ್ವತ್ತಿನ ಅಳತೆ 83 ಅಡಿ ಉದ್ದ 29 ಅಡಿ ಅಗಲವಿತ್ತು. 1949 ರಲ್ಲಿ ಅದು 110 ಅಡಿ ಉದ್ದ 30 ಅಡಿ ಅಗಲವಾಯಿತು! ಅಂದರೆ ಉದ್ದದಲ್ಲಿ 27 ಅಡಿ ಒತ್ತುವರಿ. 1984-85 ರ ವೇಳೆಗೆ ಅಲ್ಲಿ ಅಕ್ರಮ ಔಟ್‌ಹೌಸ್ ಏಳುತ್ತದೆ. ಪುರಸಭೆ ದಾಖಲೆ ಪ್ರಕಾರ ಈ ಔಟ್‌ಹೌಸ್ ಅಗಲ 29 ಅಡಿ. ವಾಸ್ತವದಲ್ಲಿ ಅದು 45 ಅಡಿ ಇದೆ.



ಇಷ್ಟಲ್ಲದೇ ಇನ್ನೊಂದು ಕಡೆಯಿಂದ ಅಂಥೋಣಿಯಮ್ಮ ಎಂಬುವವರು ನಾಗಪ್ಪಚಾರಿಯವರ 12 ಅಡಿ ಜಾಗ ಒತ್ತುವರಿ ಮಾಡಿದ್ದಾರೆ. ಮತ್ತೊಂದು ಬದಿಯಲ್ಲಿ ಭಾಗ್ಯಲಕ್ಷ್ಮ ಎಂಬುವರೂ ಸ್ವಲ್ಪ ಜಾಗ ಒತ್ತುವರಿ ಮಾಡಿದ್ದಾರೆ. ನಾಗಪ್ಪಚಾರಿ ಅವರ ಮನೆ ಪಕ್ಕದಲ್ಲೇ ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳಿವೆ. ಮುಂದೆ ಈ ಹೆದ್ದಾರಿಗಳ ವಿಸ್ತರಣೆ ಕಾರ್ಯ ನಡೆದರೆ ಅವರ ಮನೆಯೂ ಹೋಗಬಹುದು. ಆಗ ಮನೆ ಕಟ್ಟಿಕೊಳ್ಳಲು ಅವರಿಗೆ ಜಾಗವೇ ಇರುವುದಿಲ್ಲ. ಏಕೆಂದರೆ ಮನೆ ಸುತ್ತಲಿರುವ ಜಾಗವೆಲ್ಲ ಒತ್ತುವರಿಯಾಗಿದೆ.

ತೀರ್ಥಹಳ್ಳಿ ಪುರಸಭೆ ಇತ್ತ ಗಮನಹರಿಸಿ ಅಸಹಾಯಕ ನಾಗಪ್ಪಚಾರಿ ಅವರಿಗೆ ನ್ಯಾಯ ಒದಗಿಸಲಿ.

ಸಿಂಧನೂರು: ಬಡ್ಡಿ ವ್ಯಾಪಾರಿ ಪ್ರದೀಪನ ವಂಚನೆ

ಸಿಂಧನೂರಿನಲ್ಲಿ ಮಾರ್ವಾಡಿ ಬಡ್ಡಿ ವ್ಯಾಪಾರಿಗಳು ರೈತರನ್ನು, ಇತರ ಬಡವರನ್ನು ಸುಲಿದು ಸುಲಿದು ಕೊಬ್ಬಿ ಹೋಗಿದ್ದಾರೆ. ಅಂತವರಲ್ಲಿ ಪ್ರದೀಪಕುಮಾರ್ ಎನ್ನುವವನಂತೂ ಅನಕ್ಷರಸ್ಥ ಬಡವರನ್ನು ಮೋಸಗೊಳಿಸುತ್ತಲೇ ಇದ್ದಾನೆ.

ಏಳು ವರ್ಷದ ಹಿಂದೆ ದರೀಯಾ ಕಾಲೋನಿಯ ಬಾನುಬಿ ಎಂಬ ಹೆಣ್ಣುಮಗಳು ಈ ಬಡ್ಡಿಮಗ ಪ್ರದೀಪನಿಂದ 1.50 ಲಕ್ಷ ಸಾಲ ಪಡೆದು, ತನ್ನ 2 ಎಕರೆ ಜಮೀನನ್ನು ಒತ್ತೆ ಇಟ್ಟಿದ್ದರು. ಈ ವರ್ಷ ಬಾನುಬಿ ಸಾಲದ ಅಸಲು ಮತ್ತು ಬಡ್ಡಿಯನ್ನು ಕೊಡಲು ಹೋದಾಗ ಹೌಹಾರಿ ಹೋದರು. ಏಕೆಂದರೆ ಏಳು ವರ್ಷದ ಹಿಂದೆ ಒತ್ತೆಪತ್ರ ಎಂದು ಬಾನುಬಿಗೆ ನಂಬಿಸಿ ಸಹಿ ಪಡೆದಿದ್ದ ಪತ್ರ ಖರೀದಿ ಕರಾರು ಪತ್ರವಾಗಿತ್ತು. 2006 ರವರೆಗೂ ಪಹಣಿಪತ್ರದಲ್ಲಿ ಬಾನುಬಿಯವರ ಹೊಲದ ಮೇಲೆ ಯಾವುದೇ ಹಕ್ಕು ಋಣಗಳಿರಲಿಲ್ಲ. 2007 ರ ವೇಳೆಗೆ ಪಹಣಿ ಪತ್ರದಲ್ಲಿ ಋಣಗಳು ಕಾಲಮ್ಮಿನಲ್ಲಿ ಪ್ರದೀಪಕುಮಾರನ ಖರೀದಿ ಕರಾರು ಪತ್ರದ ವಿಷಯ ಕಾಣಿಸಿಕೊಂಡಿತು. ಇದೆಲ್ಲ ಬಾನುಬಿಗೆ ಗೊತ್ತಾಗಿದ್ದು ಈಗ. ನಿಮ್ಮ ದುಡ್ಡು ತಗೊಂಡು, ನಮ್ಮ ಹೊಲ ನಮಗೆ ಬಿಟ್ಟುಕೊಡಿ ಎಂದರೆ, ಬಡ್ಡಿಕುಳ ಪ್ರದೀಪ 1.50 ಲಕ್ಷಕ್ಕೆ ಬಡ್ಡಿ ಸೇರಿಸಿ 18 ಲಕ್ಷ ಕೇಳುತ್ತಿದ್ದಾನೆ. ಈಗಾಗಲೇ ಈ ನೀಚ ಪ್ರದೀಪನ ಮೇಲೆ ಬೇರೊಂದು 420 ಕೇಸ್ ದಾಖಲಾಗಿದೆ. ಗಂಜ್‌ನಲ್ಲಿರುವ ತನ್ನ ಅಂಗಡಿಯಲ್ಲಿ ಕಾಟಾ (ತೂಕ)ದಲ್ಲಿ ಮೋಸ ಮಾಡುತ್ತಿದುದಕ್ಕಾಗಿ ಜನರಿಂದ ಹಲವಾರು ಸಲ ಒದೆ ತಿಂದಿದ್ದಾನೆ.

ಬಾನುಬಿ ಕುಟುಂಬ ತಹಶೀಲ್ದಾರ್ ಕಚೇರಿ ಎದುರು ಪ್ರತಿಭಟನೆ ನಡೆಸಿದರೂ ತಹಶೀಲ್ದಾರ್ ತೆಪ್ಪಗೆ ಕುಳಿತಿದ್ದಾರೆ.

ಪ್ರಗತಿಪರರು ಬಾನುಬಿ ಪರ ನಿಂತಿರುವುದರಿಂದ ಸದ್ಯದಲ್ಲೇ ಅವರು ತಹಶೀಲ್ದಾರ್ ಕಚೇರಿ ಎದುರು ನ್ಯಾಯಕ್ಕಾಗಿ ಧರಣಿ ಆರಂಭಿಸಲಿದ್ದಾರೆ.

● ಮಲ್ಲಿ

ಹುಬ್ಬಳ್ಳಿ: ವಂಚಕ ಕಾರ್ಪೋರೇಟರ್ ಚಿಂಚೋರಿ ಪೊಲೀಸರಿಗೆ ಸಿಗುತ್ತಿಲ್ಲವಂತೆ!

ಒಮ್ಮೆಯಲ್ಲ ಬರೋಬ್ಬರಿ ಹನ್ನೊಂದು ಸಲ ನ್ಯಾಯಾಲಯ ಜಾಮೀನುರಹಿತ ವಾರೆಂಟ್ ಹೊರಡಿಸಿದೆ; 'ಕಳ್ ನನ್ಮಗ ದೀಪಕ್ ಚಿಂಚೋರಿಯನ್ನು ಹಿಡಿದು ತನ್ನಿ' ಅಂತಾ. ಆದರೆ ಹುಬ್ಬಳ್ಳಿ-ಧಾರವಾಡದ ಪೊಲೀಸರಿಗೆ ಮಾತ್ರ ವಂಚಕ ಚಿಂಚೋರಿ ಸಿಗುತ್ತಿಲ್ಲ. ಊರ ತುಂಬಾ ಗೂಳಿಯಂತೆ ತಿರುಗಾಡುವ, ತನ್ನ ಎಪಿಎಂಸಿ ಅಂಗಡಿಗಳಲ್ಲಿ ನಿತ್ಯ ಕಾಣಿಸಿಕೊಳ್ಳುವ, ವಾರಕ್ಕೊಮ್ಮೆಯಾದರೂ ಪೇಪರುಗಳಲ್ಲಿ ಮುಖ ಕಾಣಿಸುವ ಚಿಂಚೋರಿ ಪೊಲೀಸರಿಗೆ ಸಿಗುತ್ತಿಲ್ಲ! ಅಂದರೆ ಪೊಲೀಸರಿಗೆ ಅದ್ಯಾವ ಪರಿ ತಿನ್ನಿಸ್ತಾ ಇರಬೇಕು ಚಿಂಚೋರಿ?

ಧಾರವಾಡದ ಮರಾಠಾ ಕಾಲೋನಿಯ ತನ್ನ ಮನೆಯಲ್ಲಿ ಆರಾಮಾಗಿರುವ ಈ ಪರಮ ಪಾಪಿ ದೀಪಕ್ ಚಿಂಚೋರಿ ವಾರ್ಡ್ ನಂ. 7 ರ ಪಾಲಿಕೆ ಸದಸ್ಯ. ಮಹಾನಗರ ಪಾಲಿಕೆಗೆ ಈತ ಬರುತ್ತಲೇ ಇರುತ್ತಾನೆ. ಆದರೆ ಪೊಲೀಸರಿಗೆ ಜಾಣ ಕುರುಡು.

ಹೇಮರಾಜ್ ತಿವಾರಿ ಎಂಬುವವರಿಗೆ 2 ಲಕ್ಷ ಪಂಗನಾಮ ಹಾಕಿದ ಕೇಸು ಎದುರಿಸುತ್ತಿದ್ದಾನೆ ಈ ಮಾಜಿ ಉಪಮೇಯರ್, ಹಾಲಿ ಕಾರ್ಪೋರೇಟರ್ ದೀಪಕ್ ಚಿಂಚೋರಿ. ಹೀಗೆ ಹಲವಾರು ಜನರಿಗೆ ವಂಚಿಸಿದ ಹಿನ್ನೆಲೆಯಿರುವ ಚಿಂಚೋರಿಗೆ ಹೇಮರಾಜ್ ಮಾತ್ರ ಬಿಸಿ ಮುಟ್ಟಿಸಲು ಯೋಚಿಸಿ ಕೋರ್ಟು ಮೆಟ್ಟಿಲೇರಿ ನ್ಯಾಯ ಕೇಳಿದ್ದಾರೆ. ಆದರೆ 5.10.2007 ರಿಂದ 26.9.2009 ರವರೆಗೆ ಹತ್ತು ಬಾರಿ ಜಾಮೀನುರಹಿತ ವಾರೆಂಟ್ ಹೊರಡಿಸಿದರೂ ಪೊಲೀಸರು ಇವನನ್ನು ಮುಟ್ಟಲಿಲ್ಲ; but ಇವನ ಪ್ರಸಾದವನ್ನು ಸ್ವೀಕರಿಸುವುದನ್ನು ಮಾತ್ರ ಬಿಟ್ಟಿಲ್ಲ. ಈಗ ಮತ್ತೆ ಅಖಂಡ ಹನ್ನೊಂದನೇ ಸಲ ದಗಾಕೋರ ಚಿಂಚೋರಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿ ಎಂದು ಜಾಮೀನುರಹಿತ ವಾರೆಂಟ್ ಹೊರಡಿಸಲಾಗಿದೆ. ಎಂದಿನಂತೆ ಚಿಂಚೋರಿ ನಾಪತ್ತೆಯಾಗಿ ತಿರುಗುತ್ತಿದ್ದಾನೆ.

ವಂಚಕನ ಸಂಚು

ಕಾಂಗ್ರೆಸ್ ಪಕ್ಷದ ಸದಸ್ಯನಾಗಿರುವ ಚಿಂಚೋರಿ ಮಹಾನ್ ಭ್ರಷ್ಟ. ಈ ಹಿಂದೆ 2000 ನೇ ಇಸವಿಯಲ್ಲಿ ಪಾಲಿಕೆ ಸದಸ್ಯನಾಗಿದ್ದಾಗ, ಆಗ ನಿವೃತ್ತಿಯ ಅಂಚಿನಲ್ಲಿದ್ದ ಪಾಲಿಕೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಹೇಮರಾಜ್ ತಿವಾರಿ ಎಂಬುವವರಿಂದ ಮೂರು ಲಕ್ಷ ರೂಪಾಯಿ ಕೈಗಡ ಸಾಲ ಇಸಿದುಕೊಂಡ ಚಿಂಚೋರಿ ನಂತರ ಹೇಮರಾಜರಿಗೆ ಕೈಕೊಡುತ್ತ ಬಂದ. 2000 ರಲ್ಲೇ ನಿವೃತ್ತಿ ಹೊಂದಿದ ಹೇಮರಾಜರಿಗೆ ಹಣದ ಅಗತ್ಯವಿತ್ತು. ತನ್ನ ಹಣ ವಾಪಾಸ್ ಕೊಡಿ ಎಂದು ಕೇಳಲಾರಂಭಿಸಿದ ಹೇಮರಾಜ್‌ಗೆ 'ನಾಳೆ ಬನ್ನಿ, ನಾಡಿದ್ದು ಬನ್ನಿ' ಅಂತಾ ಚಿಂಚೋರಿ ಸಾಗಹಾಕತೊಡಗಿದ. ನಂತರದಲ್ಲಿ ಹಣ ಕೇಳಿದರೆ, ತನ್ನ ಮೂಲಗುಣವಾದ ರೌಡಿಸಂ ಪ್ರದರ್ಶಿಸತೊಡಗಿದ. 'ಅಲ್ಲೋ ಇಂಜಿನಿಯರ್ ಸಾಹೇಬಾ, ನೀ ಏನ್ ಕಷ್ಟಪಟ್ಟು ದುಡ್ದ ರೊಕ್ಕ ಅಲ್ಲ ಬಿಡು.....' ಎಂದು ಹೇಮರಾಜರನ್ನೇ ಬ್ಲ್ಯಾಕ್‌ಮೇಲ್ ಮಾಡಲು ನೋಡಿದ. ತಿರುಗಿಬಿದ್ದ ಹೇಮರಾಜರು ಹಣ ವಾಪಸ್ ಮಾಡದಿದ್ದರೆ ಈ ವಿಷಯವನ್ನು ಬಹಿರಂಗ ಮಾಡಿ, ಕ್ರಿಮಿನಲ್ ಕೇಸ್ ಹಾಕುವುದಾಗಿ ಹೇಳಿದಾಗ ಚಿಂಚೋರಿ ಮತ್ತೊಂದು ಕುತಂತ್ರವನ್ನು ಹೆಣೆದ. ಬೀಸೋ ದೊಣ್ಣೆ ತಪ್ಪಿದ್ರೆ ಸಾಕು ಅಂತಾ ತಲಾ ಒಂದು ಲಕ್ಷ ರೂಪಾಯಿಗಳ ಎರಡು ಚೆಕ್‌ಗಳನ್ನು ನೀಡಿದ. ಪಾಸ್‌ಬುಕ್ ತೋರಿಸಿ ಬ್ಯಾಂಕಿನಲ್ಲಿ ಹಣ ಇರುವುದನ್ನು ಖಾತ್ರಿ ಮಾಡಿದ. ಆದರೆ ಹೇಮರಾಜರು ಬ್ಯಾಂಕು ತಲುಪುವ ಮೊದಲೇ ಚಿಂಚೋರಿ ಹಣ ಡ್ರಾ ಮಾಡಿದ್ದ. ರಪ್ಪಂತ ಚೆಕ್‌ಗಳು ಬೌನ್ಸ್ ಆದವು.

ಆಗ ಹೇಮರಾಜ್ ಹುಬ್ಬಳ್ಳಿಯ ಜೆಎಂಎಫ್‌ಸಿ ಕೋರ್ಟಿನಲ್ಲಿ ಕ್ರಿಮಿನಲ್ ಕೇಸ್ (ಕೇಸ್ ನಂ. 881/2003) ದಾಖಲಿಸಿದರು. ಕಳ್ಳ ಖದೀಮ ಚಿಂಚೋರಿ ಮತ್ತೊಂದು ಪ್ಲಾನ್ ಹಾಕಿದ. ಹೇಮರಾಜರಿಗೆ ಒಂದು ಲಕ್ಷ ಕೊಟ್ಟು, ಜೊತೆಗೆ ಇನ್ನೊಂದು ಲಕ್ಷದ ಚೆಕ್ (ವೈಶ್ಯ ಬ್ಯಾಂಕ್, ನಂ. 049524) ಕೈಗಿತ್ತು ಕೇಸ್ ವಾಪಸ್ ಪಡೆಸುವಲ್ಲಿ ಯಶಸ್ವಿಯಾದ.

ಮತ್ತೆ ಬೌನ್ಸ್!


ದೀಪಕ್

ಹೋಗಲಿ, ಸದ್ಯಕ್ಕೆ ಒಂದು ಲಕ್ಷ ಬಂತು, ಚೆಕ್ ಹಾಕಿದರೆ ಇನ್ನೊಂದು ಲಕ್ಷ ಬರುತ್ತೆ ಎಂದು ಸಮಾಧಾನಪಟ್ಟುಕೊಂಡ ಹೇಮರಾಜ್ ಬ್ಯಾಂಕ್‌ಗೆ ಚೆಕ್ ಹಾಕಿದರು. ಮತ್ತೊಮ್ಮೆ ಚೆಕ್ ಬೌನ್ಸ್ ಆದಾಗ ಚಿಂಚೋರಿಯ ಕಂತ್ರಿಬುದ್ಧಿ ಇನ್ನೊಮ್ಮೆ ಬಯಲಾಯಿತು. ಮತ್ತೆ ಅದೇ ಜೆಎಮ್‌ಎಫ್‌ಸಿ ಕೋರ್ಟಿನಲ್ಲಿ ಮತ್ತೊಂದು ಕ್ರಿಮಿನಲ್ ಕೇಸು (ನಂ. 806/2007) ಜಡಿದರು ಹೇಮರಾಜ್. 2007 ರಿಂದ ಕೋರ್ಟಿಗೆ ಹಾಜರಾಗದೇ ತಪ್ಪಿಸಿಕೊಳ್ಳತೊಡಗಿದ ಚಿಂಚೋರಿಯನ್ನು ಬಂಧಿಸಿ ಹಾಜರುಪಡಿಸುವಂತೆ ನ್ಯಾಯಾಲಯ ಹನ್ನೊಂದು ಸಲ ವಾರೆಂಟ್ ಜಾರಿ ಮಾಡಿತು. ಆದರೆ ಹುಬ್ಬಳ್ಳಿ-ಧಾರವಾಡದ ಕೆಲ ಖಾಕಿಗಳು ಚಿಂಚೋರಿಯ ಚಮಚಾಗಳಂತೆ ವರ್ತಿಸಿದ್ದರಿಂದ ಇಲ್ಲಿವರೆಗೂ ಚಿಂಚೋರಿ ಕೋರ್ಟಿನ ಮುಂದೆ ಬಂದಿಲ್ಲ. ಒಂದೇ ಒಂದು ಸಲ ಧಾರವಾಡದ ಎಸಿಪಿ ಆಗಿದ್ದ ಬಡಿಗೇರ್ ಚಿಂಚೋರಿಯನ್ನು ಎಳೆದು ತಂದು ಹಾಕಿದ್ದು ಬಿಟ್ಟರೆ ಉಳಿದಂತೆ ಚಿಂಚೋರಿ ಸೇಫಾಗೇ ಇದ್ದಾನೆ.

ಹೇಮರಾಜರಿಗೆ ವಂಚನೆ ಮಾಡಿದಂತೆ ನೂರಾರು ಜನರನ್ನು ವಂಚಿಸಿರುವ ದೀಪಕ್ ಚಿಂಚೋರಿಯನ್ನು ಹಿಡಿದು ತರುವ ಜವಾಬ್ದಾರಿ ಪೊಲೀಸ್ ಕಮೀಷನರ್ ಶಿರಾದಕರ್ ಮೇಲಿದೆ.

● ಹುಬ್ಬಳ್ಳಿಯಾಂವ

ವೃತ್ತಿಯಲ್ಲಿ ಭಾರಿ ವ್ಯಾಪಾರಿಯಾಗಿರುವ ದೀಪಕ್ ಚಿಂಚೋರಿ ಟೋಪಿ ಹಾಕುವುದರಲ್ಲಿ, ಪಾಲಿಕೆ ದುಡ್ಡು ಗುಳುಂ ಮಾಡುವುದರಲ್ಲಿ ಎತ್ತಿದ ಕೈ. ಈ ಕಾರಣಕ್ಕಾಗಿ ಯಾರಾದರೂ ಇವನ ಮೇಲೆ ಕೈ ಎತ್ತಿದರೆ ಹೊಡೆತ ತಿನ್ನಲೂ ಸೈ. ಹಿಂದೆ ಎಪಿಎಂಸಿ ಅಧ್ಯಕ್ಷನಾಗಿದ್ದಾಗ ತನ್ನ ಹೆಸರಲ್ಲಿ ಎರಡು ಎಪಿಎಂಸಿ ಸ್ಟಾಲ್ ಮಾಡಿಕೊಂಡ. ಆಗ ಸಚಿವರಾಗಿದ್ದ ಎಸ್.ಆರ್. ಮೋರೆಯ ಬಲಗೈ ಬಂಟನಂತೆ ಓಡಾಡಿ ಮಹಾನಗರ ಪಾಲಿಕೆ ಹೊಕ್ಕು ಮೇಯ್ದ. ನಂತರ ಮೋರೆಯವರನ್ನೇ ದೂರ ತಳ್ಳಿದ. ಗೆದ್ದೆತ್ತಿನ ಬಾಲ ಹಿಡಿಯುವುದು ಚಿಂಚೋರಿಯ ಹಾಬಿ, ಆ ಮೂಲಕವೇ ಲಾಬಿ ಮಾಡುವುದು ಈತನ ಪದ್ಧತಿ. ಹಿಂದೊಮ್ಮೆ ರಾಷ್ಟ್ರಮಟ್ಟದಲ್ಲಿ ತಲೆ ಎತ್ತಿದ್ದ ತಿವಾರಿ ಕಾಂಗ್ರೆಸ್‌ಗೂ ಇವನು ಜಿಗಿದು ಪಾಲಿಕೆ ಸದಸ್ಯನಾಗಿದ್ದ. ತಿವಾರಿ ಕಾಂಗ್ರೆಸ್ ಅಂತಾ ಕೂತರೆ ತಾನು ಮೋರಿ ಪಾಲಾಗುವುದು ಖಚಿತ ಎಂದು ಗೊತ್ತಾದೊಡನೆ ಮತ್ತೆ ಮೋರೆಯ ಪಾದ ಹಿಡಿದ. ಕಳೆದ ವಿಧಾನಸಭೆ ಚುನಾವಣೆ ವೇಳೆ ಮೋರೆಗೆ ಟಿಕೆಟು ಸಿಗದೇ ಜಬ್ಬಾರ್‌ಖಾನ್ ಹೊನ್ನಳ್ಳಿಗೆ ಸಿಕ್ಕಿದಾಗ, ಮತ್ತೆ 'ಮೋರಿ' ಹಾರಿದ ಚಿಂಚೋರಿ ಹೊನ್ನಳ್ಳಿಯನ್ನು ತಬ್ಬಿದ. ಇದೇ ವೇಳೆ ಧಾರವಾಡ ಗ್ರಾಮೀಣ ಕ್ಷೇತ್ರದಿಂದ ಸ್ಪರ್ಧಿಸಿದ್ದ ವಿನಯ್ ಕುಲಕರ್ಣಿ ವಿರುದ್ಧ ಪಕ್ಷ ವಿರೋಧಿ ಚಟುವಟಿಕೆ ನಡೆಸಿ ವಿನಯ್ ಗ್ಯಾಂಗಿನಿಂದ ಭರ್ತಿ ಒದೆ ತಿಂದಿದ್ದ. ಧಾರವಾಡ ಜಿಲ್ಲೆಯಲ್ಲಿ ಕಾಂಗ್ರೆಸ್ ನೆಲಸಮವಾಗಿ ಕಲಘಟಗಿ ಒಂದರಲ್ಲಿ ಮಾತ್ರ ಸಂತೋಷ್ ಲಾಡ್ ಗೆದ್ದ. ಆಗಿನಿಂದ ಲಾಡ್ ಹಿಂದಿಂದೆ ಸುತ್ತುತ್ತಿರುವ ಚಿಂಚೋರಿ ಮುಂದಿನ ಸಲ ಧಾರವಾಡ ಶಹರ ಕ್ಷೇತ್ರದಿಂದ ನಾನೇ ಕ್ಯಾಂಡಿಡೇಟು ಅಂತಾ ಹಾಡುತ್ತಿದ್ದಾನೆ. ಈ ಕಾರಣಕ್ಕಾಗಿ ಪ್ರಚಾರಕ್ಕಾಗಿ ವಾರಕ್ಕೆರಡು ಸಲ ಪೇಪರುಗಳಲ್ಲಿ ಜಾಹೀರಾತು ಹಾಕಿಸಿಕೊಳ್ಳುತ್ತಾನೆ. ಆದರೂ ಧಾರವಾಡ ಪೊಲೀಸರಿಗೆ ಇವನು ಸಿಗುವುದಿಲ್ಲ! ●

ಗುಂಪು ಹಲ್ಲೆ ಮತ್ತು ಲೋಪ

ಪತ್ರಿಕೆಯ ಅಕ್ಟೋಬರ್ 28ರ ಸಂಚಿಕೆಯಲ್ಲಿ ಇತ್ತೀಚೆಗೆ ಮಂಗಳೂರಿನಲ್ಲಿ ನಡೆದ ಗುಂಪು ಹಲ್ಲೆ ಕುರಿತು ಪ್ರಕಟವಾಗಿರುವ 'ನಮ್ಮ ಹುಡುಗಿ-ಅವರ ಹುಡುಗ' ಲೇಖನದಲ್ಲಿ ಎರಡು ಲೋಪಗಳಿವೆ. ಲೇಖನ, ಮಂಗಳೂರು ಬಸ್ ಸ್ಟ್ಯಾಂಡ್ ಹಾಗೂ [illegible] ಕಚೇರಿ ಬಳಿ ಇರುವ ಸ್ವಾಗತ್ ಹೋಟೆಲ್‌ನಲ್ಲಿ ಮುಸ್ಲಿಂ ಯುವತಿ ಹುಡುಗನ ಜೊತೆ ಊಟ ಮಾಡುತ್ತಿದ್ದಳು ಎಂಬ ಕಾರಣಕ್ಕೆ ಮುಸ್ಲಿಂ ಯುವಕರ ಗುಂಪೊಂದು ಅವರ ಮೇಲೆ ನಡೆಸಿದ ಹಲ್ಲೆಯ ಕುರಿತಾಗಿದೆ. ಆದರೆ ಆ ಲೇಖನದ ಜೊತೆ ಪ್ರಕಟವಾದ ಫೋಟೋ ಸ್ವಾಗತ್ ಹೋಟೆಲ್‌ನಿಂದ ತುಂಬಾ ದೂರದಲ್ಲಿರುವ ನಗರ ಕಾರ್ಪೋರೇಷನ್ ಕಚೇರಿಯದು.

ಲೇಖನದ ಎರಡನೆಯ ಲೋಪ ಹೆಚ್ಚು ಗಂಭೀರ ಸ್ವರೂಪದ್ದಾಗಿದ್ದು ಅದಕ್ಕೆ ನಾನೇ ಹೊಣೆಗಾರನಾಗಿದ್ದೇನೆ. ನಾನು ನನ್ನ ಲೇಖನದ ಕೊನೆಯಲ್ಲಿ "ಈ ಗುಂಪು ಹಲ್ಲೆಯನ್ನು ನಡೆಸಿದ್ದು ಪಾಪ್ಯುಲರ್ ಫ್ರಂಟ್‌ನ ಕಾರ್ಯಕರ್ತರು ಎಂದು ಕೆಲವು ಪತ್ರಿಕೆಗಳು ವರದಿ ಮಾಡಿವೆ" ಎಂದು ಬರೆದಿದ್ದೇನೆ. ಆದರೆ ಹಾಗೆ ವರದಿ ಮಾಡಿರುವುದು ವಾಸ್ತವವಾಗಿ ಎರಡೇ ಪತ್ರಿಕೆಗಳು- 'ದಿ ಹಿಂದು' ಮತ್ತು 'ಕರಾವಳಿ ಅಲೆ'. ಎರಡೂ ಪತ್ರಿಕೆಗಳ ವರದಿಗಾರರು, ತಾವು ಈ ಗುಂಪು ಹಲ್ಲೆ ಕುರಿತು ಮಾಹಿತಿಯನ್ನು ಪಾಪ್ಯುಲರ್ ಫ್ರಂಟ್ ಮಂಗಳೂರು ಘಟಕದ ಕಾರ್ಯದರ್ಶಿ ಅತಾವುಲ್ಲ ಅವರಿಂದ ಪಡೆದಿರುವುದಾಗಿ ತಮ್ಮ ವರದಿಗಳಲ್ಲಿ ಕಾಣಿಸಿದ್ದರು. ಅನಂತರ ಪಾಪ್ಯುಲರ್ ಫ್ರಂಟ್‌ನ ಪದಾಧಿಕಾರಿಗಳು ಪತ್ರಿಕಾಗೋಷ್ಠಿ ಕರೆದು ಈ ಘಟನೆಗೂ ತಮಗೂ ಸಂಬಂಧವಿಲ್ಲವೆಂದೂ, ಅತಾವುಲ್ಲ 'ದಿ ಹಿಂದು' ಮತ್ತು 'ಕರಾವಳಿ ಅಲೆ'ಯ ವರದಿಗಾರರಿಗೆ ಹೇಳಿದರು ಎನ್ನಲಾದ ಯಾವ ಸಂಗತಿಯನ್ನೂ ಅತಾವುಲ್ಲ ಹೇಳಿಯೇ ಇಲ್ಲ ಎಂದೂ ತಿಳಿಸಿದರು. ಆದರೆ ಈ ಹಿಂದು ಪತ್ರಿಕೆಯ ವರದಿಗಾ- [illegible] ಮತ್ತು 'ಕರಾವಳಿ ಅಲೆ'ಯ ವರದಿಗಾರ [illegible], ಅತಾವುಲ್ಲ ಸ್ವಾಗತ್ ಹೋಟೆಲ್‌ನ ಘಟನೆಯ ಬಗ್ಗೆ ತಮಗೆ ಹೇಳಿದ ಮಾತುಗಳು ತಮ್ಮ ಮೊಬೈಲ್ ಫೋನ್‌ಗಳಲ್ಲಿ ದಾಖಲಾಗಿದ್ದು ತಾವು ಅದರ ಖಚಿತ ಪಾಠವನ್ನು ಮೊಬೈಲ್ ಕಂಪೆನಿಯಿಂದ ಪಡೆದು ಹಾಜರುಪಡಿಸಲು ಸಿದ್ಧರಿದ್ದೇವೆ ಎಂದೂ ಸ್ಪಷ್ಟಪಡಿಸಿದ್ದಾರೆ. 'ಕರಾವಳಿ ಅಲೆ' ಸ್ಪಷ್ಟೀಕರಣವನ್ನೂ ಸಹ ಪ್ರಕಟಿಸಿದೆ. ಮಂಗಳೂರಿನ ಸ್ವಾಗತ್ ಹೋಟೆಲ್‌ನ ಗುಂಪು ಹಲ್ಲೆಗೆ ಸಂಬಂಧಿಸಿದ ಈ ಮುಖ್ಯ ಸಂಗತಿಗಳು ನನ್ನ ಲೇಖನದಲ್ಲಿ ನಮೂದಿತವಾಗಿಲ್ಲ. ಈ ಲೋಪಕ್ಕೆ ವಿಷಾದಿಸುತ್ತೇನೆ.

● ಜಿ.ರಾಜಶೇಖರ



'ನಮ್ಮ ಹುಡುಗಿ, ಅವರ ಹುಡುಗ'

-ಭಿನ್ನ ನಿರೂಪಣೆ

ಪತ್ರಿಕೆಯ ಅಕ್ಟೋಬರ್ 28, 2009ರ ಸಂಚಿಕೆಯಲ್ಲಿ ನನ್ನ ಹಿರಿಯ ಮಿತ್ರರೂ, ಸಂಘಪರಿವಾರದ ಕೋಮುವಾದದ ವಿರುದ್ಧ ಹೋರಾಟದಲ್ಲಿ ಮಾರ್ಗದರ್ಶಕ ಸಂಗಾತಿಯೂ ಆದ ಜಿ.ರಾಜಶೇಖರರ 'ನಮ್ಮ ಹುಡುಗಿ ಅವರ ಹುಡುಗ' ಲೇಖನ ಪ್ರಕಟವಾಗಿದೆ. ರಾಜಶೇಖರ್ ಬರಹಗಾರರಾಗಿ ಮತ್ತು ಹೋರಾಟಗಾರರಾಗಿ ಜಾರ್ಜ್ ಆರ್ವೆಲ್ ಮಾದರಿಗೆ ಸೇರಿದವರು. ಅಧಿಕಾರದ ವಿರುದ್ಧ ಸಾರ್ವಜನಿಕ ಹೋರಾಟಗಳಲ್ಲಿ ಪ್ರಾಮಾಣಿಕವಾಗಿ ಭಾಗವಹಿಸಿದಾಗಲೂ ಸಮೂಹ [illegible]ಯ ಕಾರಣವಾಗಿ ನಿಷ್ಠೂರ ವಾಸ್ತವಗಳನ್ನು ಅಂಥಾ ಹೋರಾಟಗಳು ಮುಚ್ಚಿಡುತ್ತವೆ ಎಂದು ಕಂಡಾಗ [illegible] ತುಂಡು ಮಾಡಿದ ಹಾಗೆ ನಿಷ್ಠೂರ ವಾಸ್ತವವನ್ನು ಮೊನಚು ಗದ್ಯದಲ್ಲಿ ವಿವರಿಸಿ, ಅಂಥ ಪೊಳ್ಳು 'ಜನಪರತೆ'ಯ ಬಲೂನಿಗೆ ಸೂಜಿ ಚುಚ್ಚಬಲ್ಲವರು. ಆದರೆ, ತೀರ 'ಆರ್ವೆಲನ ಥರ'ವಾಗಿ ಸಾರ್ವಜನಿಕ ಹೋರಾಟಗಳ ನಿತ್ಯನ್ಯಾಯ ಬೇಡುವ ('ಬರ್ಟ್ರೆಂಡ್ ರಸೆಲ್ ಥರ'ದ) ಸಾಮಾನ್ಯ ಹೋರಾಟಗಳನ್ನೂ ಕಡೆಗಣಿಸುವವರಲ್ಲ-ಈ ವಿಷಯದಲ್ಲಿ ಲಂಕೇಶ್ ಹಾಗೂ ರಾಜಶೇಖರ್ ಒಂದು ದರ್ಶನೀಯ ವಾಗ್ವಾದವನ್ನು ಮಾಡಿದ್ದಿದೆ. ಆದರೆ, ಮಮ್ತಾಜ್ ಅಲಿ ಖಾನರ 'ಚೆಜ್ ಯಾತ್ರೆ'ಯ ಓಲೈಸುವಿಕೆಯಿಂದ ಹಿಡಿದು ಕೊಟ್ಟೆಪಾಡಿಗಾಗಿ 'ದನ ಸಾಗಾಟ' ಮಾಡುವ ಮುಸ್ಲಿಮ್ ಸಂಸಾರಸ್ಥರ ಮೇಲೆ ನಡೆಯುತ್ತಿರುವ ವ್ಯವಸ್ಥಿತ ದೌರ್ಜನ್ಯದವರೆಗಿನ ವಾಸ್ತವಿಕ ಚಿತ್ರಗಳನ್ನು 'ಮಾಂಟಾಜ್' (ಒಂದು ಚಿತ್ರದ ಪಕ್ಕ ಮತ್ತೊಂದು ಚಿತ್ರವನ್ನು ಸೇರಿಸುತ್ತ ಆ ಚಿತ್ರಸರಮಾಲೆಗಳ ಮುಖಾಂತರ ವಾಸ್ತವದ ಅರ್ಥ ಮೂಡಿಸುವುದು) ಮಾಡಿದರೆ, ಕರ್ನಾಟಕದ ಕರಾವಳಿಯಲ್ಲಿ ನಡೆಯುತ್ತಿರುವ ಹಿಂಸಾಚಾರದ ಸ್ವರೂಪ ಅಂಥಾ ದರ್ಶನೀಯ ವಾಗ್ವಾದಗಳನ್ನೂ ಮಸುಕು ಮಾಡುತ್ತಿರುವ ಸಂಕಟಮಯವಾದ ಚಿತ್ರ ದೊರಕುತ್ತದೆ. ಇಂತಹ ಸಂಕಟದಲ್ಲಿಯೇ ರಾಜಶೇಖರ್ ದಿ.6.10.2009 ರಂದು ಮಂಗಳೂರಿನ ಸ್ವಾಗತ್ ಹೋಟೆಲಿನಲ್ಲಿ, ಯಾವ ಗುಂಪಿನ ಬೆಂಬಲವೂ ಇಲ್ಲದೆ, ತಮಗೆ ತಾವೇ ಒಟ್ಟಿಗೆ ಇದ್ದ ಹಿಂದು ಯುವಕ-ಮುಸ್ಲಿಮ್ ಯುವತಿಯರ ಮೇಲೆ '40 ಜನ ಮುಸ್ಲಿಮ್ ಯುವಕರ ಗುಂಪು' ಹಲ್ಲೆ ಮಾಡಿದ ಘಟನೆಯನ್ನು ವಿವರಿಸಿ, ಖಂಡಿಸುವ ಪ್ರಸ್ತುತ ಲೇಖನವನ್ನು ಬರೆದಿದ್ದಾರೆ. ಆದರೆ, ಅಚ್ಚರಿಹುಟ್ಟುವಂತೆ? ರಾಜಶೇಖರ್ ಈ '40 ಜನ ಮುಸ್ಲಿಮ್ ಯುವಕರ' ಗುಂಪಿನ ಸಂಘಟನಾ ಚಹರೆಯನ್ನು ಅಸ್ಪಷ್ಟವಾಗಿಟ್ಟು, ಬರಹದ ಕೊನೆಯ ಟಿಪ್ಪಣಿಯಲ್ಲಿ 'ಈ ಗುಂಪು ಹಲ್ಲೆ ನಡೆಸಿದ್ದು ಪಾಪ್ಯುಲರ್ ಫ್ರಂಟ್‌ನ ಕಾರ್ಯಕರ್ತರು ಎಂದು ಕೆಲವು ಪತ್ರಿಕೆಗಳು ವರದಿ ಮಾಡಿವೆ. ಆದರೆ ಸಂಘಟನೆಯ ಜಿಲ್ಲಾಧ್ಯಕ್ಷ ಅನ್ವರ್ ಸಾದತ್ ಅದನ್ನು ನಿರಾಕರಿಸಿದ್ದಾರೆ. ಆ ಘಟನೆಯನ್ನು ಖಂಡಿಸುವುದರ ಜೊತೆಗೆ ಅವರು ಪಾಪ್ಯುಲರ್ ಫ್ರಂಟ್‌ಗೆ ಅಂತಹ ಯಾವುದೇ ಅಜೆಂಡಾ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ' ಎಂಬ ಸಮಜಾಯಿಷಿ ನೀಡಿದ್ದಾರೆ. ಯಾವ ಸಂಕಟದಲ್ಲಿ ರಾಜಶೇಖರ್ ಈ ಲೇಖನವನ್ನು ಬರೆದಿದ್ದಾರೋ, ಅದೇ ಸಂಕಟದಲ್ಲಿ ನಾನು, '40 ಜನ ಮುಸ್ಲಿಮ್ ಯುವಕರ' ಗುಂಪಿನ ಸಂಘಟನಾ ಚಹರೆಯನ್ನು ಅಸ್ಪಷ್ಟವಾಗಿಟ್ಟಿರುವ ಅವರ ಲೇಖನದ ನಿರೂಪಣಾ ವೈಖರಿಗೆ ಪ್ರತಿಕ್ರಿಯಿಸುತ್ತಿದ್ದೇನೆ. ಮಂಗಳೂರಿನಲ್ಲಿ ನಡೆದ ಘಟನೆಯ ಭಿನ್ನ ನಿರೂಪಣೆಯ ಮೂಲಕ ನನ್ನ ಪ್ರತಿಕ್ರಿಯೆಯನ್ನು ಕೊಡಲು ಇಚ್ಛಿಸುತ್ತೇನೆ.


1. ದಿ.6.10.2009ರಂದು ಮಂಗಳೂರಿನ ಸ್ವಾಗತ್ ಹೋಟೆಲಿನ ಬಳಿ ನಡೆದ ಘಟನೆಯನ್ನು ರಾಜಶೇಖರ್ ಚಿತ್ರವತ್ತಾಗಿ ವಿವರಿಸಿದ್ದಾರೆ. ಮಂಗಳೂರಿನಂತಹ ನಗರದಲ್ಲಿ, ಘಟನೆ ನಡೆದಂತಹ ಗಿಜಿಗುಡುವ ಪ್ರದೇಶದಲ್ಲಿ, ಹುಡುಗ ಮತ್ತು ಹುಡುಗಿಯರ ಮತೀಯ ಗುರುತನ್ನು ಕಂಡುಕೊಳ್ಳುವುದು, ಪರಸ್ಪರ ಪರಿಚಯವಿಲ್ಲದ 40 ಜನ ಯುವಕರ ಗುಂಪು ಒಟ್ಟಾಗುವುದು, ಆ ಗುಂಪಿಗೆ ಭಿನ್ನ ಮತಗಳಿಗೆ ಸೇರಿದ ಹುಡುಗ-ಹುಡುಗಿಯರ ಸ್ನೇಹ 'ಅಪರಾಧ'ವೆನ್ನಿಸುವುದು, ಮತ್ತು ಗುಂಪು ಸ್ಥಳದಲ್ಲಿಯೇ 'ವಿಚಾರಣೆ' ನಡೆಸಿ 'ಶಿಕ್ಷೆ ನೀಡಿ' ಪರಾರಿಯಾಗುವುದು-ಇವು ಯಾವುದೂ ಕ್ಷಣಮಾತ್ರದ ಸಮಯ ಸ್ಫೂರ್ತಿಯಲ್ಲಿ ನಡೆಯುವಂತಹವಲ್ಲ. ಇಂಥ ಕಾರ್ಯಾಚರಣೆಗೆ ಸಂಘಟನಾತ್ಮಕ ಹಂದರ ಹಾಗೂ ವೈಚಾರಿಕ ಕುಮ್ಮಕ್ಕು ಇದ್ದೇ ಇರುತ್ತದೆ. ಪ್ರಸ್ತುತ ಘಟನೆಗೂ ಅಂತಹ ಸ್ವರೂಪವಿದೆ.
2. ಘಟನೆ ನಡೆದ ನಂತರದ ಕೆಲವೇ ನಿಮಿಷಗಳಲ್ಲಿ ಮಂಗಳೂರಿನ 'ದಿ ಹಿಂದು' ಪತ್ರಿಕೆ ಹಾಗೂ ಸಂಜೆ ಪತ್ರಿಕೆ 'ಕರಾವಳಿ ಅಲೆ'ಯ ವರದಿಗಾರರು ಸ್ಥಳಕ್ಕೆ ಹೋಗಿ ಪ್ರತ್ಯಕ್ಷದರ್ಶಿಗಳಿಂದ ವಿವರ ಸಂಗ್ರಹಿಸಿದ್ದಾರೆ. 2008ರ ಜುಲೈ 18 ಹಾಗು ಆಗಸ್ಟ್ 27ರಂದು ಇದೇ ರೀತಿಯ 'ನೈತಿಕ ಪೋಲಿಸರ ದಾಳಿ'ಗಳು ಮಂಗಳೂರಿನ ಆಸುಪಾಸಿನಲ್ಲಿ ನಡೆದಿದ್ದು, ಆ ದಾಳಿಗಳನ್ನು ತಮ್ಮ ಕಾರ್ಯಕರ್ತರೇ ನಡೆಸಿದ್ದಾರೆಂದು ಪಿ.ಎಫ್.ಐ. ಈ ವರದಿಗಾರರಿಗೆ ತಿಳಿಸಿದ್ದರು. ಹಾಗಾಗಿ, ಪ್ರಸ್ತುತ ಘಟನೆಯಲ್ಲಿ ಸಂಘಟನೆಯ ಪಾತ್ರವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಇಬ್ಬರೂ ವರದಿಗಾರರು ಪ್ರತ್ಯೇಕವಾಗಿ, ಪಿ.ಎಫ್.ಐ.ನ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಾರ್ಯದರ್ಶಿ ಅತಾವುಲ್ಲ ಅವರನ್ನು ಸಂಪರ್ಕಿಸಿದಾಗ ಅವರು ಇದು ತಮ್ಮ ಕಾರ್ಯಕರ್ತರ ಕೃತ್ಯವೆಂಬುದನ್ನು ಒಪ್ಪಿಕೊಂಡು, ಕಾರ್ಯಾಚರಣೆಗೆ ಕಾರಣಗಳನ್ನೂ ವಿವರಿಸಿದ್ದಾರೆ (ವಿವರಗಳಿಗೆ ನೋಡಿ: 'ದಿ ಹಿಂದು' ಮಂಗಳೂರು ಆವೃತ್ತಿ, ಬುಧವಾರ, ಅಕ್ಟೋಬರ್ 7,2009, ಪು.5). ಆದರೆ, ದಿ.8.10.2009ರಂದು ಪಿ.ಎಫ್.ಐ.ನ ದ.ಕ. ಘಟಕದ ಅಧ್ಯಕ್ಷರಾದ ಅನ್ವರ್ ಸಾದತ್ ಪತ್ರಿಕಾಗೋಷ್ಠಿ ಕರೆದು, ಸ್ವಾಗತ್ ಹೋಟೆಲಿನ ಬಳಿ ನಡೆದ ಘಟನೆಗೆ ತಮ್ಮ ಸಂಘಟನೆ ಹೊಣೆಯಲ್ಲವೆಂದು ಹೇಳಿದಾಗ, 'ದಿ ಹಿಂದು' ಹಾಗು 'ಕರಾವಳಿ ಅಲೆ'ಯ ಪ್ರತಿನಿಧಿಗಳು ಅತಾವುಲ್ಲರು ನೀಡಿದ ಹೇಳಿಕೆಯನ್ನು ಗಮನಕ್ಕೆ ತಂದು, ಅವರನ್ನು ಪತ್ರಿಕಾಗೋಷ್ಠಿಗೆ ಕರೆಸಬೇಕೆಂದು ಕೇಳಿಕೊಂಡರು. ಆ ನಂತರ ಗೋಷ್ಠಿಗೆ ಬಂದ ಅತಾವುಲ್ಲ, ತಾವು 'ದಿ ಹಿಂದು' ಪತ್ರಿಕೆಯ ವರದಿಗಾರರ ಜೊತೆ ಮಾತನಾಡಿಲ್ಲವೆಂದು, 'ಕರಾವಳಿ ಅಲೆ'ಯ ವರದಿಗಾರರ ಜೊತೆ ಮಾತನಾಡಿದ್ದನ್ನು ಎರಡೂ ಪತ್ರಿಕೆಗಳೂ ತಿರುಚಿ 'ಸುಳ್ಳು ವರದಿ' ಬರೆದಿದ್ದಾವೆಂದೂ ವಾದಿಸಿದರು. ಇಂತಹ ಘಟನೆಗಳ ಸಂದರ್ಭದಲ್ಲಿ ಸಂಘಟನೆಗಳು ಮೊದಲು ತಮ್ಮ ಪಾತ್ರದ ಬಗ್ಗೆ ಕೊಚ್ಚಿಕೊಂಡು, ನಂತರ 'ಸುಳ್ಳು ವರದಿ' ಎಂದು ನಿರಾಕರಿಸುವುದು ಕರಾವಳಿಯಲ್ಲಿ ಹೊಸತೇನೂ ಅಲ್ಲ. 'ಅಮ್ನೇಶಿಯ ಪಬ್ ದಾಳಿ' ಸಂಬಂಧ ಶ್ರೀರಾಮಸೇನೆ, 'ಚರ್ಚ್ ದಾಳಿ' ಸಂಬಂಧ ಭಜರಂಗ ದಳ, ಕಾಸರಗೋಡಿನ ಸಿ.ಪಿ.ಎಂ. ಶಾಸಕರ ಮಗಳು ಹಾಗು ಆಕೆಯ ಸ್ನೇಹಿತನ ಮೇಲೆ ನಡೆದ ಹಲ್ಲೆಯ ಸಂದರ್ಭದಲ್ಲಿ ಶ್ರೀರಾಮಸೇನೆ ಮತ್ತು ಭಜರಂಗ ದಳಗಳು ಇದೇ ವರಸೆಯನ್ನು ಪ್ರದರ್ಶಿಸಿದ್ದವು. ಕೊನೆಯ ಪ್ರಕರಣದಲ್ಲಂತೂ, ಹಲ್ಲೆ ನಡೆಸಿದ್ದೇವೆಂದು ಕೊಚ್ಚಿಕೊಂಡಿದ್ದ ಸಂಘಟನೆಗಳ ಪರವಾಗಿ ವಾದಿಸುತ್ತಿದ್ದ ವಕೀಲ ಪಿ.ಪಿ.ಹೆಗ್ಡೆ ಕೃತ್ಯದ ಜವಾಬ್ದಾರಿಯನ್ನು ಸಿ.ಪಿ.ಎಂ. ಪಕ್ಷದ ಸಾಮೂಹಿಕ ಸಂಘಟನೆಗಳ ತಲೆಗೂ ಕಟ್ಟಿದ್ದರು!
3. ಬರಹಗಾರರಿಗಾಗಲಿ, ಪತ್ರಿಕಾ ವರದಿಗಾರರಿಗಾಗಲಿ, ಇತರ ಸಂಘಟನೆಗಳಿಗೆ ಸೇರಿದವರಿಗಾಗಲಿ, ನ್ಯಾಯಾಲಯಗಳ ರೀತಿಯಲ್ಲಿ ಪಿ.ಎಫ್.ಐ. ಅನ್ನು ಕಟಕಟೆಯಲ್ಲಿ ನಿಲ್ಲಿಸಿ 'ನಿಮ್ಮ ಸತ್ಯವಂತಿಕೆಯನ್ನು ಸಾಬೀತುಗೊಳಿಸಿ ಖುಲಾಸೆ ಪಡೆಯಿರಿ' ಎಂದು ಅಪ್ಪಣೆ ಕೊಡುವ ಹಕ್ಕು ಇಲ್ಲ, ನಿಜ. ಆದರೆ, ನಾವೆಲ್ಲ ಪಿ.ಎಫ್.ಐ. ಕಾರ್ಯಾಚರಿಸುತ್ತಿರುವ ಕಾಲ-ದೇಶಗಳಲ್ಲಿ ನಮ್ಮ ಕಸುಬನ್ನು ನಡೆಸಿಕೊಂಡು ಹೋಗುತ್ತಿರುವಾಗ, ವಾಸ್ತವವನ್ನು ಆದಷ್ಟು ನೈಜವಾಗಿ ಅರಿಯುವ ಪ್ರಯತ್ನ ಮಾಡುವುದು ಹಾಗೂ ಅದರ ಆಧಾರದಲ್ಲಿ ಪ್ರಸ್ತುತ ವಿದ್ಯಮಾನಗಳಿಗೆ ಪ್ರತಿಕ್ರಿಯಿಸುವುದು ಅನಿವಾರ್ಯವಾಗಿರುತ್ತದೆ. 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಗೆ ಸೇರಿದ ನಮಗೆಲ್ಲರಿಗಂತೂ, ದಿ.6.10.2009ರಂದು ಮಂಗಳೂರಿನಲ್ಲಿ ನಡೆದ ಘಟನೆಯ ತಕ್ಕಮಟ್ಟಿಗಿನ ವಾಸ್ತವಿಕ ಚಿತ್ರವನ್ನು ಕಟ್ಟಿಕೊಂಡು ಪ್ರತಿಕ್ರಿಯಿಸುವ ದುಪ್ಪಟ್ಟು ಅನಿವಾರ್ಯತೆ ಇತ್ತು: ಮೊದಲನೆಯದಾಗಿ ಕರಾವಳಿಯಲ್ಲಿ ಸಂಘಪರಿವಾರ ನಡೆಸುತ್ತಿರುವ ಹಿಂಸೆಯ ಸ್ವರೂಪವನ್ನು ನಾಗರಿಕರಿಗೆ ತಿಳಿಸುವ ಸಲುವಾಗಿ ನಾವು ಹಿಂಸೆ ನಡೆದ ಸ್ಥಳಗಳಿಗೆ ಹೋಗಿ, ಹಿಂಸೆಗೆ ತುತ್ತಾದವರು ಮತ್ತು ಪ್ರತ್ಯಕ್ಷದರ್ಶಿಗಳ ಜೊತೆ ಮಾತನಾಡಿ ವರದಿ ಮಾಡುತ್ತ ಬಂದಿದ್ದೇವೆ; ಅಂತಹ ಸಂದರ್ಭಗಳಲ್ಲಿ 'ದಿ ಹಿಂದು' ಪತ್ರಿಕೆಯ ಮಂಗಳೂರು ವರದಿಗಾರರು ಹಾಗೂ 'ಕರಾವಳಿ ಅಲೆ'ಯ ವರದಿಗಾರರು ಮಾಡಿದ ವರದಿ ನೈಜವೆಂದು ಕಂಡುಕೊಂಡು ನಮ್ಮ ನಿರೂಪಣೆಯಲ್ಲಿ ಈ ವರದಿಗಳ ಉಲ್ಲೇಖ ಮಾಡಿದ್ದು ಇದೆ. ಎರಡನೆಯದಾಗಿ, ಪಿ.ಎಫ್.ಐ. ಕ.ಕೋ.ಸೌ.ವೇ.ಯ ಸಹಭಾಗಿ ಸಂಘಟನೆ ಅಲ್ಲವಾದರೂ, ವೇದಿಕೆಯು ಆ ಸಂಘಟನೆಯ ಜೊತೆ ಅನೇಕ ಜಂಟಿ ಪ್ರತಿಭಟನೆಗಳನ್ನು ಮಾಡಿದ್ದು ಹಾಗೂ ವೇದಿಕೆಯ ಸದಸ್ಯರು ಪಿ.ಎಫ್.ಐ.ನ ಸಭೆಗಳಲ್ಲಿ ಭಾಗವಹಿಸಿದ್ದೂ ಇದೆ. ಈ ಉತ್ತರದಾಯಿತ್ವದಿಂದಲೇ ಕ.ಕೋ.ಸೌ.ವೇ.ಯ ಪ್ರಧಾನ ಕಾರ್ಯದರ್ಶಿ ಕೆ.ಎಲ್.ಅಶೋಕ್, ರಾಜಶೇಖರ್ ತಮ್ಮ ಲೇಖನದಲ್ಲಿ ಉಲ್ಲೇಖಿಸಿದ ದಿ.9.10.2009ರ ಹಕ್ಕೊತ್ತಾಯ ಸಭೆಯಲ್ಲಿ 6ನೇ ತಾರೀಕಿನ ಹಲ್ಲೆಯನ್ನು ಖಂಡಿಸುವಾಗ ಅದರಲ್ಲಿ ಪಿ.ಎಫ್.ಐ.ನ ಪಾತ್ರದ ಬಗ್ಗೆ ಇರುವ ಆರೋಪವನ್ನು ಸ್ಪಷ್ಟವಾಗಿ ಪ್ರಸ್ತಾಪಿಸಿದ್ದು ಮಾತ್ರವಲ್ಲದೆ, ಅಂತರ್ಮತೀಯ ಸಂಬಂಧಗಳ ವಿಷಯದಲ್ಲಿ ವೇದಿಕೆಯ ಪ್ರಗತಿಪರ ನಿಲುವನ್ನು ಪುನರುಚ್ಚರಿಸಿ, ಅಂತಹ ನಿಲುವುಗಳನ್ನು ಪಿ.ಎಫ್.ಐ. ತನ್ನ ಸಂಘಟನೆಯ ತಾತ್ವಿಕತೆಯ ಭಾಗವಾಗಿ ಮಾಡಿಕೊಂಡು ಕಾರ್ಯಾಚರಣೆಗೆ ತರುವ ಮೂಲಕ ತಮ್ಮ ಮೇಲಿರುವ ಆರೋಪಗಳನ್ನು ಮೀರಬೇಕೆಂದೂ ನಿಚ್ಚಳವಾಗಿ ಸೂಚಿಸಿದರು. ಕೆ.ಎಲ್.ಅಶೋಕರ ನಿರ್ದಾಕ್ಷಿಣ್ಯ ಪ್ರತಿಕ್ರಿಯೆಯಿಂದ 'ವೇದಿಕೆಯ ವೈರಿಗಳು' ಮತ್ತು 'ಆಸಕ್ತ ವಲಯ'ಕ್ಕೆ ನಿರಾಶೆಯಾಗಿದೆಯೋ ಇಲ್ಲವೋ, ಜಾತ್ಯಾತೀತ-ಪ್ರಗತಿಪರ ಸಂಘಟನೆಗಳ ಒಕ್ಕೂಟವಾಗಿರುವ 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ' ಪ್ರಾಮಾಣಿಕವಾಗಿ ತನ್ನ ಉತ್ತರದಾಯಿತ್ವವನ್ನು ನಿಭಾಯಿಸಿದೆ; ಮುಂದೆಯೂ ಅಷ್ಟೇ ನಿರ್ದಾಕ್ಷಿಣ್ಯವಾಗಿ ನಿಭಾಯಿಸಿಕೊಂಡು ಹೋಗುವ ಜವಾಬ್ದಾರಿಯೂ ಇದೆ.

● ಕೆ.ಫಣಿರಾಜ್

ಲಂಕೇಶ್

ಬಿ.ಎಂ. ರಶೀದ್

ಒಬ್ಬ ತರುಣ ಲೇಖಕನ ತಲ್ಲಣ, ಆದರ್ಶ, ಜಾಣ್ಮೆ, ಉದ್ವೇಗಗಳನ್ನು ಅರ್ಥಮಾಡಿಕೊಂಡು, ಆತನನ್ನು ಬಾಳಗೊಡದಂತೆ ನಮ್ಮ ಸಮಾಜ ತನ್ನ ಸ್ಪೇಸನ್ನೇ ಕಿರಿದುಗೊಳಿಸಿಕೊಂಡಿದೆಯೊ ಅಥವಾ ತನ್ನ ಅತಿಸೂಕ್ಷ್ಮತೆ ವಿಕ್ಷಿಪ್ತತೆಗಳಿಂದ ತತ್ತರಿಸುವ ಇಂತಹ ತರುಣರು ದುಡುಕಿನಿಂದ ಜೀವಕಳೆದುಕೊಂಡರೊ? ಇಂತಹ ಪ್ರಶ್ನೆಗಳನ್ನು ರಶೀದ್ ಬರೆಹ ಮತ್ತು ಬಾಳು ನಮ್ಮ ಮುಂದಿಟ್ಟು ನಿರ್ಗಮಿಸಿದೆ.



ಚಿಕ್ಕವಯಸ್ಸಿನಲ್ಲೇ ತೀರಿಕೊಂಡ ಇಬ್ಬರು ಹೊಸತಲೆಮಾರಿನ ಲೇಖಕರು ಸದಾ ನನ್ನನ್ನು ಕಾಡುತ್ತಿರುತ್ತಾರೆ. ಒಬ್ಬರು ವಿಭಾ ತಿರುಕಪಡಿ. ಇನ್ನೊಬ್ಬರು ಬಿ.ಎಂ. ರಶೀದ್. ಇಬ್ಬರೂ ಪ್ರತಿಭಾವಂತರು. ಜೀವನ ಪ್ರೀತಿಯುಳ್ಳವರು. ಮಾನವೀಯ ಲೋಕದೃಷ್ಟಿಯಿದ್ದವರು. ರಶೀದ್ ಧಗಧಗಿಸಿ ಉರಿದು ಬೂದಿಯಾದ ಲೇಖಕನಾದರೆ, ವಿಭಾ ತನ್ನ ತಾಳ್ಮೆ ಮತ್ತು ಕೆಚ್ಚಿನ ಮೂಲಕ ಲೋಕದೃಷ್ಟಿಯೊಂದನ್ನು ರೂಪಿಸಿಕೊಳ್ಳುತ್ತಿದ್ದ ಲೇಖಕಿ.

ಮೊದಲಿಗೆ ರಶೀದ್ ಬರೆಹದ ಪ್ರಸ್ತಾಪ ಮಾಡಬಹುದು.

ಪಿ.ಲಂಕೇಶ್ ತಮ್ಮ 'ಪತ್ರಿಕೆ'ಯಲ್ಲಿ ಅನೇಕ ಲೇಖಕರ ಬಗ್ಗೆ ಬರೆಯುತ್ತಿದ್ದರು ಮತ್ತು ಅವರಿಂದ ಬರೆಯಿಸುತ್ತಲೂ ಇದ್ದರಷ್ಟೆ; ಹೀಗೆ ಅವರಿಂದ ಗುರುತಿಸಲ್ಪಟ್ಟ ಲೇಖಕರಲ್ಲಿ ಕರ್ನಾಟಕದ ಹಲವು ಸಮುದಾಯಕ್ಕೆ ಸೇರಿದ, ಹಲವು ಪ್ರದೇಶಗಳಿಂದ ಬಂದವರೆಲ್ಲ ಇದ್ದರು. ಅದರಲ್ಲೂ ಹೊಸತಲೆಮಾರಿನ ಪ್ರತಿಭಾವಂತ ಲೇಖಕರನ್ನು ಮೆಚ್ಚುವ ಮತ್ತು ವಿಮರ್ಶೆಯ ಮೂಲಕ ರೂಪಿಸುವ ತಾಯ್ತನದ ಗುಣ ಲಂಕೇಶ್ ಅವರಿಗಿತ್ತು. ಬಿ.ಚಂದ್ರೇಗೌಡ, ನಟರಾಜ ಹುಳಿಯಾರ್-ಇವರೆಲ್ಲ ಮೊದಲ ಘಟ್ಟದಲ್ಲಿ ಹೀಗೆ ರೂಪುಗೊಂಡವರು. ಇವರಲ್ಲಿ ಅತಿ ಚಿಕ್ಕವಯಸ್ಸಿನ ಲೇಖಕನಾಗಿ ಲಂಕೇಶರ ಪ್ರೀತಿ ಸೆಳೆದುಕೊಂಡು ಬರೆದವರಲ್ಲಿ ರಶೀದ್ ಒಬ್ಬರು. ಒಮ್ಮೆ ರಶೀದ್ ಬರೆದ 'ಗರ್ಭ' ಎಂಬ ಪುಟ್ಟಕತೆಯನ್ನು ಲಂಕೇಶ್ ಎಷ್ಟು ಮೆಚ್ಚಿದ್ದರೆಂದರೆ, ನನಗೂ ಇಂತಹದೊಂದು ಕತೆ ಬರೆಯಲು ಆಗುವುದಿಲ್ಲವಲ್ಲ ಎಂದು ಅಸೂಯೆಪಡುವಷ್ಟು.



ಬಿ.ಎಂ. ರಶೀದ್ ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ ಸಮೀಪದ ಮಠ ಎಂಬ ಊರಿನವರು; 'ಲಂಕೇಶ್ ಪತ್ರಿಕೆ'ಗೆ ಕೆಲವು ಕಾಲ ವರದಿಗಾರನಾಗಿಯೂ ಕೆಲಸ ಮಾಡಿದವರು. ಅವರು ಐದಾರು ವರ್ಷಗಳ ಕಾಲದಲ್ಲಿ ಕೆಲವು ಕತೆ, ಕವನ ಮತ್ತು ಲೇಖನಗಳನ್ನು ಬರೆದರು. ಅವೆಲ್ಲವನ್ನು ಒಟ್ಟುಗೂಡಿಸಿ 'ಪರುಷಮಣಿ' ಎಂಬ ಹೆಸರಲ್ಲಿ ಅವರ ಸೋದರ, ಕತೆಗಾರ ಬಿ.ಎಂ.ಬಶೀರ್ ಪ್ರಕಟಿಸಿದ್ದಾರೆ.

ರಶೀದ್ ಬರೆಹದ ವಿಶಿಷ್ಟತೆಯೆಂದರೆ-

1. ಯೌವನ ಸಹಜವಾಗಿದ್ದ ತೀವ್ರತೆ ಮತ್ತು ಭಾವನಾತ್ಮಕತೆ. ಬಹುತೇಕ ಕವನ ಕತೆಗಳ ವಸ್ತು ಗಂಡು ಹೆಣ್ಣುಗಳಿಬ್ಬರ ಸಂಬಂಧ ಕುರಿತಾಗಿದ್ದು, ಈ ತೀವ್ರತೆಯೆನ್ನುವುದು ಒಳವಿದ್ಯುತ್ತಿನಂತೆ ಇಲ್ಲಿ ಪ್ರವಹಿಸಿದೆ. ಇದಕ್ಕೆ ಇಲ್ಲಿನ ಕತೆಯೊಂದರ ಸಾಲನ್ನು ಇಲ್ಲಿ ಉಲ್ಲೇಖಿಸಬಹುದು: "ಯೇಟ್ಸ್ ಕವಿಯಂತೆ ಈ ಬಡವ ತನ್ನ ಕನಸುಗಳನ್ನೆಲ್ಲ ಅವಳ ಬುಡಕ್ಕೆ ಸುರಿದ. ಅವಳು ಆರಾಮಾಗಿ ಅವನ್ನು ತುಳಿಯುತ್ತ ನಡೆದಳು. ಐರನ್‌ಲೇಡಿ";
2. ಗಾಢವಾದ ದುರಂತ ಪ್ರಜ್ಞೆ. ಸುಡುವ ಆತ್ಮವೊಂದು ಹರಿದುಕೊಂಡು ಬಿದ್ದಂತೆ ಕಾಣುವ ಇಲ್ಲಿನ ಬರೆಹದಲ್ಲಿ ದುಗುಡ ತುಂಬಿಕೊಂಡು ತೊಳಲಾಡುವ ಮನಸ್ಸೊಂದು ಕಾಣುತ್ತದೆ.

ಪ್ರಶ್ನೆಯೆಂದರೆ. ಚಿಕ್ಕವಯಸ್ಸಿಗೇ ಯಾಕೀ ಬಗೆಯ ಚಡಪಡಿಕೆ ಮತ್ತು ವಿಷಾದಪ್ರಜ್ಞೆ? ವೈಯಕ್ತಿಕ ಬಾಳಿನ ವೇದನೆಗಳೊ ಅಥವಾ ತನ್ನ ಅತಿಸೂಕ್ಷ್ಮ ಸ್ವಭಾವದಿಂದಲೇ ಪ್ರಕ್ಷುಬ್ಧಗೊಳ್ಳುವ ಮನಸ್ಸೊ? ಬಹುಶಃ ಎರಡನೆಯದೇ ನಿಜವೆನಿಸುತ್ತದೆ. ಬದುಕಿನ ಬಗೆಗಿನ ತೀವ್ರ ವ್ಯಾಮೋಹವುಳ್ಳ ಕೆಲವರು ಲೋಕ ತನ್ನಿಚ್ಛೆಯಂತೆ ವರ್ತಿಸಬೇಕೆಂದು ಹಟ ಮಾಡುತ್ತಾರೆ. ಜೀವನದ ಬಗ್ಗೆ ಸುಂದರ ಕಲ್ಪನೆಯುಳ್ಳ ಇವರು ಕನಸುಗಾರರು. ಮಹತ್ವಾಕಾಂಕ್ಷಿಗಳು. ಅವಸರಿಗಳು ಕೂಡ. ಲೋಕ ತಮ್ಮಂತೆ ವರ್ತಿಸುವುದಿಲ್ಲವೆಂಬ ವಾಸ್ತವಕ್ಕೆ ಡಿಕ್ಕಿ ಹೊಡೆದಾಗ, ಕಳವಳಿಸಲು ಆರಂಭಿಸುತ್ತಾರೆ. ಅಸಹಾಯಕತೆ ಆಕ್ರೋಶಗಳು ಅವರನ್ನು ಆವರಿಸುತ್ತವೆ. ಈ ಹಿನ್ನೆಲೆಯಲ್ಲಿ, ರಶೀದ್ ಬರೆಹದಲ್ಲಿ ಲೋಕದ ಜತೆ ತೊಡಗಿಕೊಳ್ಳುವಷ್ಟೇ ತೀವ್ರವಾಗಿ, ಸಂಬಂಧ ಮುರಿದುಕೊಳ್ಳಲು ಎಳಸುವ ಮನಸ್ಸೊಂದು ಕೆಲಸ ಮಾಡಿರುವುದನ್ನು ನೋಡಬಹುದು. ಅವರ ಕತೆ ಕವಿತೆಗಳಲ್ಲಿ 'ಈ ಬದುಕನ್ನು ಫುಟ್‌ಬಾಲಿನಂತೆ ಒದೀಬೇಕು' ಎಂದು ಆಕ್ರೋಶಿಸುವ ನಾಯಕರು ಮತ್ತೆಮತ್ತೆ ಕಾಣಿಸುತ್ತಾರೆ. ಅವರ ಕವನದ ನಾಯಕನೊಬ್ಬನು ತನ್ನ ಪ್ರೇಯಸಿಗೆ 'ಸಾವು ಮಾತ್ರ ಬದುಕಿಗೆ ರುಜುವಾತು' ಎಂದು ಹಿತವಚನ ನುಡಿಯುತ್ತಾನೆ; ಮತ್ತೊಬ್ಬನಿಗೆ ಈ ಜಗತ್ತು 'ವಧಿಸಲ್ಪಡುವ ಕೈದಿಯ ಕೊನೆಯ ಊಟದಂತೆ' ಕಾಣುತ್ತದೆ; ಮಗದೊಬ್ಬನಿಗೆ ಎದುರಿನ ಕಡಲು 'ಜೀಕುವ ತಳಮುರಿದ ಹಡಗುಗಳಿಲ್ಲದ ನುಂಗಿ ನೊಣೆ'ಯುವ ನೀರಿನಂತೆ ಕಾಣುತ್ತದೆ; 'ವಿಷಾದಪರ್ವ' ಕವಿತೆಯಲ್ಲಿ ಈ ಸಾಲಿದೆ: "ನೀನೊಬ್ಬಳಿದ್ದೀಯೆಂದು ನಮಗೆ ನೆನಪಾಗುವುದು ನೀನಿಲ್ಲದಾಗ. ಕರುಣಾಳು ಸಾವಿಗೆ ನಮಿಸು". ಸಾವು 'ಕರುಣಾಳು' ಆಗುವುದೇ ಒಂದು ವಿಚಿತ್ರ.

ರಶೀದ್ ಬರೆಹದಲ್ಲಿ ಒಂದು ಬಗೆಯ ದಾರ್ಶನಿಕ ಆಳವಿದೆ; ಇದಾದರೂ ಅವರಲ್ಲಿ ಅಂತರ್ಗತವಾಗಿ ಮಿಡಿಯುತ್ತಿದ್ದ ಮೃತ್ಯುಪ್ರಜ್ಞೆಯ ಕಾರಣದಿಂದ ಒದಗಿಬಂದಿದ್ದು; ತರುಣರ ಬರೆಹದಲ್ಲಿ ಕುದಿತ, ತೀಕ್ಷ್ಣತೆ ಬಂಡುಕೋರತನ ಇರುವುದು, ಸೋಜಿಗವಲ್ಲ. ಆದರೆ ಮೃತ್ಯುಪ್ರಜ್ಞೆ? ನಮಗೆ ಹೀಗೆ ಹಿಡಿದು ಕಾಡಿಸುವ ಮೃತ್ಯುಪ್ರಜ್ಞೆ ಎದುರಾಗುವುದು ಗಂಗಾಧರ ಚಿತ್ತಾಲರ ಕವಿತೆಗಳಲ್ಲಿ. ಖಚಿತಗೊಂಡಿದ್ದ ಮೃತ್ಯುವನ್ನು ಮುಖಾಮುಖಿ ಮಾಡುತ್ತ ಚಿತ್ತಾಲರು ಕರುಳು ಹಿಂಡುವ ಆರ್ತಕಾವ್ಯ ಬರೆದರು. ಆದರೆ ಇನ್ನೂ ಜೀವನಕ್ಕೆ ತೆರೆದುಕೊಳ್ಳುತ್ತಿದ್ದ ಈ ತರುಣರ ಬರೆಹದಲ್ಲಿ ಗೀಳಿನಂತೆ ಆವರಿಸಿಕೊಂಡಿದ್ದ ಮೃತ್ಯುಚಿಂತನೆ ಇದ್ದುದು ಮಾತ್ರ ಅರ್ಥವಾಗುವುದಿಲ್ಲ.


ಗಾಯಕ ಮುಖೇಶ್ ಬಗ್ಗೆ ರಶೀದ್ ಬರೆದಿರುವ ಅಪೂರ್ವವಾದ ಲೇಖನದಲ್ಲೂ ಸಾವಿನ ಧ್ಯಾನವಿದೆ; ಸತ್ತ ಗಾಯಕನೊಂದಿಗೆ ಸಂವಾದಗೈಯ್ಯುವ ಧಾಟಿಯಲ್ಲಿರುವ ಇದರಲ್ಲಿ ಮುಖೇಶನ "ತೇರಿ ದುನಿಯಾಮೆ ದಿಲ್ ಲಗತಾನಹೀ, ವಾಪಸ್ ಬುಲಾಲೆ" ಮುಂತಾದ ವಿಷಾದ ಗೀತೆಗಳ ಚರ್ಚೆಯಿದೆ. ಹರಿಹರನ ರಗಳೆಗಳ ಶಾಪಗ್ರಸ್ತರಾಗಿ ಭೂಲೋಕಕ್ಕೆ ಬರುವ ಶಿವಗಣಗಳು ಕೈಲಾಸಕ್ಕೆ ಹೊರಳಿ ಹೋಗಲು ಶಿವನನ್ನು ಬೇಡುವ ಆರ್ತತೆಯನ್ನು ಇವು ನೆನಪಿಸುತ್ತವೆ.

ಒಂದು ದಿನ ರಶೀದ್ ಆತ್ಮಹತ್ಯೆ ಮಾಡಿಕೊಂಡರು. ತಮ್ಮನ್ನು ಯಾರೊ ಹಿಂಬಾಲಿಸುತ್ತಿದ್ದಾರೆ ಎಂಬ ಪರ್ಸಿಕ್ಯೂಟಿವ್ ಸಿಂಡ್ರೋಮಿನಿಂದ ನರಳುತ್ತಿದ್ದ ನಾಟಕಕಾರ ಸಂಸರು ಸಹ ಆತ್ಮಹತ್ಯೆ ಮಾಡಿಕೊಂಡರು. ಸ್ವಹತ್ಯೆ ಮಾಡಿಕೊಂಡವರನ್ನು ಜೀವನ ಎದುರಿಸಲಾರದ ಪಲಾಯನವಾದಿ ಎಂದು ಕರೆವುದು ಸುಲಭ; ಆದರೆ ಕೊಂಚ ಹೈಪರ್ ಸೆನ್ಸಿಟಿವಿಟಿ ಹಾಗೂ ಅರಾಜಕೀಯ ಎನ್ನಬಹುದಾದ ಅತಾರ್ಕಿಕತೆಯುಳ್ಳ ಇಂತಹವರ ಬರೆಹದ ಸಂಕೀರ್ಣತೆ ಮತ್ತು ಲೋಕಗ್ರಹಿಕೆ ಅರ್ಥಮಾಡಿಕೊಳ್ಳುವುದು ಸುಲಭವಲ್ಲ. 'ಜಗತ್ತು ತನ್ನನ್ನು ಹುಚ್ಚನೆನ್ನುತ್ತಿದೆ. ನಿಜವೇನೆಂದರೆ ಈ ಜಗತ್ತಿಗೇ ಹುಚ್ಚು ಹಿಡಿದಿದೆ' ಎಂದು ಮುಖೇಶನ ಹಾಡಿನ ಮಾತನ್ನು ರಶೀದ್ ಸಮರ್ಥಿಸುವುದು ಗಮನಾರ್ಹ. ಇದಕ್ಕೆ ತಕ್ಕಂತೆ ರಶೀದ್ ಮೇಲೆ ಲಂಕೇಶ್, ಸಾದತ್ ಹಸನ್ ಮಂಟೊ, ಅಮೃತಾಪ್ರೀತಂ, ಬೋದಿಲೇರ್ ಮುಂತಾದ ವಿಕ್ಷಿಪ್ತ ಲೇಖಕರ ಗಾಢ ಪ್ರಭಾವವಿತ್ತು. ದೇಶವಿಭಜನೆಯ ಚಾರಿತ್ರಿಕ ದುರಂತಗಳ ನಡುವೆ ಬದುಕಿದ ಮಂಟೊ ಮತ್ತು ಅಮೃತಾ, ತಮ್ಮ ಅಸಹಾಯಕ ನೋಟಗಳ ಅಭಿವ್ಯಕ್ತಿಗಾಗಿಯೇ ತೀಕ್ಷ್ಣವ್ಯಂಗ್ಯದ ಭಾಷೆಯನ್ನೂ ವಿಹ್ವಲತೆಯ ನೋಟವನ್ನೂ ಕಂಡುಕೊಂಡಿದ್ದರು. ಆದರೂ ಅವರು ಈ ಲೋಕದ ಜತೆ ಏಗುತ್ತ ಬದುಕಿದರು ಮತ್ತು ಬರೆದರು. ಆದರೆ ವಿಕ್ಷಿಪ್ತತೆಯನ್ನು ಹೆಚ್ಚಾಗಿಯೆ ಆವಾಹಿಸಿಕೊಂಡಂತಿದ್ದ ರಶೀದ್ ಮಾತ್ರ ಏಗಲಿಲ್ಲ.

ರಶೀದ್ ಕತೆ ಮತ್ತು ಕವಿತೆಗಳು ಬಾಳಿನ ಬಗ್ಗೆ ತನಗಿದ್ದ ಅಪೇಕ್ಷೆ ಆಕ್ಷೇಪಗಳೆಲ್ಲವನ್ನೂ ಲೇಖಕನೊಬ್ಬನು ತೋಡಿಕೊಳ್ಳುವ ಖಾಸಾ ಅಭಿವ್ಯಕ್ತಿ ಮಾಧ್ಯಮದಂತಿವೆ. ಅಲ್ಲಿ ಅತೃಪ್ತ ಜೀವಗಳ ತೊಳಲಾಟವಿದೆ; ಆದರೆ ರಶೀದರ ಪತ್ರಿಕಾ ಲೇಖನಗಳಲ್ಲಿ ತಾರ್ಕಿಕತೆ ಮತ್ತು ಸಾರ್ವಜನಿಕ ಹೊಣೆಗಾರಿಕೆಯ ಗುಣವಿದೆ. ವ್ಯವಸ್ಥೆಯನ್ನು ಒಪ್ಪದ ಬಂಡುಕೋರತನವಿದೆ; ಸಾಮಾಜಿಕ ವಿಷಮತೆ ಮತ್ತು ವೈರುಧ್ಯಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸುವ ಜರೂರಿಯಿದೆ; ಇದಕ್ಕೆ ಸಾಕ್ಷಿ- ಉಪೇಂದ್ರರ ಸಿನಿಮಾ, ಬೀದಿಗೆ ಬಿದ್ದ ಜನರನ್ನು ಎತ್ತಿತಂದು ಸಾಕುವ ಕ್ರೈಸ್ತ ದಂಪತಿಗಳ ಆಶ್ರಮ ಹಾಗೂ ನೆರಿಯಾ ಎಂಬ ಕಾಡುಪ್ರದೇಶದ ಬಡವರನ್ನು ಕುರಿತು ಇರುವ ಲೇಖನಗಳು.

ಕರಾವಳಿಯ ಬ್ಯಾರಿ ಮುಸ್ಲಿಂ ಹಿನ್ನೆಲೆಯಿಂದ ಹಲವಾರು ಲೇಖಕರು ಬಂದರು. ಅವರಲ್ಲಿ ಬಿ.ಎಂ.ರಶೀದ್ ತನ್ನ ಮಜ್ಜೆಯನ್ನೆ ಕರಗಿಸಿ ಶಾಯಿ ಮಾಡಿಕೊಂಡಂತೆ ಬರೆಯುತ್ತಿದ್ದ ಲೇಖಕ. ರಶೀದ್ ಬರೆಹದ ವಿಶಿಷ್ಟತೆಯೆಂದರೆ ಉದ್ದುದ್ದ ವಾಕ್ಯಗಳು. ಉದ್ದವಾದರೂ ಲಯಗೆಡದ; ಜಿಜ್ಞಾಸೆ ತುಂಬಿಕೊಂಡಿದ್ದರೂ ಕ್ಲಿಷ್ಟಗೊಳ್ಳದ ವಾಕ್ಯಗಳು. 'ಪರುಷಮಣಿ' ಕೃತಿಯನ್ನು ಅದರಲ್ಲಿರುವ ರುಳಕ್ಕಾಗಿಯಲ್ಲದೆ, ರಶೀದ್ ಬರೆಹದ ಪಾರದರ್ಶಕವೂ ಜೀವಂತವೂ ಆದ ಭಾಷೆಗಾಗಿಯೂ ಓದಬಹುದು. ಪಾತ್ರಗಳ ಮನಸ್ಸಿನೊಳಗೆ ಹೊಕ್ಕು ಅದರೊಳಗಿನ ಹೊಯ್ದಾಟಗಳನ್ನು ಮೂರ್ತವಾದ ಚಿತ್ರಗಳ ಮೂಲಕ ಹಿಡಿಯುವುದರಿಂದ ಭಾಷೆಗೆ ಈ ಮೂರ್ತತೆ ಬಂದಿತು ಅನಿಸುತ್ತದೆ.

ಒಬ್ಬ ತರುಣ ಲೇಖಕನ ತಲ್ಲಣ, ಆದರ್ಶ, ಜಾಣ್ಮೆ, ಉದ್ವೇಗಗಳನ್ನು ಅರ್ಥಮಾಡಿಕೊಂಡು, ಆತನನ್ನು ಬಾಳಗೊಡದಂತೆ ನಮ್ಮ ಸಮಾಜ ತನ್ನ ಸ್ಪೇಸನ್ನೇ ಕಿರಿದುಗೊಳಿಸಿಕೊಂಡಿದೆಯೊ ಅಥವಾ ತನ್ನ ಅತಿಸೂಕ್ಷ್ಮತೆ ವಿಕ್ಷಿಪ್ತತೆಗಳಿಂದ ತತ್ತರಿಸುವ ಇಂತಹ ತರುಣರು ದುಡುಕಿನಿಂದ ಜೀವಕಳೆದುಕೊಂಡರೊ? ಇಂತಹ ಪ್ರಶ್ನೆಗಳನ್ನು ರಶೀದ್ ಬರೆಹ ಮತ್ತು ಬಾಳು ನಮ್ಮ ಮುಂದಿಟ್ಟು ನಿರ್ಗಮಿಸಿದೆ.



ಮಿಡಿವ ಹೃದಯದ
ತಮ್ಮ ಬದುಕುವನಿದ್ದ
ಟಿಸಿಲಿಗಿಂತ ಹೂವ
ಟ್ಯೂಬುಗಳು ಬೇಕಾದವು
ಗೋಡೆ ಚಿತ್ರವಾಗಿ
ನೇತುಬಿದ್ದ

ಅವರ ಸೂಜಿಗಳು
ಎಷ್ಟು ಹಸಿದಿವೆ ಎಂದರೆ
ಹರಿವಾಣಗಟ್ಟಲೆ ಎಣ್ಣೆ
ಕುಡಿಯುತ್ತವೆ
ಸೋತು ನಿಂತವರು
ತಾವೇ ಕುಣಿ ತೋಡಿಕೊಳ್ಳಬೇಕು

ನನ್ನ ಪ್ರಾರ್ಥನೆಗೆ
ಎಲ್ಲ ದೇವರುಗಳು
ಕೊಕ್ಕಾಪಿ ನಕ್ಕವು
ರುಗ್ಣ ವಾಹನದಲ್ಲಿ
ಅವಳು ಬಂದಳು

ನಿನಗೆ ಖುಷಿ
ಕಣ್ಣೀರಲಿ ಮೈತೊಳೆದುಕೊಳ್ಳುವುದು
ಮನುಷ್ಯರನ್ನು ಬದುಕಿಸುವುದಿಲ್ಲ
ಹುಳ, ಉಪ್ಪಟೆಗಳಿಗೆ
ಆಯುಷ್ಯ ಜಾಸ್ತಿ

ಅವ್ವ ಅಪ್ಪ ಅಣ್ಣನಿಗೆ
ಮೂರು ಫೋಟೋ ಕಟ್ಟುಗಳು
ಮುರಿದ ಪೆಟಾರಿಯಲ್ಲಿ
ಇಟ್ಟಿದ್ದೇನೆ ಯಾತಕ್ಕೂ
ಇನ್ನೊಂದು ಬಾಕಿ ಇದೆ

ಭೂಮಿಗೆ ಬಿದ್ದೊಡನೆ
ಅವ್ವ ಹೊತ್ತಿದ್ದ ಕ್ವಿಂಟಲ್‌ಗಟ್ಟಲೆ
ಮೂಟೆಗಳಲಿ ಚೀಲವನ್ನು
ನನಗೆ ಹೊರಿಸಿದಳು
ಆದಾಗಲೇ ಅಣ್ಣ ಅಪ್ಪ
ಸವನಾಗಿ ಹೊತ್ತಿದ್ದರು
ಎಲ್ಲ ಗೊತ್ತಿರುವ ನಿನಗೆ
ಹೇಳಬೇಕಾಗಿಲ್ಲ

ಹೆಜ್ಜೆ ಹೆಜ್ಜೆಗೆ ಗಾಜು ಚೂರುಗಳನ್ನಿಟ್ಟು
ಭೂ ಬಟ್ಟು ನಡೆಸುವ ದೇವರೆ
ತಲೆ ಮೇಲೆ ಬೆಂಕಿ ಮಳೆ
ಸುರಿಸುವ ದಯಾಮಯಿ ದೇವರೆ
ಕೊಟ್ಟಂತೆ ಕಸಿದುಕೊಳ್ಳುವ ದೇವರೇ
ಏರುತ್ತೇನೆ ಎತ್ತರದ ಪರ್ವತವ
ನಿನಗೆ ಕವಣೆಯಲಿ ಕಲ್ಲು ತೂರಿ
ಪ್ರಪಾತಕ್ಕೆ ನೆಗೆಯುತ್ತೇನೆ.

(ರುಗ್ಣವಾಹನ: ಆ್ಯಂಬುಲೆನ್ಸ್)



• ಭಸವರಾಜ ಹಳ್ಳಿ

...ಅಂತೂ ಪ್ರವಾಹಕ್ಕೆ ಸಿಕ್ಕಿದೋರ ಕತೆ ಮುಗಿತು ಬುಡು

"ಕೆಟ್ಟನಲ್ಲಪ್ಪೊ ಕೆಟ್ಟನೊ ಎಡೂರಪ್ಪ ಕೆಟ್ಟನೊ.
ಕೋಬಾನಾ ಸೋಬನ ಮಾಡಿ ಮಾಡಿ
...ನೊ.
ಮುದುಗಾಡು ಸಿದ್ದರಿಗೆ ನೀಡಿ ನೀಡಿ ಕೆಟ್ಟನೊ"
ಎಂದು ಕೋಲು ಹುಯ್ಯುವ ಪದದ ಧಾಟಿಗೆ
...ಸ ಪದಗಳನ್ನು ಹೊಂದಿಸಿಕೊಂದು ಹಾಡುತ್ತ

...ಯ ಲು ಸೀ ಮೆ ಕಟ್ಟೆಪುರಾಣ

▸▸ಬಿ. ಚಂದ್ರೇಗೌಡ

...ದ ವಾಟಿಸ್ಸೆ ನೋಡಿ ಜುಮ್ಮಿ ನಕ್ಕಳು. ...ರಿಂದ ವಾಟಿಸ್ಸೆ ಹಾಡಿದ್ದನ್ನೇ ...ರಾವರ್ತಿಸಿದಾಗ,

"ಸಾಕು ಸುಮ್ಮನಿರಲೇ. ಪಾಪ ಎಡೂರಪ್ಪ ...ತಿ ಸತ್ತಾಗ ಅಳದೋನು ಬಿಕ್ಕಡಿಸಿಗಂಡು ...ಳಾಯಿದ್ನಂತೆ. ಇವುನು ಪದ ಹಾಡ್ತಾನೆ ...ಸೆಯು" ಎಂದು ಗದರಿದಳು.

"ವಳ್ಳೆ ಮಾತೇಳಿದೆ ಕಣಕ್ಕ ನೀನು. ಎಡೂರಪ್ಪ ...ತಿ ಸತ್ತಾಗ ಅತ್ತಿದ್ದ ಯಾರು ನೋಡಲಿಲ್ಲ. ...ಹ ಬಂದು ಜಾನುವಾರು ...ಚಗಂಡೋದಾಗ್ಲು ಅತ್ತಿದ್ದ ಯಾರು ನೋಡಲಿಲ್ಲ. ಅಧಿಕಾರ ಹೋಯ್ತದೆ ಅಂತ ಗೊತ್ತಾದಾಗ ...ಗತ್ತವ್ನೆ ನೋಡಕ್ಕ" ಎಂದ.

"ಕೆಲುವುರು ಅಂಗೆಯ ಕಣೊ. ಯಾವುದಕ್ಕೆ ...ಬೇಕು ಅದಕಳದಿಲ್ಲ, ಇನ್ಯಾತಕೊ ಅಳತರೆ" ...ಕ ಉಗ್ರಿ.

"ಊ ಕಂಡ್ರ ಉಗ್ರಿ. ಆ ಗಂಟ್ಯಪ್ಪನೆದ್ರಿ ಅವುರ ...ದ ಸತ್ತಾಗ ಅಳಲಿಲ್ಲ, ಅವುರತ್ತೆ ಸತ್ತಾಗ ...ಲ್ಲ. ಹಸಿ ಸೌದೆ ತಂದು ಮಡಗಿದ್ದಿಯಲ್ಲಾ ...ರಲ್ಲಿ ಯಂಗೆ ಅಡುಗೆ ಮಾಡ್ಲಿ ಅಂತ ಗಂಡನ್ನ ...ಡು ಅಳತಾ ಕುಂತಿದ್ಲು. ಅಗೊ ಅಂಗೆ" ...ಮಿ ಜುಮ್ಮಿ ಹೇಳುತ್ತಿದ್ದಾಗ ಮಧ್ಯೆ ನುಗ್ಗಿದ ...ಸ್ಸೆ,

"ಯಲ್ಲಾರಿಗಿಂತ ನಮ್ಮ ದ್ಯಾವೇಗೌಡ್ರು ಅಳೊ ...ಯನೆ ಭಾಳ ಮಜವಾಗ್ಯತಿ ಕಣಕ್ಕ. ಅವುನು ...ಖ್ಯ ಮಂತ್ರಿಯಾಗಿದ್ದಾಗ ಯಾವನೊ ಅಧಿಕಾರಿ ...ವಲಾತಿ ವಿಷಯ ಸರಿಯಾಗಿ ಪಾಲಿಸಲಿಲ್ಲ ...ಒಂದಿನದ ಮಟ್ಟಿಗೆ ಜೈಲಿಗೆ ಕಳಿಸಿದ್ರು. ಆಗ ...ದ ಮನಿಯೋರ್ಯಲ್ಲ ಸುಮ್ಮನಿದ್ರು. ದ್ಯಾವೇಗೌಡ ...ಗಿಂಟ ತಗಂಡು ಕಣ್ಣೀರ ವರಿಸಿಗಂಡು ...ಸುತ್ತಿದ್ದ. ಜನ ವಳಗೆ ನಗಾಡಿದ್ರಾಗ" ಎಂದು ...ಸ್ಸೆ ಹೇಳುವಾಗ ಸಿಟ್ಟುಗೊಂಡ ಕಾಳಮಾವ, "ಎಡೂರ್ಯಾಕತ್ತ ಅಂತ ಹೇಳ್ರಿ" ಎಂದು ಗದರಿದ.

"ನೋಡು ದ್ವಡಪ್ಪ, ಬಳ್ಳಾರಿಲಿ ಒಂದು ಮೂರು ಜನ ಪೊಲೀಸ್ ಪೇದೆ ಮಕ್ಳಿದ್ರು. ಅವುರು ಅಲ್ಲಿ ಕಬ್ಬಿಣದ ಅದುರ ತಗದು ಮಾರಿ ಮಾರಿ ದಿನ ಬೆಳಗಾಗದ್ರಲ್ಲಿ ಕೋಟ್ಯಾಧಿಪತಿಗಳಾದ್ರು. ಅವುರೆ ಆಗ ಕುಮಾರಸ್ವಾಮಿಗೆ ನೂರೈವತ್ತು ಕೋಟಿ ಕೊಟ್ಟು ಅವುನು ಮುಖ್ಯಮಂತ್ರಿಯಾಗಂಗೆ ಮಾಡಿದ್ರಂತೆ. ಈ ಕುಮಾರ ಸ್ವಾಮಿ ತಿರಗ ಕೈಯೊಡ್ಡಿದಾಗ ತಿರುಗಿಬಿದ್ದ ರೆಡ್ಡಿಗಳು ಮುಂದೆ ಎಡೂರಪ್ಪ ಮುಖ್ಯಮಂತ್ರಿ ಆಗಕ್ಕೂ ಸಹಾಯ ಮಾಡಿದ್ರು."

"ಏನು ಸಾಯ ಮಾಡಿದ್ರು?"

"ಪರೇಗ್‌ಜಾಂಪಲ್, ಬಿಜೆಪಿ ಶಾಸಕರು ಜಾಸ್ತಿ ಜನ ಗೆದ್ದು ಬರಕ್ಕೆ ದುಡ್ಡಿನ ಸಹಾಯ ಮಾಡಿದ್ರು. ಜಗ್ಗೇಶನ್ನ ಖರೀದಿ ಮಾಡಕ್ಕೆ, ಚೆನ್ನಿಗಪ್ಪನುಡುಗ, ಚನ್ನಪಟ್ಣದ ಯೋಗೇಶ್ವರ ಇಂತ ಪೂರಿಕಳೊ ಜನಗಳನ್ನಲ್ಲ ಕೊಂಡೋರು ಅವುರೆಯಂತೆ. ಈ ತರ ಜನ ಕೊಂಡು ಎಡೂರಪ್ಪನ ಸರಕಾರ ಎತ್ತಿ ನಿಲ್ಸಿದೋರು ಸುಮ್ಮನಿದ್ದರೆ? ಚಾಸ್ಟೆ ತಗದೇ ತಗಿತರೆ."

"ಆದ್ಯಾವತ್ತಿಗೂ ಇದ್ದಿದ್ದೇ ಅಲವೇನ್ಲ."

"ಅಲ್ಲವೆ ಮತ್ತೆ! ಈಗ ನ್ಯರೆ ಹಾವಳಿ ಬಂದು ಜನ ಜಾನುವಾರು ಬ್ಯಳೆ ಹಾಳಾಗಿರದ್ರಿಂದ ಎಡೂರಪ್ಪೇನು ಮಾಡಿದ ಅಂದ್ರೆ, ಅದುರು ತುಂಬಿಕಂಡೋಯ್ತಾಯಿರೋ ಲಾರಿ ಅಡ್ಡಗಟ್ಟಿ ಸಾವುರುಪಾಯಿ ಸುಂಕ ಹಾಕ್ತನಿ ಅಂದ."

"ನ್ಯಾಯವಾಗೆ ಅಂದವುನೆ ಬುಡು."

"ಆದ್ರೆ, ರೆಡ್ಡಿ ಬ್ರದರ್ಸ್‌ಗಿದು ಅನ್ಯಾಯವಲ್ಲ ಹೇಳು. ಅವುರು ಅದ್ಯಂಗಾಗ್ತಿ ನೋಡನ ಅಂದ್ರು. ಎಡೂರಪ್ಪ ಮದ್ಲೆ ಹಟವಾದಿ, ಹಾಕೇ ಹಾಕ್ತನಿ ಅಂದ. ಹತ್ತಿಗತ್ತು ನೋಡಪ್ಪ ಇಬ್ರಿಗುವೆ. ಅವುರ ಜಗಳ ನೋಡಿ ಕಾಂಗ್ರೆಸ್ಸು, ಜೆಡಿಎಸ್‌ನೋರಿಗೆ ಬರಗಾಲ್ದಲ್ಲಿ ಪಯುಸ ಕುಡದಂಗಾಯ್ತಾ ಅದೆ."


"ದ್ಯಾವೇಗೌಡನಿಗಂತೂ ಬಿಸಿಬಿಸಿ ಬ್ಯರಕೆ ಸೊಪ್ಪಿನ ಸಾರಲ್ಲಿ ಕೋಲು ಬಾಯಿ ಮುದ್ದೆ ಉಂಡಂಗಾಯ್ತಾಯಿರಬವುದು."

"ಇರಬವುದೇನೋ. ಅವುನ ಮಕದ ಕಳೆ ನೋಡಬೇಕೀಗ."

"ಅವುನ ಮಕದಲ್ಯಾಕೆ ಕಳೇ ಬಂದದ್ಲ?" ಎಂದಳು ಜುಮ್ಮಿ.

"ಯಾಕೆ ಗೊತ್ತೇನಕ್ಕ? ಅದೂ ಸ್ವಲುಪ ನಿಗೂಡವಾಗ್ಯದೆ. ಏನವ್ವಾ ಅಂದ್ರೆ ಈ ಎಡೂರಪ್ಪ ಪ್ರವಾಹದಲ್ಲಿ ಕೊಚಗಂಡೋದ ಮನೆಮಠದ ಕಾಮಗಾರಿಗೆ ಕಲ್ಯಾಕೋ ಸಮಾರಂಭಕೆ ದ್ಯಾವೇಗೌಡ್ರ ಕರಿತಿನಿ ಅಂದಿದ್ದ. ಆತರ ಅನ್ನಬೇಕಾದ್ರೆ ಸುಮ್ಮಸುಮ್ಮನೆ ಅನ್ನದಿಲ್ಲ, ಏನಾದ್ರು ರೀಜನ್ ಇರತದೆ. ಏನವ್ನ ಅಂದ್ರೆ ಮುಂದೆ ಈ ರೆಡ್ಡಿಗಳು ಕೈಕೊಟ್ರೆ ಅವುರ ವಿರೋಧಿಗಳಾದ ಕುಮಾರಸ್ವಾಮಿ ಕಡಿಕೆ ಕೈ ಚಾಚಬೇಕಾಯ್ತದೆ. ಅಂಗೆ ಕೈ ಚಾಚದೆ ಆದ್ರೆ ದ್ಯಾವೇಗೌಡನ್ನ ಚೆನ್ನಾಗಿ ನೋಡಿಕಬೇಕಾಯ್ತದೆ. ಅದ್ಕೆ ಎಡೂರಪ್ಪ ದ್ಯಾವೇಗೌಡನ್ನ ಗೌರವುಸದೆ ಆದ್ರೆ ರೆಡ್ಡಿಗಳ ಬಡ್ಡಿಗೆ ನೀರು ಬುಟ್ಟಂಗೆ ತಾನೆ?"

"ಅಲ್ಲಾ, ಸರ್ಕಾರ ಹಿಂಗೆ ಅಲ್ಲಾಡಿದ್ದೆ ಆದ್ರೆ, ಅತಿವೃಷ್ಟಿಗೆ ಸಿಕ್ಕಿದ ಜನರ ಕತಿಯೇನೂ?" ಎಂದು ಕಾಳಮಾವ ಪ್ರವಾಹಕ್ಕೆ ಸಿಕಿದ್ದ ಜನರ ಬಗ್ಗೆ ಗಂಭೀರವಾಗಿ ಯೋಚಿಸತೊಡಗಿದ.



"ದ್ವಡಪ್ಪ, ಬಿಜೆಪಿ ಸರಕಾರದೋರಿಗೆ ಇಲ್ಲದ ಯೋಚನೆ ನಿನಿಗ್ಯಾಕೆ? ಆದ್ರುವೆ ರೆಡ್ಡಿ ಬ್ರದರ್ಸ್ ಐದು ಸವುರ ಮನೆಕಟ್ಸಿ ಕೊಟ್ಟರಂತೆ. ಇವುರಿಬ್ಬರ ಜಗಳದಲ್ಲಿ ಬಡವರಿಗೆ ಮನೆ ಆದ್ರು ಸಾಕು."

"ಅವುರು ಮನೆ ಕಟ್ಟಿ ಕೊಡದು ಅವುರ ಕ್ಷೇತ್ರದ ಜನಕೆ ಕಣೋ. ಉಳದೋರ ಪಾಡೇನು ಹೇಳು."

"ಅದೇ ಕಣೋ ಉಗ್ರಿ ನನಿಗೆ ಬಂದಿರೊ ಯೋಚನೆ. ಯಾವಾಗ ಸರಕಾರ ಅಳ್ಳಾಡತದೆ. ಆಗ ಅಧಿಕಾರಿಗಳು ಕ್ಯಲಸ ಮಾಡದಿಲ್ಲ. ಜನಗಳೂ ಸಹಾಯ ಮಾಡೊದಿಲ್ಲ. ಅಂತೂ ಪಾಪ ಪ್ರವಾಹಕ್ಕೆ ಸಿಕ್ಕಿದ ಜನಗಳಿಗೆ ಗಾಯದ ಮ್ಯಾಲೆ ಬರೆಯುಳದಂಗಾಯ್ತು, ಹೋಗತ್ತಗೆ" ಎಂದ ವಾಟಿಸ್ಸೆ.

"ಎಡೂರಪ್ಪ ಒಂಥರಾ ಕ್ಯಾಚ ಕಂಡ್ರ" ಎಂದ ಸೀರ.

"ಕ್ಯಾಚ ಅನ್ನದು ಯಲ್ಲರಿಗೂ ಗೊತ್ತು, ಆದ್ರು ಮುಖ್ಯಮಂತ್ರಿ ಸ್ಥಾನಕ್ಕೆ ಬಂದಮ್ಯಾಲೆ ತೂಕವಾಗಿ ನ್ಯಡಕಬೇಕು. ತೂಕವಾಗಿ ಮಾತನಾಡಬೇಕು ಚಿಗಪ್ಪ."

"ಹುಟ್ಟಾಣಕೆನೆ ಅಂಗಿದ್ರೆ ಏನು ಮಾಡಕ್ಕಾದತ್ಲ?"

"ಏನು ಮಾಡಕ್ಕಾಗದಿಲ್ಲ ಅನ್ನಂಗೆ ಮಾತಾಡಬ್ಯಾಡ ಚಿಗಪ್ಪ. ಈಗ ನಿನ್ನ ಇದ್ದಕ್ಕಿದ್ದಂಗೆ ಪಂಚಾತಿ ಛೇರ್‌ಮನ್ ಮಾಡ್ತಿವಿ ಅಂತ ಇಟ್ಟಗೊ. ಆಗ್ಲು ನೀನು ಹಿಂಗೆ ಆಡಿದ್ರಾದತೆ. ಛೇರಮಿನಿ ಸ್ಥಾನ ಏನು, ಅದರ ವಜಕಟ್ಟೇನು ಅಂತ ತಿಳ್ಕಬೇಕು."

"ಈಗ ತಿಳಕಂಡೇನು ಮಾಡಿ ತಗೊ. ಯಲ್ಲಾ ಮುಗಿಯಂಗೆ ಕಾಣ್ತ ಅದೆ" ಅಂದ ಉಗ್ರಿ.

"ಎಡೂರಪ್ಪ ಜನಮೆಚ್ಚೊ ಅಂತ ಕ್ಯಲಸವ ಈಗ್ಲು ಮಾಡಬವುದು ಕಣೊ."

"ಏನು ಮಾಡಬವುದಪ್ಪ?"

"ಏನುವಿಲ್ಲ, ರೆಡ್ಡಿ ಬ್ರದರ್ಸ್ ವಜಾಮಾಡಿಬುಡದು. ವಜಾಮಾಡಿದೇಟಿಗೆ ಆ ನನ್ನ ಮಕ್ಕಳು ಹೆದರಿ ಬುಡ್ತರೆ. ಆಗ ಅವುರ ಜ್ವತೆ ಯಾರೂ ಹೋಗದಿಲ್ಲ. ಆಗ ಇನ್ನೊಂದು ಕ್ಯಲಸ ಕೈಗೆತ್ತಿಗಬೇಕಾಯ್ತದೆ. ಅದೇನಪ್ಪಾ ಅಂದ್ರೆ, ದ್ಯಾವೇಗೌಡ್ರ ಕಾಂಟ್ಯಾಕ್ಟ ಮಾಡಿ, ರೇವಣ್ಣನ ಉಪಮುಖ್ಯಮಂತ್ರಿ ಮಾಡಿ, ಅದೇ ಇಂಧನ ಖಾತೆ ಕೊಡ್ತಿನಿ, ರೆಡ್ಡಿ ಕೈಲಿರೊ ಕೆ.ಎಂ.ಎಫ್ ಕೆಚ್ಚಲು ಕೊಡ್ತಿನಿ ಅನ್ನಬೇಕು. ಆಗ ದ್ಯಾವೇಗೌಡ ಜ್ವರಚಳಿ ಬಂದಂಗೆ ಮನಿಕತ್ತನೆ. ಮುಂದಿನ ಕ್ಯಲಸ ರೇವಣ್ಣ ಕುಮಾರಣ್ಣಂದು. ಇಂತದೊಂದು ದಾರಿ ಎಡೂರಪ್ಪನೆದ್ರಿಗದೆ."

"ಅದ್ಯಲ್ಲ ನೀನೇಳೊವಷ್ಟು ಸುಲಭವಾಗೇ ಇರಬವುದು ಕಣೊ ವಾಟಿಸ್ಸೆ. ಆದ್ರೆ ಬಿಜೆಪಿ ಜಗಳ ಯಾವತ್ತೂ ಒಂದು ಹಂತ ತಲುಪಿಲ್ಲ. ಯಂಗೋ ಹೊಂದಾಣಿಕೆ ಮಾಡಿಕಂಡೇ ಹೋಯ್ತರೆ. ಡೆಲ್ಲಿಯಿಂದ ಯಾವುದೊ ಒಂದು ದ್ವಗಳೆ ಚೆಡ್ಡಿ ಬಂದು ಯಲ್ಲಾರ ಬಾಯಿನೂ ಮುಚ್ಚಿ ಹೋದ್ರೆ ಏನೀಸಗಂಡಿ ನೀನು?" ಎಂದ ಉಗ್ರಿ.

"ಅದು ನಿಜವೇ ಬುಡು. ಯಾಕಂದ್ರೆ ಯಂಕಯ್ಯ ನಾಯ್ಡು ಅನ್ನೊ ಪೆದ್ದಯ್ಯ ಬಂದು ರೆಡ್ಡಿಗಳ ತಂಟೆಗೆ ಎಡೂರ ಹೋಗಂಗಿಲ್ಲ, ಎಡೂರನ ತಂಟೆಗೆ ರೆಡ್ಡಿಸ್ ಹೋಗಂಗಿಲ್ಲ ಅಂದ್ರೆ, ಅಲ್ಲಿಗೆ ಕರ್ನಾಟಕದ ಕತೆ ಮುಗಿತು. ಅಂತೂ ಬಂಗಾರಿ ಕತೆಯಂಗೆ ಯಡೂರಪ್ಪನ ಕತೆನೂ ಕಡಿಗಾಣ್ತಾ ಅದೆ."

"ನೋಡನಿರೋ" ●

...ಣಾ ಗದ್ದಲ

...ಒಂದು ಸುಶಿಕ್ಷಿತ, ಶಿಸ್ತಿನ ಸೂಕ್ಷ್ಮಜ್ಞ ಸಮಾಜದ ಅನೇಕ ಗುಣಗಳಲ್ಲಿ ...ಸು ವ್ಯರ್ಥವಾಗಿ ಗದ್ದಲ ಮಾಡದಿರುವುದು, ಅಂಥ ಗದ್ದಲ ...ದಿರುವುದು. ಇದು ಜರ್ಮನಿಯನ್ನು ನೋಡಿದರೆ ಗೊತ್ತಾಗುತ್ತದೆ. ...ನ ಜನಕ್ಕೆ ಗಲಾಟೆಯೆಂದರೆ ಆಗುವುದಿಲ್ಲ, ಕಾಡಿನಲ್ಲಿ ಕೂಗುವ ...ಗಳು ತಮ್ಮ ನೆಮ್ಮದಿ ಹಾಳು ಮಾಡಿದವೆಂದು ಸರ್ಕಾರದ ವಿರುದ್ಧ ...ಹಾಕಿದ ಪ್ರಕರಣಗಳು ಅಲ್ಲಿವೆ. ಮಕ್ಕಳೂ ಅಷ್ಟೇ. ಮಕ್ಕಳ ಗದ್ದಲ ...ದೆ ಹಿಂಸಿಸುವ ಹೆತ್ತವರು ಅಲ್ಲಿದ್ದಾರೆ. ಈಗ ಜರ್ಮನ್ ಸರ್ಕಾರ ...ಸು ಕಾನೂನು ರಚಿಸಿ ಹಿಂಸಿಸುವ ತಂದೆತಾಯಿ ವಿರುದ್ಧ ಮಕ್ಕಳು ...ಸು ಕೊಡಬಹುದೆಂದು ಸಾರಿದೆ. ಶಿಸ್ತಿನ, ಪ್ರತಿಭೆಯ, ಶ್ರಮಜೀವಿಗಳಾದ ...ನರು ಸೃಷ್ಟಿಸಿದ ಸಂಗೀತಗಾರರು ಒಬ್ಬಿಬ್ಬರಲ್ಲ, ದೊಡ್ಡ ಪಟ್ಟಿಯನ್ನೇ ...ಬಹುದು.


...ಈ ದೇಶದ ನಾವೋ ಅದ್ಭುತ ಸಂಗೀತಗಾರರನ್ನು ರೂಪಿಸಿದ್ದೇವೆ. ...ಯೇ ಗದ್ದಲದ ಬಗ್ಗೆ ದಪ್ಪ ಕಿವಿ, ಚರ್ಮವನ್ನು ಕೂಡ. ಇಲ್ಲಿ ...ದೆಯೆಂದರೆ ಗದ್ದಲ, ಹಬ್ಬವೆಂದರೆ ದೇವರ ಕಿವಿ ಕಿತ್ತುಹೋಗುವಂತೆ ... ಮೊಳ್ಳೆ ಅಯ್ಯಪ್ಪನ ಬಗ್ಗೆ ಮೈಕ್ ಹಾಕಿ ಕೂಗುತ್ತಿದ್ದರು-ನಮ್ಮ ...ಯ ಅವರಿಗಾದಲ್ಲಿ ಕಟುರಿಯುಲ್ಲೆ ಇಷ್ಟಪಡದವರೂ ಇರಬಹುದೆಂಬ ...ಯಿಲ್ಲದೆ ಗಂಟೆಗಟ್ಟಲೆ ಕೇಳಿ ಸುಸ್ತಾಗಿ ಅವರಿಗೆ ವಿನಯದಿಂದ ...ಕೇಳಿದೆ- 'ಬೇಕಾದರೆ ನಾವು ಅಲ್ಲಿಗೇ ಬಂದು ಕೇಳ್ತೇವೆ. ಮೈಕ್ ...ಆರಿಸಿಬಿಡಿ' ಎಂದು.

...ಈಗ ಎಲ್ಲ ತಣ್ಣಗಾಗಿದೆ.



'ಕೆಂಪ್'

ನಾನು ಈ ಅಂಗಡಿಯಲ್ಲಿ ಕಾಲಿಟ್ಟಿಲ್ಲ. ಅಲ್ಲಿಗೆ ಹೋದ ಅನೇಕರು ಅದನ್ನು ವರ್ಣಿಸಿರುವುದರಿಂದ ಹೇಳುತ್ತೇನೆ. 'ಹೆತ್ತವರಿಗೆ ಹೆಗ್ಗಣ ಮುದ್ದು' ಎಂಬ ಗಾದೆಯ ಮೇಲೆ ನಿಂತಿರುವ ಅಂಗಡಿ ಇದು. ಚಿಕ್ಕ ಮಕ್ಕಳು ಮುಗ್ಧರು, ದೇವರ ಸಮಾನರು, ಏನನ್ನೂ ಅರಿಯದ ಹಸುಳೆಗಳು ಎಂಬುದೆಲ್ಲ ಸರಿ. ಆದರೆ ಮಹಾ ಹಟಮಾರಿಗಳು, ಹೆತ್ತವರಿಗೆ ದೊಡ್ಡ ತಲೆನೋವುಗಳು ಎಂಬುದೂ ಅಷ್ಟೇ ನಿಜ. ಇದನ್ನೆಲ್ಲ ಅರಿಯದ 'ತರಂಗ'ದವರು ಈ ಅಂಗಡಿಯನ್ನು ಹೊಗಳಿ ಮುಖಪುಟದ ಕತೆ ಮಾಡಿದರು. ಖದೀಮರಿಗೆ ಈ ಬಗೆಯ ಪ್ರಚಾರ ಸಿಕ್ಕರೆ ಅವರನ್ನು ಹಿಡಿಯುವವರು ಯಾರು?



ನನ್ನ ಗೆಳೆಯನೊಬ್ಬ ತನ್ನ ಸಹಧರ್ಮಿಣಿ ಮತ್ತು ಇಬ್ಬರು ಮಕ್ಕಳೊಂದಿಗೆ ಈ ಅಂಗಡಿಗೆ ಹೋದ. ಅಲ್ಲಿ ಕಾಲಿಟ್ಟೊಡನೆ ತಂಪು ಪಾನೀಯ, ಅವರೆಲ್ಲ ಮಾನವಶ್ರೇಷ್ಠರೋ ಎಂಬಂತೆ ಗೌರವ! ಕೂಡಲೆ ಅಂಗಡಿಯವರ ಕೆಲಸ ಶುರುವಾಯಿತು. ಮಕ್ಕಳಿಬ್ಬರ ಫೋಟೋವನ್ನು ಅಲ್ಲೇ ತೆಗೆದುಕೊಳ್ಳಲಾಯಿತು. ಇತರರು ಅಲ್ಲಿಯ ಮಕ್ಕಳ ಬಟ್ಟೆಗಳನ್ನು ನೋಡುತ್ತಿರುವಾಗಲೇ (ಹತ್ತಾರು ನಿಮಿಷದಲ್ಲಿ) ಹುಡುಗಿಯ, ಹುಡುಗನ ಫೋಟೋದೊಂದಿಗೆ ಪ್ರತ್ಯಕ್ಷವಾದ ವೃತ್ತ ಪತ್ರಿಕೆ-ಅದರ ಮುಖಪುಟದಲ್ಲಿ `Future Beauty Queen' ಮತ್ತು `Future Prime Minister' ಎಂಬ ತಲೆಬರಹದೊಂದಿಗೆ ಪುಟ್ಟ ಲೇಖನಗಳು. ಮಕ್ಕಳು ಅದನ್ನು ನೋಡಿ ಎಷ್ಟು ಖುಷಿಗೊಂಡರೆಂದರೆ ಅಂಗಡಿಯವ ತೋರಿದ ಬಟ್ಟೆಗಳನ್ನು ಕೊಂಡುಕೊಳ್ಳಲೇಬೇಕೆಂದು ಹಟ ಹಿಡಿದರು. ಬಿಲ್ ನೋಡಿದರೆ ಒಂದಕ್ಕೆ ಮೂರರಷ್ಟು! ಅಲ್ಲಿ ಕೊಟ್ಟ ಪಾನೀಯ, ತಿಂದ ತಿಂಡಿ, ತೆಗೆದ ಫೋಟೋ, ಎಲ್ಲದರ ಜೊತೆಗೆ ಶೇಕಡ ಇನ್ನೂರರಷ್ಟು ಲಾಭ!

ಇದು ಅಮೆರಿಕಾದಿಂದ ನೇರ ಬಂದಿರುವ ವಂಚನೆಯ ವ್ಯಾಪಾರ. ಇದಕ್ಕೆ 'ಮುಗ್ಧ' ಮಕ್ಕಳು ಮತ್ತು ಅಮಾಯಕ ಹೆತ್ತವರು ಬಲಿಪಶುಗಳು!

-ಜನವರಿ 5, 1992

ಪೇ ಕಲ್ಚರ್


ನಮ್ಮನ್ನು ಆಳುವ ಧಣಿಗಳಲ್ಲಿ 'ಎಂತೆಂತವರೋ ಮಹಾನುಭಾವರುಲು ಉಂಡಾರು' ಎಂಬುದನ್ನು ಮಹಾಜನತೆಗೆ ಮನವರಿಕೆ ಮಾಡಿಕೊಡಲು ಕೆಲವು ಸಂಸ್ಥೆಗಳು ಭಾರತದಲ್ಲಿ ಇವೆ. ಧಣಿಗಳ ಹಿನ್ನೆಲೆ, ಮಾಹಿತಿ ಸಂಗ್ರಹಿಸಲು ಅವರು ಊರೂರು ಅಲೆಯ ಬೇಕಿಲ್ಲ. ಗೌರವಾನ್ವಿತ ಸದಸ್ಯರ ಚುನಾವಣಾ ಘೋಷಣಾಪತ್ರದಲ್ಲೇ ಇವೆಲ್ಲ ಲಭ್ಯವಾಗುತ್ತವೆ. ಮಹಾರಾಷ್ಟ್ರ ವಿಧಾನಸಭೆಯ ಇಂತಹ ಸದಸ್ಯರ ಕುರಿತಂತೆ ಕೆಲವು ಕುತೂಹಲಕರ ಅಂಶಗಳನ್ನು ಬಿಡುಗಡೆ ಮಾಡಿವೆ.

2004 ರಲ್ಲಿ ಅಲ್ಲಿನ ವಿಧಾನಸಭೆಯ 288 ಗೌರವಾನ್ವಿತ ಸದಸ್ಯರಲ್ಲಿ 108 ಮಹಾಶಯರು ಮಾತ್ರ 'ಕೋಟ್ಯಾಧೀಶರು' ಎನ್ನಿಸಿಕೊಳ್ಳಲು ಭಾಗ್ಯ ಪಡೆದಿದ್ದರು. 2009 ರಲ್ಲಿ ಅಂತಹ ಭಾಗ್ಯಶಾಲಿಗಳ ಸಂಖ್ಯೆ 184 ಕ್ಕೆ ಏರಿದೆ.

ಕೋಟ್ಯಾಧೀಶ ವಿಧಾನಸಭೆ!

ಕೋಟ್ಯಾಧೀಶರಿಂದ ಸೇವೆ ಪಡೆಯುವ ಭಾಗ್ಯ!

ಅಣಕ



▸ ಎಚ್.ಎಲ್. ಕೇಶವಮೂರ್ತಿ

ಮಹಾರಾಷ್ಟ್ರೀಯರ ಪುಣ್ಯಕ್ಕೆ ಎಣೆಯೇ ಇಲ್ಲ!

ಇದಕ್ಕಿಂತ ಕುತೂಹಲಕರ ಸಂಗತಿ ಒಂದಿದೆ. 2004 ರಲ್ಲಿ ಆಯ್ಕೆಯಾದ ಸದಸ್ಯರಲ್ಲಿ ಪಾತಕ ಹಿನ್ನೆಲೆಯವರು ಬರೀ 132 ಸದಸ್ಯರು ಮಾತ್ರ. ಈ ಸಲ ಅದು ಕೋಟ್ಯಾಧೀಶ ಸದಸ್ಯರಂತೆ ಗಣನೀಯವಾಗಿ ಏರಿಕೆ ಕಂಡಿಲ್ಲವಾದರೂ, ಅಂತಹ ಮಹನೀಯರ ಸಂಖ್ಯೆಯೂ 143 ಕ್ಕೆ ಏರಿರುವುದು ಸಮಾಧಾನದ ಸಂಗತಿ! ಇಂತಹ ಕಲ್ಯಾಣ ಗುಣಗಳುಳ್ಳ ಇನ್ನೊಬ್ಬ ಆಯ್ಕೆಯಾಗಿದ್ದರೂ ಸಾಕಿತ್ತು, ಅಂತಹವರ ಸಂಖ್ಯೆ 144ಕ್ಕೇರುತ್ತಿತ್ತು. ಮಹಾರಾಷ್ಟ್ರ ವಿಧಾನಸಭೆಯನ್ನು 'ಪಾತಕ ವಿಧಾನಸಭೆ' ಎಂದು ಘೋಷಿಸಬಹುದಿತ್ತು! ಆ ಭಾಗ್ಯ ಅಲ್ಲಿನ ಜನತೆಗಿಲ್ಲವಾದರೂ ಇನ್ನೂ ಐದು ವರ್ಷಗಳವರೆಗೂ ಕಾಯಬೇಕಾಗಿಲ್ಲ; ಅಷ್ಟರಲ್ಲೇ ಯಾರಾದರೊಬ್ಬರು ಈ ಸ್ಥಾನಕ್ಕೆ ಏರುವ ಅರ್ಹತೆ ಪಡೆದು ವಿಧಾನಸಭೆಯ ಪುನರ್ ನಾಮಕರಣಕ್ಕೆ ಕಾಣಿಕೆ ಸಲ್ಲಿಸಬಹುದು ಎಂದು ಆಶಿಸೋಣ!

ಇಂತಹ ಬೆಳವಣಿಗೆಗಳಿಂದ ಸ್ಫೂರ್ತಿಗೊಂಡ ನಾವು ಒಂದು ನೂತನ ನಿಯಮವನ್ನು ನೀಡಬಹುದಾಗಿದೆ. ಅದೆಂದರೆ 'ಕೋಟ್ಯಾಧೀಶ ಶಾಸಕರ ಸಂಖ್ಯೆ ಹೆಚ್ಚಿದಷ್ಟೂ ಪಾತಕಿ ಶಾಸಕರ ಸಂಖ್ಯೆಯೂ ಹೆಚ್ಚುತ್ತೆ!'

ಅರೆರೆ ಇದೇನು, ಪಾತಕಿ ಅಂತ ಗೊತ್ತಿರಬೇಕಿತ್ತಲ್ಲ; ಸುದ್ದಿ ಮಾಧ್ಯಮದವರು ಅಭ್ಯರ್ಥಿಯನ್ನು ಬೆತ್ತಲು ಮಾಡಬೇಕಿತ್ತಲ್ಲ; ಹೀಗೆಲ್ಲ ಆದ ನಂತರವೂ ಪ್ರಜ್ಞಾವಂತ ಮತದಾರ ಗೆಲ್ಲಿಸಿದನೆ ಎಂದು ಅವನನ್ನು ಹೀಯಾಳಿಸುವಂತಿಲ್ಲ. ಯಾರಿಗೆ ಗೊತ್ತು ಸ್ಪರ್ಧಿಸಿದ್ದ ಅಭ್ಯರ್ಥಿಗಳೆಲ್ಲರೂ ಇಂತಹವರೇ ಇರಬಹುದು. ಅವರು ನೀಡಿದ ಹಣದ ಎದುರು ಪಾತಕಿತನ ಮರೆಯಾಗಿರಬಹುದು. ಇಂತಹದ್ದೇನಾದರೂ ನಡೆದಿರಬಹುದು. ಆದರೆ ಮಾಧ್ಯಮದವರೇನು ಮಾಡುತ್ತಿದ್ದರು? ಅಭ್ಯರ್ಥಿಯ ಹಿನ್ನೆಲೆಯನ್ನು ಬಯಲಿಗೆಳೆಯಬೇಕಿತ್ತಲ್ಲ? ಇಂತಹ ಪ್ರಶ್ನೆಗಳು ಸಹಜ. ಮಾಧ್ಯಮದವರೇನು ಸುಮ್ಮನೆ ಕುಳಿತಿರಲಿಲ್ಲ. ಅಭ್ಯರ್ಥಿಯ ಪಾತಕ ಹಿನ್ನೆಲೆಯನ್ನು ಗೌಪ್ಯವಾಗಿಡಲು ಶಾನೆ ಶ್ರಮ ವಹಿಸುತ್ತಿದ್ದರು! ಅದು ಎಂತಪ್ಪ ಎಂದರೆ....

ಇದು ಜಾಗತೀಕರಣ ಯುಗ. ಹಣ ಕೊಟ್ಟು ಸೌಲಭ್ಯ ಪಡೆಯಿರಿ ಎಂಬುದು ಇಂದಿನ ಮಂತ್ರ. ಅದೇ ಇಂದಿನ ಸಂಸ್ಕೃತಿ.

ಟಾಯಿಲೆಟ್ ಮುಂದೆ ಬರೆದಿರುತ್ತೆ- pay and use.

ಮಾಧ್ಯಮಗಳು ಹೇಳುತ್ತವೆ-pay and use.

ಟಾಯಿಲೆಟ್ ಬಳಸಬೇಕಾ? ಹಣ ನೀಡಿ.

ಮಾಧ್ಯಮಗಳನ್ನು ಬಳಸಬೇಕಾ? ಹಣ ನೀಡಿ.


ಹಣ ನೀಡದಿದ್ದರೆ ಪ್ರಜಾಪ್ರಭುತ್ವದ ನಾಲ್ಕನೆ ಅಂಗ ನಿಮ್ಮ ಪಾಲಿಗೆ ಸತ್ತಂತೆಯೇ ಸರಿ!

ಇದು ಪೇ ಕಲ್ಚರ್!

ಉಡಿಪುಡಿ ಪತ್ರಿಕೆಗಳನ್ನು ಬಿಡಿ. ಹೊಟ್ಟೆಪಾಡಿಗೆ ಪತ್ರಿಕೆ ನಡೆಸುತ್ತವೆ. ಘನವಂತ ಪತ್ರಿಕೆಗಳೂ, ಟಿವಿ ವಾಹಿನಿಗಳೂ ಈ ದಂಧೆಗೆ ಇಳಿದಿವೆ. ಇಂತಹ ಪ್ರದೇಶದಿಂದ ಇಂತಿಷ್ಟು ಹಣ ಸಂಗ್ರಹಿಸಲೇಬೇಕು ಎಂದು ತಿಳಿಸಲಾಗಿತ್ತಂತೆ. ಓಬೀರಾಯನ ಕಾಲದ ಪತ್ರಕರ್ತರಿಗೆ 'ಹೀಗೂ ಉಂಟೆ!' ಅನ್ನಿಸಬಹುದು. ಅವರಲ್ಲಿ ಒಂದು ಮನವಿ. ದಯವಿಟ್ಟು ಫ್ಲಾಷ್‌ಬ್ಯಾಕ್‌ಗೆ ಹೋಗಿ. ಹ್ಞಾಂ.... ಲೋಕಸಭೆ ಚುನಾವಣೆ ನಡೆಯಿತಲ್ಲ.... ಅದರ ಒಂದೆರಡು ದಿನ ಹಿಂದಕ್ಕೆ ಹೋಗಿ. ಚಿತ್ರದುರ್ಗದ ಸಂಸತ್ ಚುನಾವಣೆ ಬಂತಲ್ಲಾ.... ವಿದೇಶದಿಂದ ಹಿಂತಿರುಗಿದ ಅಭ್ಯರ್ಥಿ ಎಂದು, ಜನಪ್ರಿಯ, ನಂಬಿಕೆಗೆ ಅರ್ಹ ಎಂದೆಲ್ಲ ಬಿರುದಾಂಕಿತ ಪತ್ರಿಕೆ ನಡೆದುಕೊಂಡ ರೀತಿ ನೋಡಿ.... ಸಂದರ್ಶನ ಎಂಬ ಹೆಸರಿನಲ್ಲಿ ಅಭ್ಯರ್ಥಿ ಪರವಾಗಿ ಪ್ರಚಾರ ನಡೆಸಿದ್ದನ್ನು ಜ್ಞಾಪಿಸಿಕೊಳ್ಳಿ... ಜಾಹೀರಾತು ಇಲ್ಲ.. ಆದರೆ ಸುದ್ದಿಯೇ ಜಾಹೀರಾತು ಆಗಿತ್ತಲ್ಲ... ಮಹಾರಾಷ್ಟ್ರದ ಪತ್ರಿಕೆಗಳು ಇನ್ನೂ ಒಂದು ಹೆಜ್ಜೆ ಮುಂದು ಹೋಗಿವೆ. ಅಭ್ಯರ್ಥಿಯ ಪರ ಬರೆಯಲು ವ್ಯಕ್ತಿ ಚಿತ್ರಕ್ಕೆ ಇಷ್ಟು; ಸಂದರ್ಶನಕ್ಕೆ ಇಷ್ಟು; ಅವನು ಮಾಡಿರಬಹುದಾದ ಸಾಧನೆಗಳಿಗೆ ಇಷ್ಟು ಅಂತ ದರ ನಿಗದಿ ಮಾಡಿದ್ದವಂತೆ. ಪ್ರಬಲ ವಿರೋಧಿ ಎನ್ನಿಸಿಕೊಂಡವನ ಚಾರಿತ್ರ್ಯವಧೆಗೆ ಇಂತಿಷ್ಟು ಅಂತಾನೂ ನಿಗದಿಯಾಗಿತ್ತಂತೆ! ಕೆಲವು ಪತ್ರಿಕೆಗಳು ಇನ್ನೂ ಮುಂದುವರೆದು ಇಷ್ಟು ಸಲ ಇನ್‌ಸರ್ಷನ್ಸ್ ಕೊಟ್ಟರೆ ಇಷ್ಟು ಫ್ರೀ ಅಂತ ಪ್ಯಾಕೇಜ್ ಆಫರ್ ನೀಡಿದ್ದವಂತೆ!

ಟಿವಿ ವಾಹಿನಿಗಳೇನೂ ಸುಮ್ಮನೆ ಕುಂತಿರಲಿಲ್ಲ. 'ಲೈವ್ ಕವರೇಜ್' ಅನ್ನೋ ಹೆಸರಿನಲ್ಲಿ ನೀಡಿದ್ದ ಹಣಕ್ಕೆ ತಕ್ಕಂತೆ, ಒಂದೆರಡು ಗಂಟೆ ತೋರಿಸಿದ್ದನ್ನೇ ತೋರಿಸಿದವಂತೆ. News items of your choice ಅಂತ ಯಗ್ಗಾಮುಗ್ಗಾ ಹೊಗಳಿದರಂತೆ. ಇಷ್ಟು ಸಾಲದೆಂಬಂತೆ special focus ಅಂತಾ ಹಣ ಕೊಟ್ಟವರನ್ನ ಫೋಕಸ್ ಮಾಡುತ್ತಿದ್ದರಂತೆ. ಅದೇ ಅವರ special ಅಂತೆ!

ಚುನಾವಣೆ ಹತ್ತಿರಕ್ಕೆ ಬಂದೇ ಬಿಡ್ತು ಅನ್ನುವಾಗ ಎಲ್ಲರಿಗೂ ಬಿಡುವಿಲ್ಲದ ಕೆಲಸ ಅಂತೆ. ಪತ್ರಿಕೆಗಳು 'ವಿಶೇಷ ಪುರವಣಿ' ತರುವಲ್ಲಿ ಮಗ್ನರಾಗಿದ್ದರೆ, ಟಿವಿ ವಾಹಿನಿಗಳು special election bulletin ಗಳಲ್ಲಿ ತಲ್ಲೀನವಾಗಿದ್ದರಂತೆ. ಇಷ್ಟೆಲ್ಲ ಆದರೂ ಅಭ್ಯರ್ಥಿಯ ಪಾತಕ ಹಿನ್ನೆಲೆ ಕುರಿತು ಮಾಧ್ಯಮದವರಾರೂ ತುಟಿ ಪಿಟಿಕ್ ಅನ್ನಲಿಲ್ಲವಂತೆ! ಅಂತೂಇಂತೂ ಇನ್ನೇನು ಅಂಗಡಿ ಬಾಗಿಲು ಮುಚ್ಚಬೇಕು ಅಂತ ಇದ್ದವರೆಲ್ಲ ಅಂಗಡಿ ಶೃಂಗಾರ ಮಾಡಿ ನಿಗಿನಿಗಿ ಹೊಳೀತಾ ಇದ್ದಾರಂತೆ!



ಮಹಾರಾಷ್ಟ್ರದಲ್ಲಿ ಗೆಲುವು ಸಾಧಿಸಿರೋದು ಯಾವ ಪಕ್ಷಗಳೂ ಅಲ್ಲ, ಮಾಧ್ಯಮದವರು ಎಂಬುದು ಕೆಲವು ಪ್ರಜ್ಞಾವಂತರ ಅನ್ನಿಸಿಕೆ.

ಗೆದ್ದದ್ದು ಅವರಾದರೆ, ಸೋತದ್ದು ಯಾರು?

ಪ್ರಜಾಪ್ರಭುತ್ವ!

ಯಾಕೆಂದರೆ ಹಣವಿಲ್ಲದ ಕೆಲವು ಪಕ್ಷಗಳೂ ಇದ್ದವಂತೆ. ಅವು ಕೆಲವು ಜನಪರವಾದ ನಿರ್ದಿಷ್ಟ ಸಮಸ್ಯೆಗಳನ್ನು ಎತ್ತಿದ್ದವಂತೆ. ಅವಕ್ಕೆ ಪ್ರಚಾರವೇ ದಕ್ಕಲಿಲ್ಲವಂತೆ! ಹಣದ ಮುಂದೆ ಅವರ ದನಿ ಅಡಗಿತಂತೆ!

ಇದು ಈ ಚುನಾವಣೆಯ ದುರಂತ. ಇದು ಇಡೀ ದೇಶವನ್ನೇ ವ್ಯಾಪಿಸುವ ಎಲ್ಲಾ ಲಕ್ಷಣಗಳೂ ಗೋಚರಿಸುತ್ತಿವೆ. ●

'ಗ್ರೀನ್ ಹಂಟ್' ಗೆ ನಮ್ಮ ವಿರೋಧ

ಕೇಂದ್ರ ಸರ್ಕಾರ ನಡೆಸಲಿರುವ 'ಆಪರೇಷನ್ ಗ್ರೀನ್ ಹಂಟ್' ಕುರಿತು 'ಲಂಕೇಶ್' ಬಳಗ ವ್ಯಕ್ತಪಡಿಸಿರುವ ಆತಂಕ ನಮ್ಮದೂ ಆಗಿದೆ. ನಕ್ಸಲರ ದಮನದ ನೆವದಲ್ಲಿ ಲಕ್ಷಾಂತರ ಅಮಾಯಕ ಆದಿವಾಸಿಗಳನ್ನು ಅತಂತ್ರ ಸ್ಥಿತಿಗೆ ತಳ್ಳಿ, ಹೇರಳ ಖನಿಜ ಸಂಪನ್ಮೂಲದ ಲೂಟಿಗೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಅನುಕೂಲ ಮಾಡಿಕೊಡುವ ಸರ್ಕಾರದ ಜನದ್ರೋಹಿ ಯೋಜನೆಗೆ ನಮ್ಮ ವಿರೋಧವಿದೆ.

ಸಾಹಿತ್ಯವೆಂದರೆ ಬರೀ ಬರೆಯುವುದಲ್ಲ, ಅದು ಸಾಮಾಜಿಕ ಕಳಕಳಿಯ ಅಂತಸ್ಸತ್ವ ಹೊಂದಿದಾಗಲಷ್ಟೇ ಸೃಜನಶೀಲವಾಗುತ್ತದೆ ಎಂದು ನಂಬಿರುವ ನಾವು, ನಮ್ಮ ಸಾಹಿತಿ ಮಿತ್ರರು ಮತ್ತು ಪ್ರಜಾಪ್ರಭುತ್ವವಾದಿಗಳೆಲ್ಲ 'ಲಂಕೇಶ್' ನಿಲುವನ್ನು ಬೆಂಬಲಿಸಬೇಕೆಂದು ಕೋರುತ್ತೇವೆ.

- ಎ.ಬಿ.ಹಿರೇಮಠ, ಅಧ್ಯಕ್ಷರು, ಜಿಲ್ಲಾ ಕಸಾಪ, ಗದಗ
ಹು.ಬಾ.ವಡ್ಡಟ್ಟಿ, ಮುಂಡರಗಿ
ಚಿದಾನಂದ ಕಮ್ಮಾರ, ಹುಬ್ಬಳ್ಳಿ
ಕಾಲಕಾಲೇಶ್ವರ ಹಾದಿಮನಿ, ರಾಜೂರು
ಗವಿಸಿದ್ದು ಹೊಸಮನಿ, ಗಜೇಂದ್ರಗಡ
ಟಿ.ಎಸ್. ಗೊರವರ, ಗದಗ
ಕೈದಾಳ್ ಕೃಷ್ಣಮೂರ್ತಿ, ಸುರಪುರ
ವಿಠ್ಠಲ ದಳವಾಯಿ, ಸವದತ್ತಿ
ಬಿ.ಶ್ರೀನಿವಾಸ್, ಹಾವೇರಿ
ವೀರಣ್ಣ ಮಡಿವಾಳರ, ಮುಂಡರಗಿ

ತೊಂಬತ್ತರ ದಶಕದಿಂದ ಭಾರತದ ಪ್ರಭುತ್ವ ಅನುಸರಿಸಿದ ನವ ಉದಾರೀಕರಣ ನೀತಿ ಈ ನೆಲದ ನೈಜ ವಾರಸುದಾರರನ್ನು ನಿರ್ಗತಿಕ ಸ್ಥಿತಿಗೆ ತಂದು ನಿಲ್ಲಿಸಿದೆ. ಪ್ರಸ್ತುತ ಸಂದರ್ಭದಲ್ಲಿ 'ಅಭಿವೃದ್ಧಿ' ಎಂಬ ಕಲ್ಪನೆ ಅತ್ಯಂತ ಅಪಾಯಕಾರಿಯಾಗಿ ವಿವರಿಸಲ್ಪಡುತ್ತಿದೆ. ನಾವಿಂದು ಅಭಿವೃದ್ಧಿ ಎಂದರೆ ಯಾರ ಅಭಿವೃದ್ಧಿ ಮತ್ತು ಯಾವ ರೀತಿಯ ಅಭಿವೃದ್ಧಿ ಎಂಬೆರಡು ಪ್ರಶ್ನೆಗಳನ್ನು ನಿರಂತರವಾಗಿ ಕೇಳಲೇಬೇಕಾಗಿದೆ.

ಭಾರತದ ಪ್ರಭುತ್ವ ಪ್ರಸ್ತುತ ಅನುಸರಿಸುತ್ತಿರುವ ಅಭಿವೃದ್ಧಿ ಯೋಜನೆಗಳು ಕಾರ್ಪೋರೇಟ್ ಹಿತಾಸಕ್ತಿಗಳ ಪರವಾಗಿದ್ದು ಇಲ್ಲಿನ ಸಾಮಾನ್ಯ ಜನತೆಯ ವಿರುದ್ಧವಾಗಿರುವುದು ನಗ್ನ ಸತ್ಯವಾಗಿ ಗೋಚರಿಸುತ್ತಿದೆ. ಬಂಡವಾಳಶಾಹಿ ಪರ ನೀತಿಗಳು ಈ ದೇಶದಲ್ಲಿ ಅಪಾರ ಪ್ರಮಾಣದ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ನಿರ್ಗತಿಕರಣಕ್ಕೆ ಎಡೆಮಾಡಿದೆ. ಸಮಸ್ಯೆಗಳನ್ನು ಮೇಲುಸ್ತರದಲ್ಲಿ ಅರ್ಥೈಸಿಕೊಂಡು, ಅಂತರ್ಯದ ಸೂಕ್ಷ್ಮತೆಯನ್ನು ಗ್ರಹಿಸದ ಪ್ರಭುತ್ವದ ಅಸೂಕ್ಷ್ಮತೆಯೇ ಅಭಿವೃದ್ಧಿ ಎಂಬ Conceptನ್ನು ಅಮಾನವೀಯಗೊಳಿಸಿದೆ. ಉದಾಹರಣೆಗೆ SEZ ಗಳು.

ಭಾರತ ಸರ್ಕಾರ 'ಆಪರೇಷನ್ ಗ್ರೀನ್ ಹಂಟ್' ಎಂಬ ಕಾರ್ಯಾಚರಣೆಗೆ ಮುಂದಾಗಿರುವುದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಆದಿವಾಸಿಗಳ ಬಾಹುಳ್ಯವಿರುವ ಆಂಧ್ರಪ್ರದೇಶ, ಒರಿಸ್ಸಾ, ಛತ್ತೀಸ್‌ಗಡ, ಜಾರ್ಖಂಡ್, ಮಹಾರಾಷ್ಟ್ರ ಮತ್ತು ಪಶ್ಚಿಮಬಂಗಾಳ ಪ್ರದೇಶಗಳ ಆಂತರಿಕ ಸ್ಥಿತಿಗತಿಗಳ MICRO ಅಧ್ಯಯನ ಮತ್ತು ಅಭಿವೃದ್ಧಿಯಿಂದ ಮಾತ್ರ ನಕ್ಸಲ್/ಮಾವೋವಾದಿ ಚಟುವಟಿಕೆಗಳ ನಿಜಸ್ವರೂಪವನ್ನು ಅರ್ಥೈಸಬಹುದು. ಈ ನೆಲೆಯಲ್ಲಿ ಪ್ರಭುತ್ವ ತನ್ನ ವಿವೇಕತನವನ್ನು ಪ್ರದರ್ಶಿಸಬೇಕಾದುದು ಅತಿ ಮುಖ್ಯ.

ಸೇನಾಕಾರ್ಯಾಚರಣೆಯ ಬದಲು ಪ್ರಭುತ್ವ ತಾನು ಅನುಸರಿಸುತ್ತಿರುವ Socio-Economic ನೀತಿಗಳನ್ನು ಪುನರ್‌ವಿಮರ್ಶಿಸಿ ಆದಿವಾಸಿಗಳ ಬದುಕಿನ ಪ್ರಗತಿಗೆ ಮುಂದಾಗಲಿ. ದ್ವೇಷ, ಹಿಂಸೆಯಿಂದ ಯಾವುದೇ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲ ಎಂಬ ವಿವೇಕವಿರಲಿ. ನಕ್ಸಲರ ದಮನದ Labelನೊಂದಿಗೆ ಅಮಾಯಕ ಜನತೆಯ ಬದುಕನ್ನು ಕಿತ್ತುಕೊಳ್ಳಲು ಮುಂದಾಗುವ ಯಾವುದೇ ಕ್ರಮಕ್ಕೆ ಈ ನಾಡಿನ ಪ್ರಜ್ಞಾವಂತರ ವಿರೋಧವಿದೆ. ಸಮಾಜದಲ್ಲಿ ಸಾಮರಸ್ಯವುಂಟಾಗಬೇಕಾದರೆ ಸಮಾನತೆ ಆಶಯಕ್ಕೆ ಪೂರಕವಾದ ವಾತಾವರಣವಿರಬೇಕು. ಸಂಪಾದಕೀಯ ಸಕಾಲಿಕ ಮತ್ತು ತಮ್ಮ ಕಳಕಳಿಗೆ ನಮ್ಮೆಲ್ಲ ಸಹಮತವಿದೆ.

-ವಿದ್ಯಾಧರ ರೈ, ಮಡಿಕೇರಿ

ಹೊಗಳಿಕೆ ತೆಗಳಿಕೆ

'ಪ್ರಧಾನಿಗೊಂದು ಮನವಿ' ಲೇಖನದಲ್ಲಿನ ಗೌರಿ ಮೇಡಂರವರ ಮನದಾಳದ ಮಾತು ಪ್ರಜ್ಞಾವಂತರನ್ನು ತಟ್ಟಿದೆ. ನಾವೆಲ್ಲರೂ ನಿಮ್ಮ ಸಂವೇದನೆಗೆ ಸ್ಪಂದನ ನೀಡುತ್ತೇವೆ. ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿರುವವರಿಗೆ ಅಡ್ಡಿ-ಆತಂಕಗಳು ಎದುರಾದಾಗ ನಿಮ್ಮ ಮನಸ್ಸು ಒದ್ದಾಡುತ್ತದೆ. ನಿರಂತರವಾಗಿ ಪತ್ರಿಕೆ ಓದುತ್ತಿರುವ ನಮಗೆ ಈ ಚಡಪಡಿಕೆ ಅರ್ಥವಾಗುತ್ತದೆ. 'Sanhati.comಗೆ 50ಕ್ಕೂ ಹೆಚ್ಚು ಮಂದಿ ನಾವು ಹಾಗೂ ಗೆಳೆಯರು ಸಹಿ ಮಾಡುತ್ತಿದ್ದೇವೆ. ಈ ಸಮಯದಲ್ಲಿ ಶೋಷಿತ ಸಮುದಾಯದವರು ಎಚ್ಚೆತ್ತುಕೊಳ್ಳದಿದ್ದಲ್ಲಿ ಗಂಡಾಂತರ ತಪ್ಪಿದಲ್ಲ ಎಂಬ ಎಚ್ಚರಿಕೆಯನ್ನು ನೀಡಿದ್ದೀರಿ.

ಕುಮಾರ್ ಬುರಡಿಕಟ್ಟಿಯವರ 'ಆ ನಾಯಿಗೂ ಈ ಪತ್ರಕರ್ತನಿಗೂ ಏನು ವ್ಯತ್ಯಾಸ' ಎಂಬ ಲೇಖನದ ಪ್ರಶ್ನೆಗೆ ಉತ್ತರ ಇಷ್ಟೇ: ಈ ಪತ್ರಕರ್ತ ಹೊಲಸನ್ನೇ ತುಂಬಿಕೊಂಡು ಬೆಳೆದಿದ್ದಾನೆ. ಅವನು ಶುದ್ಧನಾಗುವುದಾದರೂ ಹೇಗೆ? ಕೆವಿನ್ ಕಾರ್ಟರ್‌ಗೆ ಈ ಘಟನೆ ಹೋಲಿಸಿ ಅವಲೋಕನ ಮಾಡಿದ್ದು ಗಂಭೀರವಾಗಿತ್ತು, 15 ವರ್ಷಗಳ ಹಿಂದೆಯೇ ಈ ಘಟನೆ ಜಗತ್ತಿನಾದ್ಯಂತ ಬಿರುಗಾಳಿ ಎಬ್ಬಿಸಿದ್ದನ್ನು ನಾನು ಬಲ್ಲೆ.

ಪತ್ರಿಕೆ ಪ್ರಚೋದನಾಕಾರಿಯಾಗಿಯೇ ಬರುತ್ತಿದೆ. ಮತ್ತಷ್ಟು ಕಾವು ಇರಲಿ, ಶೆಟ್ಟಿ, ಅರುಣ್‌ರ ಸಿನಿ ಸುದ್ದಿಗಳು ರಂಜನೀಯವಾಗಿಯೇ ಇವೆ.

-ಪ್ರೊ. ಮಾದೇವ್ ಭರಣಿ

ಸದಾ ಚೈನಾ, ಪಾಕಿಸ್ತಾನ, ಬಾಂಗ್ಲಾ ದೇಶವನ್ನು ನಮ್ಮ ದೇಶದ ಶತ್ರುಗಳು ಎಂಬಂತೆ ಬಿಂಬಿಸಿ ಆ ದೇಶಗಳ ಮೇಲೆ ಯುದ್ಧ ಸಾರಬೇಕು, ಅವುಗಳನ್ನು ನಾಶಮಾಡಬೇಕು ಎನ್ನುವ ವಿಕೃತ ಮನಸ್ಸಿನ ಬರಹಗಳನ್ನು ಬರೆದು, ಯುದ್ಧ ಮತ್ತು ಅದರ ಭೀಕರತೆಯನ್ನು ಟಿವಿಯಲ್ಲಿ ನೇರ ಪ್ರಸಾರದಲ್ಲಿ ನೋಡಿ ಆನಂದಿಸಲು ಬಯಸುವ ಬರಹಗಾರ 'ಉಗ್ರ' ಪ್ರತಾಪ ಸಿಂಹನಂತವರು, 'ಪ್ಲೀಸ್ ಒಮ್ಮೆ ಕರ್ನಾಟಕವನ್ನು ಗುಜರಾತ್ ಮಾಡಿ' ಎನ್ನುವ ಭಟ್ಟಿಯಂತಹ ಗುಳ್ಳೇನರಿಗಳೇ ತುಂಬಿಕೊಂಡಿರುವ 'ವಿಜಯ ಕರ್ನಾಟಕ' ಪತ್ರಿಕೆಯಿಂದ ಬೇರೆ ಏನನ್ನು ನಿರೀಕ್ಷಿಸಲು ಸಾಧ್ಯ?


ಭಾರತವನ್ನು ಕಾಡುತ್ತಿರುವ ಬಡತನ ಮತ್ತು ಹಸಿವು ಪಾಕಿಸ್ತಾನ ಹಾಗು ಬಾಂಗ್ಲಾದೇಶ ಮುಂತಾದ ಹಿಂದುಳಿದ ರಾಷ್ಟ್ರಗಳನ್ನೂ ಕಾಡುತ್ತಿದೆ. ಇದನ್ನು ಮುಚ್ಚಿಟ್ಟು, ಕಮ್ಯೂನಿಸ್ಟ್ ಚೈನಾದಲ್ಲಿ ಮಹಿಳೆಯರನ್ನೊಳಗೊಂಡು ಸಾಧಿಸಿದ ಪ್ರಗತಿಯನ್ನು ಮರೆಮಾಚಿ, ಮಾರ್ಕ್ಸ್‌ವಾದಿಗಳ ಮೇಲೆ ನಂಜು ತುಂಬಿದ ಗೇಲಿ ಮಾತುಗಳನ್ನು ಬರೆದು ಅದೇ ದೊಡ್ಡ ಸಾಧನೆ ಎಂದು ಬೀಗುವ; ಮಾತು ಮಾತಿಗೆ ಮಹಿಳೆಯರನ್ನು ಮಾತೆ ಎನ್ನುತ್ತಾ ಮಹಿಳೆಯರ ಮೇಲೆ ಹಲ್ಲೆ ಮಾಡಿದವರನ್ನು ಸಮರ್ಥಿಸುವ; ಮನುವಿನ ಮಹಿಳಾ ವಿರೋಧಿ ನಿಯಮವನ್ನು ಜಾರಿ ಮಾಡಲು ಯತ್ನಿಸುತ್ತಿರುವ ಸಂಘಟನೆಗಳಿಗೆ ಬೆಂಬಲ ಕೊಡುತ್ತಿರುವ 'ವಿಜಯ ಕರ್ನಾಟಕ'ವನ್ನು ಜನತೆಯೇ ದೂರವಿಡುವ ದಿನಗಳು ಬರುತ್ತವೆ.

ಅಂದಹಾಗೆ, ಪತ್ರಿಕೆಯಲ್ಲಿ ಪಿ.ಲಂಕೇಶ್ ಅವರ ಬರಹಗಳು ಕನಿಷ್ಠ ಒಂದು ಪುಟದಷ್ಟಾದರೂ ಪ್ರಕಟವಾಗಲಿ. ಇಂದಿನ ಪೀಳಿಗೆಗೆ ಲಂಕೇಶರ ಬರಹಗಳು ಪ್ರಸ್ತುತ ಮತ್ತು ಅಗತ್ಯವೂ ಇವೆ.

-ಬೃಂದಾ ಮಂಜುನಾಥ್, ಪುತ್ತೂರು, ದ.ಕ.

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)

ನಿಖಿತಾ ಚಕಿತ! ಓಂ ಪ್ರಕಾಶ್ ಶಂಕಿತ!




ನಿರ್ದೇಶಕ ಓಂ ಪ್ರಕಾಶ್ ಮತ್ತು ನಟಿ ನಿಖಿತಾ ನಡುವಿನ ಧೀಂ ತಕಿಟ ತಾರಕಕ್ಕೇರಿದೆ.

ಓಂ ಪ್ರಕಾಶ್ ವಿರುದ್ಧ ನಿಖಿತಾ ದೂರು ನೀಡುತ್ತಿರುವುದು ಇದೇ ಮೊದಲೇನಲ್ಲ. ಮೂರು ತಿಂಗಳ ಹಿಂದಷ್ಟೇ 'ಯೋಧ' ಚಿತ್ರದ ಸಂದರ್ಭದಲ್ಲೂ ಇವರಿಬ್ಬರ ರಂಪಾಟ ದೊಡ್ಡ ವಿವಾದವೆಬ್ಬಿಸಿತ್ತು.

"ಓಂ ಪ್ರಕಾಶ್‌ನಂತ ಸೊಂಬೇರಿ ಡೈರೆಕ್ಟರ್‌ನ್ನು ನಾನು ನೋಡೇ ಇಲ್ಲ. ಹುಡುಗಿಯರನ್ನು ಕಂಡರೆ ವಿಚಿತ್ರವಾಗಿ ಆಡ್ತಾನೆ. ಸ್ವಲ್ಪ ಸಲಿಗೆ ನೀಡಿದರೆ ಮೈಮೇಲೇ ಬೀಳುತ್ತಾನೆ" ಎಂದು ಓಂ ವಿರುದ್ಧ ನಿಖಿತಾ 'ಸ್ಫೋಟಕ' ವಿವರಗಳನ್ನು ನೀಡಿದ್ದಳು. ಇಷ್ಟೇ ಆಗಿದ್ದರೆ ಯಾರೂ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಈ ವಿಚಾರವನ್ನು ರಾಘವೇಂದ್ರರಾಜ್‌ಕುಮಾರ್ ತನಕ ಕೊಂಡೊಯ್ದು ದೊಡ್ಡ ರಾದ್ಧಾಂತವನ್ನೇ ಮಾಡಿದ್ದಳು ನಿಖಿತಾ.

ಇಷ್ಟೆಲ್ಲಾ ಆರೋಪ ಮಾಡಿದ್ದ ನಿಖಿತಾ ಮತ್ತೆ ಓಂ ಪ್ರಕಾಶ್ ಜೊತೆ ಅದೇನು 'ಒಳ ಒಪ್ಪಂದ' ಮಾಡಿಕೊಂಡಳೋ ಏನೋ. ದಿಢೀರನೆ ಹಾಗೆ ಪ್ಲೇಟು ಬದಲಿಸಿದ ನಿಖಿತಾ "ಓಂ ಪ್ರಕಾಶ್ ಜಂಟಲ್‌ಮನ್. ಅವರು 'ಹಾಗೆಲ್ಲಾ' ಇಲ್ಲ" ಎಂದುಬಿಟ್ಟಿದ್ದಳು. ಹೀಗೆ ಆತನಿಗೆ ನಿಖಿತಾ 'ಜಂಟಲ್' ಎಂಬ ಅವಾರ್ಡು ಕೊಟ್ಟರೂ ಆತ 'ಮೆಂಟಲ್' ಎಂಬುದು ಇಡೀ ಗಾಂಧಿನಗರಕ್ಕೆ ಗೊತ್ತಿರುವ ವಿಚಾರ!



ಇಷ್ಟೆಲ್ಲಾ ರಗಳೆ-ರೇಜಿಗೆ ಆದ ನಂತರವೂ ಓಂ ಪ್ರಕಾಶ್ ತನ್ನ ನಿರ್ದೇಶನದ 'ಎಕೆ 56' ಎಂಬ ಬಹುಕೋಟಿ ಬಜೆಟ್‌ನ ಚಿತ್ರಕ್ಕೆ ನಿಖಿತಾಳನ್ನೇ ಆಯ್ಕೆ ಮಾಡಿಕೊಂಡಿದ್ದರು. ಚಿತ್ರೀಕರಣ ಆರಂಭವಾಗಿ ತಿಂಗಳು ತುಂಬುತ್ತಿರುವ ಇಂದಿನ ಸಂದರ್ಭದಲ್ಲಿ ನಿಖಿತಾ ಆ ಚಿತ್ರತಂಡದಿಂದ ಹೊರಬಂದಿದ್ದಾಳಂತೆ.

"ನಿರ್ದೇಶಕರು ನನಗೆ ಕಥೆಯನ್ನೇ ಹೇಳಲಿಲ್ಲ, ನನ್ನ ಪಾತ್ರ ಹೇಗಿದೆ ಎಂದು ಕೂಡ ನನಗೆ ತಿಳಿಸಿಲ್ಲ. ನನಗೆ ಇಷ್ಟವಿಲ್ಲದಿದ್ದರೂ ಒತ್ತಾಯದಿಂದ ಫೋಟೋ ಶೂಟ್ ಮಾಡಿಸಿಬಿಟ್ಟರು" ಎಂದು ಆಕೆ ಈಗ ಗುಟುರು ಹಾಕುತ್ತಿದ್ದಾಳೆ.

ಆದರೆ ಬಲ್ಲ ಮೂಲಗಳಿಂದ ತಿಳಿದುಬಂದಿರುವ ಸಂಗತಿಯೆಂದರೆ, ಓಂ ಪ್ರಕಾಶ್ 'ಹೇಳಿದ ರೀತಿ' ನಿಖಿತಾ ಸ್ಪಂದಿಸದೇ ಇದ್ದುದರಿಂದ ಅವರಿಬ್ಬರ ಮಧ್ಯೆ ವಾದ ವಿವಾದಗಳಾಗಿ ಕಡೆಗೆ ಆಕೆ ಚಿತ್ರದಲ್ಲಿ ನಟಿಸಲು ನಿರಾಕರಿಸುತ್ತಿದ್ದಾಳಂತೆ. ನಿಖಿತಾ ಮಾತ್ರ "ನನ್ನ ಮತ್ತು ಓಂ ಪ್ರಕಾಶ್ ನಡುವೆ 'ಅಂಥಾ ಸಂಬಂಧ'ಗಳೇನೂ ಇಲ್ಲ" ಎಂದು ಸ್ಪಷ್ಟೀಕರಣ ನೀಡುತ್ತಿದ್ದಾಳೆ.

ಇದೆಲ್ಲ ಏನೇ ಇದ್ದರೂ ಕೇವಲ ತಮತೆವಲು, ತೀಟೆಗಳಿಗಾಗಿಯೇ ಸಿನಿಮಾ ಮಾಡುವವರ ಮಧ್ಯೆ ಇಂಥವೆಲ್ಲ ಸಹಜ ಎಂಬುದಂತೂ ನಿಜ.

ಶೇರಿಂಗ್ ಸಿಸ್ಟಮ್!




"ಇನ್ನುಮುಂದೆ ಕನ್ನಡ ಚಿತ್ರಗಳನ್ನು ಬಿಡುಗಡೆಗೊಳಿಸಲು ಚಿತ್ರಮಂದಿರಗಳಿಗೆ ದುಬಾರಿ ಬಾಡಿಗೆ ತೆರುವಂತಿಲ್ಲ. ಈಗ ಚಿತ್ರ ಪ್ರದರ್ಶಕರು ವಿಧಿಸುವ ಲಕ್ಷಗಟ್ಟಲೆ ಬಾಡಿಗೆಯನ್ನು ಕಟ್ಟುವ ಕಡ್ಡಾಯ ಇಲ್ಲದೇ ಎಷ್ಟೋ ಉತ್ತಮ ಚಿತ್ರಗಳೂ ಕಲೆಕ್ಷನ್ ಚೇತರಿಸಿಕೊಳ್ಳುವ ಮುನ್ನವೇ ಥಿಯೇಟರಿನಿಂದ ಹೊರದೂಡಲ್ಪಡುತ್ತಿವೆ. ಹೀಗಾಗಿ ಇನ್ನುಮುಂದೆ ಚಿತ್ರಗಳು ಬಿಡುಗಡೆಗೊಂಡಾಗ ಆ ಚಿತ್ರದ ಮೊದಲ ವಾರದ ಕಲೆಕ್ಷನ್‌ನಲ್ಲಿ ನಿರ್ಮಾಪಕರಿಗೆ 65% ಮತ್ತು ಥಿಯೇಟರ್ ಮಾಲೀಕರಿಗೆ 35%. ಎರಡನೇ ವಾರದ ಗಳಿಕೆಯಲ್ಲಿ 60% ನಿರ್ಮಾಪಕರಿಗೆ ಉಳಿದ 40% ಚಿತ್ರಮಂದಿರದವರಿಗೆ.... ಹೀಗೆ ಬಂದ ಲಾಭದಲ್ಲಿ ಪಾಲು ಮಾಡಿಕೊಳ್ಳಬೇಕೆಂಬುದು ನಿರ್ಮಾಪಕರ ಸಂಘದವರ ಲೆಕ್ಕಾಚಾರವಾಗಿದೆ.

ಆದರೆ ನಿರ್ಮಾಪಕರ ಸಂಘದ ಈ ಫಾರ್ಮುಲಾಗೆ ಚಿತ್ರ ಪ್ರದರ್ಶಕರು ಒಪ್ಪಿದರೆ ಮಾತ್ರ ಇದು ಜಾರಿಗೆ ಬರಲು ಸಾಧ್ಯ.

ಕನ್ನಡ ಚಿತ್ರರಂಗ: ನಿರ್ಮಾಪಕರ ಸೂತ್ರ ಕಾರ್ಮಿಕರ ಬದುಕು ಅತಂತ್ರ

ಕನ್ನಡ ಚಿತ್ರರಂಗದಂತೆಯೇ ಇವತ್ತು ಮಲಯಾಳಂ ಚಿತ್ರರಂಗ ಕೂಡಾ ಆರ್ಥಿಕವಾಗಿ ಕಂಗೆಟ್ಟುಹೋಗಿದೆ.

ಅದೂ ಯಾವ ಮಟ್ಟದಲ್ಲಿ ಎಂದರೆ, ಮಲಯಾಳಂನ ಸೂಪರ್‌ಸ್ಟಾರ್ ಗಳಾದ ಮಮ್ಮುಟಿ, ಮೋಹನ್‌ಲಾಲ್‌ರಂಥ ದಿಗ್ಗಜರ ಸಿನಿಮಾಗಳೂ ಮಣ್ಣುಮುಕ್ಕಿ ಅಪಾರ ನಷ್ಟಕ್ಕೆ ಕಾರಣವಾಗಿವೆ. ಜನವರಿಯಿಂದ ಈವರೆಗೆ ಮಲಯಾಳಂನಲ್ಲಿ ಒಟ್ಟು 53 ಚಿತ್ರಗಳು ಬಿಡುಗಡೆಗೊಂಡಿದ್ದು ನಿರ್ಮಾಪಕರಿಗೆ ಹಣ ವಾಪಸ್ ತಂದುಕೊಟ್ಟಿರುವುದು ಕೇವಲ ಮೂರು ಚಿತ್ರಗಳು.



ಮಮ್ಮುಟಿ ಮತ್ತು ಮೋಹನ್‌ಲಾಲ್ ಕೂಡ ತಲಾ ನಾಲ್ಕು ಫ್ಲಾಪ್ ಚಿತ್ರಗಳನ್ನು ನೀಡಿರುವ ಸಂದರ್ಭದಲ್ಲೇ ಇನ್ನೊಂದು ಚಿಂತೆ ಎಲ್ಲರನ್ನು ಈಗ ಕಾಡುತ್ತಿದೆ. ಕೇರಳ ಚಿತ್ರರಂಗದ ಇತಿಹಾಸಲ್ಲೇ ಅತಿ ದೊಡ್ಡ ಬಜೆಟ್‌ನಲ್ಲಿ ನಿರ್ಮಾಣಗೊಂಡಿರುವ ಮಮ್ಮುಟಿ ಅಭಿನಯದ 'ಪಯಸಿರಾಜಾ' ಸದ್ಯದಲ್ಲೇ ಬಿಡುಗಡೆಯಾಗಿ ಅದರ ಕತೆ ಏನಾಗುತ್ತದೋ ಎಂದು ಅಲ್ಲಿನ ಚಿತ್ರೋದ್ಯಮ ಆತಂಕದ ಕಣ್ಣುಗಳಿಂದ ನೋಡುತ್ತಿದೆ.



ಒಟ್ಟಾರೆಯಾಗಿ ಕೇರಳ ಚಿತ್ರರಂಗ ಈ ವರ್ಷ ಏನಿಲ್ಲವೆಂದರೂ 150 ಕೋಟಿ ರೂಪಾಯಿಗಳ ನಷ್ಟ ಕಂಡಿದೆ. ಹೀಗಾಗಿ ಅಲ್ಲಿನ ಚಿತ್ರರಂಗದವರೆಲ್ಲಾ ಜೊತೆಗೂಡಿ ಉದ್ಯಮವನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಒಂದಷ್ಟು ಉಳಿತಾಯ ಸೂತ್ರಗಳನ್ನು ಹಾಕಿ ಕೊಂಡು ಅದರ ಪ್ರಕಾರ ನಡೆದುಕೊಳ್ಳುವಂತೆ ಇಡೀ ಚಿತ್ರರಂಗಕ್ಕೆ ಫತ್ವಾ ಹೊರಡಿಸಿದ್ದಾರೆ.

ಸ್ಟಾರ್ ನಟರ ಚಿತ್ರಗಳಿಗೆ ಇಲ್ಲಿಯವರೆಗೆ ಸುಮಾರು ಐದು ಕೋಟಿ ಖರ್ಚಾಗುತ್ತಿತ್ತಂತೆ. ಆದರೆ ಇನ್ನುಮುಂದೆ ಅದನ್ನು ಮೂರೂವರೆ ಕೋಟಿಗಳ ಒಳಗೆ ಮುಗಿಸಬೇಕು ಎಂಬುದು ಒಂದು ಪ್ರಮುಖ ನಿರ್ಧಾರ. ಇದಕ್ಕಾಗಿ ಚಿತ್ರದ ನಾಯಕ ನಟರ ಸಂಭಾವನೆಯನ್ನು ಕಡಿತಗೊಳಿಸುವ ವಿಚಾರವೂ ಚರ್ಚೆಗೊಳಗಾಗಿದೆ. ಜೊತೆಗೆ, ಯಾವುದೇ ಚಿತ್ರಕ್ಕೆ 45 ದಿನಗಳಿಗಿಂತ ಹೆಚ್ಚು ದಿನ ಚಿತ್ರೀಕರಣ ನಡೆಸಬಾರದು, 60 ಸಾವಿರ ಅಡಿ ನೆಗೆಟಿವ್‌ಗಿಂತ ಹೆಚ್ಚು ಖರ್ಚು ಮಾಡಿ ನಿರ್ಮಾಪಕನ ಜೇಬಿಗೆ ವಿನಾಕಾರಣ ಕತ್ತರಿ ಹಾಕಬಾರದು ಎಂಬುದು ಮುಖ್ಯ ನಿರ್ಣಯವಾಗಿದೆ.



ಚಿತ್ರ ನಿರ್ಮಾಣ ವೆಚ್ಚವನ್ನು ಕಡಿತಗೊಳಿಸಲು ಕೇರಳ ಫಿಲ್ಮ್ ಛೇಂಬರ್ ರೂಪಿಸಿರುವ ಈ ಎಲ್ಲಾ ನಿರ್ಣಯಗಳಲ್ಲಿ ಚಿತ್ರರಂಗದ ಕಾರ್ಮಿಕರಿಗಾಗಲಿ, ದುಡಿಯುವ ವರ್ಗದವರಿಗಾಗಲಿ ಅನ್ಯಾಯವಾಗುವಂಥ ಯಾವುದೇ ಕ್ರಮಗಳಿಲ್ಲ.

ಕೇರಳ ಚಿತ್ರರಂಗ ಈ ನಿರ್ಧಾರಗಳನ್ನು ತಗೆದುಕೊಂಡಿರುವ ಬೆನ್ನಿಗೇ ಕನ್ನಡ ಚಿತ್ರರಂಗದವರೂ ಒಂದಷ್ಟು ಫಾರ್ಮುಲಾಗಳನ್ನು ಹಾಕಿಕೊಂಡು ನವೆಂಬರ್ ಒಂದರಿಂದ ಅವೆಲ್ಲ ಕಾರ್ಯರೂಪಕ್ಕೆ ಬರಬೇಕೆಂದು ಆಜ್ಞೆ ಹೊರಡಿಸಿದ್ದಾರೆ.

ನಟರಿಗೆ ಸೊಕ್ಕು-ಕಾರ್ಮಿಕರಿಗೆ ಬಿಕ್ಕು

ಕನ್ನಡದಲ್ಲಿ ಈ ವರ್ಷ ಸುಮಾರು 80 ಚಿತ್ರಗಳು ತೆರೆಕಂಡಿವೆ. ಇವುಗಳಲ್ಲಿ ಬಾಕ್ಸಾಫೀಸ್ ಗಳಿಕೆ ಕಂಡಿರುವುದು ಕೇವಲ ಆರೇಳು ಚಿತ್ರಗಳು ಮಾತ್ರ. ಫಿಲ್ಮ್ ಚೇಂಬರ್ ಮತ್ತು ನಿರ್ಮಾಪಕರ ಸಂಘದ ಪ್ರಕಾರವೇ ಎಪ್ಪತ್ತೂ ಚಿಲ್ಲರೆ ಸಿನಿಮಾಗಳಿಂದ ಏನಿಲ್ಲವೆಂದರೂ ಇನ್ನೂರೈವತ್ತು ಕೋಟಿ ರೂಪಾಯಿಗಳ ನಷ್ಟವಾಗಿದೆ.

ಆದ್ದರಿಂದ ಕನ್ನಡದವರೂ ಸಿನಿಮಾ ನಿರ್ಮಾಣ ವೆಚ್ಚವನ್ನು ಕಡಿತಗೊಳಿಸಲು ಹಲವು ನಿರ್ಣಯಗಳನ್ನು ತಗೆದುಕೊಂಡಿದ್ದಾರೆ. ಅವುಗಳು ಹೀಗಿವೆ:

ಇಲ್ಲಿಯವರೆಗೆ ಚಿತ್ರೋದ್ಯಮದ ಕಾರ್ಮಿಕರು ಬೆಳಗ್ಗೆ 9ರಿಂದ ಸಂಜೆ 6 ಗಂಟೆಯ ತನಕ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದರು. ಸಂಜೆ ಆರರ ನಂತರ ಕೆಲಸ ಮಾಡಿದರೆ ಎಕ್ಸ್‌ಟ್ರಾ ಬಾಟಾ, ಹೊರ ರಾಜ್ಯಗಳಿಗೆ ತೆರಳಿದರೆ ಹೆಚ್ಚುವರಿ ಬಾಟಾ, ರಾಜ್ಯದ ಇನ್ನಿತರ ಕಡೆ ಔಟ್‌ಡೋರ್ ಚಿತ್ರೀಕರಣಕ್ಕೆ ಹೋದರೆ ಅದಕ್ಕೂ ಸಹ ಹೆಚ್ಚುವರಿ ಪಗಾರ ಕಾರ್ಮಿಕರಿಗೆ ಸಿಗುತ್ತಿತ್ತು. ಆದರೆ ಇನ್ನು ಮುಂದೆ ಸಿನಿಮಾ ಕಾರ್ಮಿಕರು ಬೆಳಗ್ಗೆ 7ರಿಂದ ಸಂಜೆ 7ರ ತನಕ ಕೆಲಸ ಮಾಡಬೇಕಂತೆ. ಅಲ್ಲದೆ ಇಷ್ಟು ದಿನ ನೀಡುತ್ತಿದ್ದ ಯಾವ ಬಾಟಾಗಳನ್ನೂ ಇನ್ನುಮುಂದೆ ನೀಡುವುದಿಲ್ಲವಂತೆ.

ಸಣ್ಣಪುಟ್ಟ ಹೀರೋಗಳೂ ಇವತ್ತು 50-60 ಲಕ್ಷ ಸಂಭಾವನೆ ಪಡೆಯುತ್ತಿರುವಾಗ, ಸಿನಿಮಾವೊಂದಕ್ಕೆ ನಿರ್ಮಾಪಕರು ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚಮಾಡುತ್ತಿರುವಾಗ, ದುಂದುವೆಚ್ಚವನ್ನು ಕಡಿತಗೊಳಿಸಲಾಗದ, ನಾಯಕ ನಟರ ಸಂಭಾವನೆಯಲ್ಲಿ ಸ್ವಲ್ಪವೂ ರಿಯಾಯಿತಿ ಕೇಳುವ ತಾಕತ್ತು ಇಲ್ಲದ ನಿರ್ಮಾಪಕರ ಸಂಘ ಹೀಗೆ ಬಡ ಕಾರ್ಮಿಕರ ತಟ್ಟೆಗೇ ಕೈಯಿಟ್ಟಿರುವುದನ್ನು ನೋಡಿದರೆ ಇವರು 'ಉಚ್ಚೆಯಲ್ಲಿ ಮೀನು ಹಿಡಿಯಲು' ಹೊರಟಿರುವುದು ಸ್ಪಷ್ಟವಾಗಿ ಕಾಣುತ್ತದೆ.

ನಿರ್ಮಾಪಕರ ಸಂಘದ ಮುಖ್ಯಸ್ಥ ಕೆ.ಸಿ.ಎನ್. ಚಂದ್ರಶೇಖರ್ ಮತ್ತವರ ಗ್ಯಾಂಗು ಸಂಜೆ ಪತ್ರಿಕಾಗೋಷ್ಠಿಗಳನ್ನು ಕ್ಯಾನ್ಸಲ್ ಮಾಡಿದರೆ ಸಿಕ್ಕಾಪಟ್ಟೆ ಹಣ ಉಳಿಸಬಹುದು ಎಂದು ಲೆಕ್ಕಾ ಹಾಕಿ, ಕಳೆದ ಒಂದು ವರ್ಷದಿಂದ ಅದನ್ನು ಜಾರಿಗೆ ತಂದು ತಮ್ಮ ಚಿತ್ರಗಳ ಪ್ರಚಾರಕ್ಕೇ ಸಂಚಕಾರ ತಂದುಕೊಂಡಿದ್ದಾರೆ. ಈಗ ನೋಡಿದರೆ ದಿನಗೂಲಿ ಕಾರ್ಮಿಕರ ಭತ್ಯೆಗಳನ್ನು ಕಡಿತಗೊಳಿಸಿ ಅವರ ಬದುಕನ್ನು ಮತ್ತಷ್ಟು ಅಂಧಕಾರಕ್ಕೆ ತಳ್ಳಲು ಹೊರಟಿದ್ದಾರೆ. ಇನ್ನು ಸಿನಿಮಾಗಳ ನಿರ್ಮಾಣ ವೆಚ್ಚ ಎಷ್ಟೇ ಏರಿದರೂ ಸಹ, ಸಹಕಲಾವಿದರ ಸಂಭಾವನೆಯನ್ನೂ ಇನ್ನು ಮುಂದೆ ಕಡಿತಗೊಳಿಸಲಾಗುತ್ತದಂತೆ.

ಹೀಗೆ ಕಲಾವಿದರ ಮತ್ತು ಕಾರ್ಮಿಕರ ಸಂಬಳ, ಸೌಲಭ್ಯವನ್ನು ಮೊಟಕುಗೊಳಿಸಲು ಕಾರ್ಮಿಕರ ಸಂಘದ ಮುಂದೆ 16 ಬೇಡಿಕೆಗಳನ್ನು ನಿರ್ಮಾಪಕರ ಸಂಘ ಇಟ್ಟು ಅವುಗಳನ್ನು ಈಡೇರಿಸುವಂತೆ ಪಟ್ಟು ಹಿಡಿದಿದೆ. ಆದರೆ ಕಾರ್ಮಿಕ ಒಕ್ಕೂಟದವರು ನಿರ್ಮಾಪಕರ ಸಂಘದ ಬೇಡಿಕೆಗಳಿಗೆ ಒಪ್ಪಲು ಸಾಧ್ಯವಿಲ್ಲ ಎಂದು ಪ್ರತಿರೋಧ ವ್ಯಕ್ತಪಡಿಸುತ್ತಿದ್ದಾರೆ. ಮಾತ್ರವಲ್ಲದೇ ನಿರ್ಮಾಪಕರ ಸಂಘದ ಯಾವುದೇ ಶರತ್ತಿಗೆ ಈತನಕ ಸಹಿ ಹಾಕದೇ ತಮ್ಮ ಉಳಿವಿಗಾಗಿ ಹೋರಾಡುತ್ತಿದ್ದಾರೆ.

● ಅರುಣ್


ನೋಡುಗ 'ಸಮುದಾಯ'ಕ್ಕಾಗಿ ಚಿತ್ರೋತ್ಸವ!

'ಹೊಸಅಲೆಯ ಚಿತ್ರ' ಎನಿಸಿಕೊಂಡ ಸಿನಿಮಾಗಳು ಚಿತ್ರಮಂದಿರಗಳಲ್ಲಿ ಬಿಡುಗಡೆಯೇ ಆಗುವುದಿಲ್ಲ ಎಂಬ ಕೊರಗು ಬಹಳ ಹಳೆಯದು.

ಹಲವೊಮ್ಮೆ ಪ್ರಶಸ್ತಿಗಳಿಗಾಗಿಯೇ ನಿರ್ಮಾಣಗೊಂಡ ಸಿನಿಮಾಗಳಿಗೆ ಪ್ರೇಕ್ಷಕರುಗಳೂ ಸಿಗುವುದಿಲ್ಲ. ಈ ಕೊರತೆ ಮತ್ತು ಕೊರಗನ್ನು ನಿವಾರಿಸಲು ಜಿ. ಸಿದ್ದರಾಮಯ್ಯ ಅಧ್ಯಕ್ಷತೆಯ 'ಚಿತ್ರ ಸಮುದಾಯ' ಸಂಸ್ಥೆ 'ಸಮುದಾಯ ಚಿತ್ರೋತ್ಸವ-2009' ಎಂಬ ಉತ್ಸವವನ್ನು ಏರ್ಪಡಿಸಿ ನಾಲ್ಕು ಚಿತ್ರಗಳನ್ನು ಪ್ರದರ್ಶಿಸುವ ಕಾರ್ಯಕ್ಕೆ ಮುಂದಾಗಿದೆ.

ಬಿ. ಸುರೇಶ್‌ರ 'ಅರ್ಥ', ಅಭಯ ಸಿಂಹ ನಿರ್ದೇಶಿಸಿರುವ 'ಗುಬ್ಬಚ್ಚಿಗಳು', ಕೆ. ಶಿವರುದ್ರಯ್ಯನವರ 'ದಾಟು' ಮತ್ತು 'ಬಿಸಿಲ ಸೆರಳು' ಎಂಬ ನಾಲ್ಕು ಚಿತ್ರಗಳು ಅಕ್ಟೋಬರ್ 30ರಿಂದ ನವೆಂಬರ್ 5ರ ತನಕ 'ಕೈಲಾಷ್' ಚಿತ್ರಮಂದಿರದಲ್ಲಿ ಪ್ರದರ್ಶನಗೊಳ್ಳುತ್ತಿವೆ.

'ಕಲಾತ್ಮಕ ಚಿತ್ರಗಳು ಬಿಡುಗಡೆಗೊಂಡರೆ ತಾನೆ ನೋಡಲು ಸಾಧ್ಯ?' ಎಂದು ಹೇಳುತ್ತಿದ್ದವರು ಈಗ ಈ ನಾಲ್ಕೂ ಚಿತ್ರಗಳನ್ನು ನೋಡುವ ಮನಸ್ಸು ಮಾಡಬೇಕಿದೆಯಷ್ಟೇ!



'ಯಾರದು' ಸುಬ್ಬು?



'ರಂಗಭೂಮಿ ನಟರು ಸಿನಿಮಾ ನಟನೆಗೆ ಒಗ್ಗುವುದು ಕಷ್ಟ' ಎಂಬ ಅಪಖ್ಯಾತಿ ಬಹಳ ಹಿಂದಿನಿಂದಲೂ ಚಿತ್ರರಂಗದಲ್ಲಿದೆ. ಆದರೆ ಇತ್ತೀಚೆಗೆ ಬರುತ್ತಿರುವ ರಂಗಭೂಮಿ ನಟರು ಆ ಮಾತನ್ನು ಮತ್ತೆ ಮತ್ತೆ ಸುಳ್ಳಾಗಿಸುತ್ತಿದ್ದಾರೆ.

ರಂಗಾಯಣ ರಘು ನಂತರ ರಂಗಭೂಮಿಯಿಂದ ಬಂದಿರುವ ಉತ್ತರ ಕರ್ನಾಟಕದ ಪ್ರತಿಭೆ ರಾಜು ತಾಳಿಕೋಟೆ ತಮ್ಮ ನಟನೆಯ ಎರಡನೇ ಚಿತ್ರದಲ್ಲೇ ಪ್ರೇಕ್ಷಕರನ್ನು 'ಮನಸಾರ' ಮೆಚ್ಚಿಸಿದ್ದರು.

ಈಗ 'ಯಾರದು?' ಚಿತ್ರದ ಮೂಲಕ ಸುಬ್ರಮಣ್ಯ ಎಂಬ ಮತ್ತೊಬ್ಬ ರಂಗಭೂಮಿ ಕಲಾವಿದ ಸಿನಿಮಾ ನಟನೆಯಲ್ಲೂ ಸೈ ಎನಿಸಿಕೊಂಡಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳು, ರಂಗಭೂಮಿಗೆ ಸಂಬಂಧಿಸಿದ ಪತ್ರಿಕೆ, ನಾಟಕಗಳ ಅಧ್ಯಯನ.... ಏನಾದರೊಂದು ಮಾಡುತ್ತಾ ತಿರುಗುವ ಸುಬ್ಬು 'ಯಾರದು?' ಚಿತ್ರದ ಕಾಮಿಕ್ ಇನ್ಸ್‌ಪೆಕ್ಟರ್ ಪಾತ್ರದಲ್ಲಿ ಗುರುತರವಾಗಿ ನಟಿಸಿದ್ದಾರೆ. ತೆರೆಯ ಮೇಲೆ ಸುಬ್ಬು ಕಾಣಿಸುತ್ತಿದ್ದಂತೆ ಪ್ರೇಕ್ಷಕನ ಮುಖ ಅರಳಲು ಆರಂಭವಾಗುತ್ತದೆ.

ಆರಂಭದ ಹೆಜ್ಜೆಯಲ್ಲೇ ಇಷ್ಟು ಭರವಸೆ ಮೂಡಿಸಿರುವ ಸುಬ್ರಮಣ್ಯ ಸಿನಿಮಾ ನಟನೆಯನ್ನು ಸೀರಿಯಸ್ ಆಗಿ ತೆಗೆದುಕೊಂಡರೆ ಕನ್ನಡ ಸಿನಿಮಾರಂಗಕ್ಕೆ ಒಬ್ಬ ಒಳ್ಳೆಯ ಪೋಷಕನಟ ಸಿಕ್ಕಂತಾಗುತ್ತದೆ.

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 11-11-2009 RNI No. KARKAN2005/14

ಹೃದಯಹೀನ ಎಸ್ನಾಣಿ



ನಿರ್ದೇಶಕ ಎಸ್. ನಾರಾಯಣ್‌ರ ನಡವಳಿಕೆಯಿಂದಾಗಿ ಅಮೂಲ್ ಬೇಬಿ ಅಮೂಲ್ಯ ಶ್ಯಾನೆ ಬೇಜಾರಾದಂತೆ ಕಾಣುತ್ತಿದೆ.

ಕಳೆದ ವಾರ ಅಮೂಲ್ಯಳ ತಂದೆ ಕೆಂಪರಸು ಹೃದಯ ಸಂಬಂಧಿ ಖಾಯಿಲೆಯಿಂದ ಕೊನೆಯುಸಿರೆಳೆದರು. ಆ ಸಂದರ್ಭದಲ್ಲಿ 'ಚೆಲುವಿನ ಚಿತ್ತಾರ' ತಂಡದ ಎಲ್ಲರೂ ಬಂದು ಹೋದರೂ ನಾರಾಯಣ್ ಮಾತ್ರ ಬರಲೇ ಇಲ್ಲವಂತೆ. ಎಸ್ನಾಣಿ ಈಗ ಬರಬಹುದು, ಆಗ ಬರಬಹುದು ಎಂದು ತಂದೆಯ ಮೃತದೇಹದ ಮುಂದೆ ಅಮೂಲ್ಯ ಮತ್ತು ಆಕೆಯ ಮನೆಯವರು ಕಾಯುತ್ತಾ ಕುಳಿತಿದ್ದರಂತೆ. ಕಡೆಗೂ ಎಸ್ನಾಣಿ ಅತ್ತ ಸುಳಿಯದಿದ್ದರಿಂದ ಬೇಸತ್ತು ಅಂತ್ಯ ಸಂಸ್ಕಾರ ನೆರವೇರಿಸಿದರಂತೆ.

"ಮೊದಲೆಲ್ಲಾ ಪ್ರತಿ ದಿನ ನನ್ನೊಂದಿಗೆ ಫೋನ್‌ನಲ್ಲಿ ಮಾತಾಡುತ್ತಿದ್ದ ನಾರಾಯಣ್ ಅಂಕಲ್ ಅಮೇಲಾಮೇಲೆ ಮೊಬೈಲನ್ನು ಭಾಗ್ಯವತಿ ಆಂಟಿ ಕೈಗೆ ಕೊಟ್ಟು, ಪಕ್ಕದಲ್ಲೇ ಇದ್ದರೂ 'ಇಲ್ಲ' ಎಂದು ಸುಳ್ಳು ಹೇಳಿಸಿಬಿಡುತ್ತಿದ್ದರು'' ಎಂದು ಹೇಳುವಾಗ ಅಮೂಲ್ಯಳ ಕಣ್ಣಂಚು ತೇವಗೊಂಡಿತ್ತು.

"ನಾರಾಯಣ್ ಅಂಕಲ್‌ಗೆ ನನ್ನ ಬಗ್ಗೆ ಏನೇ ಬೇಜಾರಿದ್ದರೂ ನನಗೆ ಯಾವತ್ತಿಗೂ ಅವರ ಮೇಲೆ ಗೌರವವಿದ್ದೇ ಇರುತ್ತದೆ. ಯಾಕೆಂದರೆ ಅವರಿಲ್ಲದಿದ್ದರೆ ನಾನು ಇಷ್ಟು ಎತ್ತರಕ್ಕೆ ಬೆಳೆಯಲು ಆಗುತ್ತಿರಲಿಲ್ಲ'' ಎನ್ನುವ ಪುಟ್ಟ ಹುಡುಗಿ ಅಮೂಲ್ಯಳ ಮಾತು ಆಕೆಯ ದೊಡ್ಡತನವನ್ನು ತೋರಿಸುತ್ತದೆ.

'ದೊಡ್ಡ ಮನುಷ್ಯ' ನಾರಾಯಣ್ ಮಾತ್ರ ತನ್ನ ಸಣ್ಣ ಬುದ್ಧಿ ಬಿಡಬೇಕಿದೆ ಅಷ್ಟೇ!



'ಪ್ರೇಮಿಸಂ' ಅಮೂಲ್ಯ

'ಜಸ್ಟ್ ಒನ್ ಮಿನಿಟ್'

ರವಿ ಮತ್ತೆ ಬಂದ್ರು...

ಈ ವರ್ಷ ರವಿಚಂದ್ರನ್ ನಟಿಸಿದ ಒಂದೇ ಒಂದು ಚಿತ್ರ ಬಿಡುಗಡೆಯಾಗಿಲ್ಲ, ಬಿಡುಗಡೆಯಾಗುವ ಲಕ್ಷಣವೂ ಕಾಣಿಸುತ್ತಿಲ್ಲ. ಬಹುಷಃ ರವಿಚಂದ್ರನ್ ಅವರ 25 ವರ್ಷದ ವೃತ್ತಿ ಜೀವನದಲ್ಲಿ ಈ ರೀತಿ ಅವರ ಸಿನಿಮಾ ಬಿಡುಗಡೆ ಆಗದಿರುವುದು ಇದೇ ಮೊದಲಬಾರಿ. ಹಾಗಾದರೆ, ರವಿಚಂದ್ರನ್ ಅವರ ಕ್ರೇಜ್ ಮುಗಿದುಹೋಯಿತೆ? ಅಥವಾ ರವಿಚಂದ್ರನ್ ಅವರ ಸಾಹಸ, ಕನಸುಗಳು ಕಮರಿಹೋದವೇ? ಎಂದು ಭಾವಿಸುವ ಅಗತ್ಯತೆ ಇಲ್ಲ.

ಯಾಕೆಂದರೆ ತಮ್ಮ ಬತ್ತಳಿಕೆಯಲ್ಲಿ ಸಾಹಸಗಳಿಗೆ, ಐಡಿಯಾಗಳಿಗೆ ಯಾವುದೇ ಕೊರತೆ ಇಲ್ಲ ಎಂಬುದನ್ನು ಮೊನ್ನೆ ರವಿಚಂದ್ರನ್ ಅವರೇ ಸ್ಪಷ್ಟಪಡಿಸಿದರು. "ಕೊನೆ ಉಸಿರಿರುವ ತನಕ ಈ ರವಿಚಂದ್ರನ್ ಸಿನಿಮಾ ಬಿಟ್ಟು ಬೇರೆ ಏನೂ ಚಿಂತಿಸಲು ಸಾಧ್ಯವೇ ಇಲ್ಲ'' ಎಂದರು. ಜೊತೆಗೆ ಈ ವರ್ಷ ಅವರು ಶೂನ್ಯಕ್ಕೆ ಔಟಾದರೂ ಮುಂದಿನ ವರ್ಷ ಸೆಂಚುರಿ ಬಾರಿಸುವ ಆತ್ಮವಿಶ್ವಾಸವನ್ನು ತೋರಿಸಿದರು.

ಸದ್ಯಕ್ಕೆ ರವಿಚಂದ್ರನ್ 'ಮಂಜಿನ ಹನಿ' ಎಂಬ ಚಿತ್ರವನ್ನು ರೀ ಶೂಟ್ ಮಾಡುವುದರಲ್ಲೇ ಮಗ್ನರಾಗಿದ್ದಾರೆ. ಈ ಚಿತ್ರದ ಕ್ಲೈಮ್ಯಾಕ್ಸ್ ಅನ್ನು ಮಗುವಿನ ಮುಖಾಂತರ ತಿಳಿಸಬೇಕೆಂಬ ಏಕೈಕ ಉದ್ದೇಶದಿಂದ ಅದನ್ನು ಅವರು ರೀ ಶೂಟ್ ಮಾಡಿದ್ದಾರೆ. ಹೀಗೆ ಮರು ಚಿತ್ರೀಕರಣ ಮಾಡುವುದರಲ್ಲಿ ರವಿಚಂದ್ರನ್ ಎಕ್ಸ್‌ಪರ್ಟ್ ಎಂಬುದನ್ನು ಮತ್ತೊಮ್ಮೆ ನಿಮಗೆ ನೆನಪಿಸಬೇಕಿಲ್ಲ ತಾನೆ? ಅಂದಹಾಗೆ 'ಮಂಜಿನ ಹನಿ'ಯನ್ನು 2010 ಮೇ ತಿಂಗಳಲ್ಲಿ ಬಿಡುಗಡೆ ಮಾಡುವ ಪ್ಲಾನ್ ಹಾಕಿಕೊಂಡಿದ್ದಾರೆ.

ಅದಕ್ಕೂ ಮುನ್ನ ಜನವರಿ 14ರಂದು, ಅಂದರೆ ಸಂಕ್ರಾಂತಿಯಂದು ರವಿ ನಿರ್ದೇಶನದ 'ಹೂ' ಚಿತ್ರ ಸೆಟ್ಟೇರಲಿದೆ. ಸಂಕ್ರಾಂತಿಗೂ ಈಶ್ವರಿ ಸಂಸ್ಥೆಗೂ ಬಹಳ ಹತ್ತಿರದ ನಂಟು. ಮೊದಲಿನಿಂದಲೂ ಸಂಕ್ರಾಂತಿ ಹಬ್ಬದಂದು ಯಾವುದಾದರೊಂದು ಚಿತ್ರವನ್ನು ರವಿಚಂದ್ರನ್ ತಂದೆ ವೀರಾಸ್ವಾಮಿಯವರು ಬಿಡುಗಡೆ ಮಾಡೇ ಮಾಡುತ್ತಿದ್ದರು. ರವಿ ಕೂಡಾ ಕೆಲವು ವರ್ಷ ಈ ಸಂಪ್ರದಾಯವನ್ನು ಮುಂದುವರೆಸಿದ್ದರು. ಆದರೆ ಇತ್ತೀಚೆಗೆ ಸಂಪ್ರದಾಯಕ್ಕಿಂತ ಆತ್ಮತೃಪ್ತಿಯೇ ಮುಖ್ಯ ಎಂಬ ಸಿದ್ಧಾಂತಕ್ಕೆ ಅಂಟಿಕೊಂಡಿರುವ ರವಿಚಂದ್ರನ್ ಸಂಕ್ರಾಂತಿಯಂದು ಚಿತ್ರ ಬಿಡುಗಡೆ ಮಾಡುವ ಉತ್ಸಾಹ ತೋರಿಸಿರಲಿಲ್ಲ. ಇಲ್ಲದಿದ್ದರೆ 'ಮಂಜಿನ ಹನಿ'ಯನ್ನು ಸಂಕ್ರಾಂತಿಗೇ ಬಿಡುಗಡೆ ಮಾಡುತ್ತಿದ್ದರು.



ಈ ಚಿತ್ರದ ನಂತರ ಮಾರ್ಚ್ ತಿಂಗಳಲ್ಲಿ ರವಿ ನಿರ್ದೇಶನದ ಮತ್ತು ಅವರದ್ದೇ ಸಂಸ್ಥೆಯ ನಿರ್ಮಾಣದ 'ಕೀಚಕ' ಚಿತ್ರ ಸೆಟ್ಟೇರಲಿದೆ. ಇದರಲ್ಲಿ ರವಿಚಂದ್ರನ್ ಅವರದ್ದು ದ್ವಿಪಾತ್ರ. ಆ ದ್ವಿಪಾತ್ರದೊಂದಿಗೆ ನಿರ್ದೇಶನ, ಸಂಗೀತ, ಕಥೆ, ಚಿತ್ರಕತೆ ಮೊದಲಾದ ಜವಾಬ್ದಾರಿಗಳನ್ನು ಅವರೇ ಹೊತ್ತಿದ್ದಾರೆ. ಒಂದೇ ಮಾತಲ್ಲಿ ಹೇಳುವುದಾದರೆ ಇದು ಅವರ 'ಒನ್ ಮ್ಯಾನ್ ಶೋ'.

ಕಮರ್ಷಿಯಲ್ ಚಿತ್ರಗಳಲ್ಲಿ ಅನೇಕ ಪ್ರಯೋಗಗಳನ್ನು ಮತ್ತು ಹೊಸತನಗಳನ್ನು ಸೃಷ್ಟಿಸಿದ ರವಿಚಂದ್ರನ್ 'ಏಕಾಂಗಿ' ಚಿತ್ರವನ್ನು ನಿರ್ದೇಶಿಸಿ ಕನ್ನಡ ಚಿತ್ರ ಜಗತ್ತು ಬೆಚ್ಚಿ ಬೀಳುವಂತೆ ಮಾಡಿದ್ದರು. ಒಂದಿಷ್ಟು ಕೋಟಿ ಹಣ ಆ ಚಿತ್ರದಿಂದ ನಷ್ಟವಾದರೂ ಇಂದಿಗೂ ರವಿಚಂದ್ರನ್ "ನನ್ನ ಅತ್ಯುತ್ತಮ ಚಿತ್ರಗಳಲ್ಲಿ 'ಏಕಾಂಗಿ' ಮೊದಲನೆಯದ್ದು'' ಎನ್ನುತ್ತಾರೆ. ಕನ್ನಡ ಚಿತ್ರರಂಗದ ಶೋ ಮ್ಯಾನ್ ರವಿಚಂದ್ರನ್ ಈಗ 'ಏಕಾಂಗಿ' ಮಾದರಿಯಲ್ಲೇ 'ಜಸ್ಟ್ ಒನ್ ಮಿನಿಟ್' ಎಂಬ ಹೊಸ ಚಿತ್ರವನ್ನು ಮಾಡಹೊರಟಿದ್ದಾರೆ. ಈ ಚಿತ್ರದ ವಿಶೇಷತೆ ಏನೆಂದರೆ, ಇಡೀ ಚಿತ್ರದಲ್ಲಿ ರವಿಚಂದ್ರನ್ ಒಬ್ಬರೇ ಪಾತ್ರಧಾರಿ. ಏಕಾಂಗಿಯಲ್ಲಿ ಕಳೆದುಕೊಂಡಿದ್ದನ್ನು 'ಜಸ್ಟ್ ಒನ್ ಮಿನಿಟ್'ನಲ್ಲಿ ಗಳಿಸುವ ಆತ್ಮವಿಶ್ವಾಸ ಅವರದ್ದು.

ಈ ಮಧ್ಯೆ ರವಿಚಂದ್ರನ್ ತನ್ನ ಮಗ ನಿರಂಜನ್‌ನನ್ನು ಮುಂದಿನ ವರ್ಷ ಚಿತ್ರರಂಗಕ್ಕೆ ನಾಯಕನಟನಾಗಿ ಪರಿಚಯಿಸಲು ನಿರ್ಧರಿಸಿದ್ದಾರೆ. "ನೋಡು, ನೀನು ಯಾವಾಗ ಪ್ರೇಕ್ಷಕರನ್ನು ನಗಿಸಲು ಅಥವಾ ಅಳಿಸಲು ಸಿದ್ಧವಾಗುತ್ತಿಯೋ ಆಗ ನನಗೆ ತಿಳಿಸು. ನಾನು ನಿನಗಾಗಿ ಚಿತ್ರ ಮಾಡುತ್ತೇನೆ'' ಎಂದು ರವಿಚಂದ್ರನ್ ತನ್ನ ಮಗನಿಗೆ ಹೇಳಿದ್ದರಂತೆ. ಅಪ್ಪನ ಮಾತನ್ನು ಕೇಳಿದ ನಿರಂಜನ್ "ನನಗೆ ನಿರ್ಧಾರ ಕೈಗೊಳ್ಳಲು ಸ್ವಲ್ಪ ಸಮಯ ಬೇಕು'' ಎಂದು ಅಪ್ಪನ ಶೈಲಿಯಲ್ಲೇ ಉತ್ತರಿಸಿದನಂತೆ. ಅದಕ್ಕಾಗಿ ನಟನಾ ತರಬೇತಿ, ವ್ಯಾಯಾಮ, ಡ್ಯಾನ್ಸು, ಡಯಟಿಂಗ್ ಇವೆಲ್ಲದಕ್ಕೆ ಆತ ಕಳೆದ ಒಂದು ವರ್ಷದಿಂದ ಪ್ರಾಮುಖ್ಯತೆ ನೀಡಿ ತನ್ನದೇ ಲೋಕದಲ್ಲಿ ವಿಹರಿಸಿದ್ದ. ಮೊನ್ನೆ ಒಂದು ದಿನ ಬೆಳಗ್ಗೆ ನೇರ ಬಂದವನೇ "ಅಪ್ಪ, ನಾನೀಗ ಹೀರೋ ಆಗಲು ರೆಡಿ'' ಎಂದನಂತೆ. "ಆಯ್ತು ಮಗನೇ, ನನಗೆ ತಯಾರಿ ನಡೆಸಲು ಮೂರು ತಿಂಗಳು ಟೈಂ ಕೊಡು'' ಎಂದರಂತೆ ಕ್ರೇಜಿಸ್ಟಾರ್. ಈಗ ಮೂರು ತಿಂಗಳಲ್ಲಿ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ರವಿಚಂದ್ರನ್ ಹಗಲೂ ರಾತ್ರಿ ಮಗನಿಗಾಗಿ ಚಿತ್ರಕತೆ ಬರೆಯುತ್ತಿದ್ದಾರೆ.

ಅಂದರೆ, 2010ರಲ್ಲಿ ರವಿಚಂದ್ರನ್ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಒಂದೆಡೆ ಕಳೆದು ಹೋದ ತನ್ನ ವರ್ಚಸ್ಸು, ಸಂಪತ್ತು ಮತ್ತು ತಾರಾ ಮೌಲ್ಯವನ್ನು ಮತ್ತೆ ಪಡೆಯಲು ಹವಣಿಸುತ್ತಿದ್ದಾರೆ. ಇನ್ನೊಂದೆಡೆ ತನ್ನ ಹುಟ್ಟು ಗುಣದಂತೆ ಮತ್ತೆ 'ಏಕಾಂಗಿ'ಯಂತಹ ಪ್ರಯೋಗಾತ್ಮಕ ಮತ್ತು ಸಾಹಸಮಯ ಚಿತ್ರದ ಬಗ್ಗೆಯೂ ಯೋಚಿಸಿದ್ದಾರೆ. ಇವೆರಡರ ನಡುವೆ ತನ್ನ ಮಗನನ್ನು ನಾಯಕನಟನನ್ನಾಗಿ ಚಿತ್ರಜಗತ್ತಿಗೆ ಪರಿಚಯಿಸುವ ಮಹತ್ತರವಾದ ಜವಾಬ್ದಾರಿಯನ್ನೂ ತಮ್ಮ ಮೈಮೇಲೆ ಹೊತ್ತುಕೊಂಡಿದ್ದಾರೆ. ಈ ಮೂರರಲ್ಲಿ ರವಿ ಯಾವುದರಲ್ಲಿ ಗೆಲ್ಲುತ್ತಾರೆ? ಯಾವುದರಲ್ಲಿ ಸೋಲುತ್ತಾರೆ ಎಂಬುದು ಮುಖ್ಯವಲ್ಲ. ಈ ತರಹ ಹತ್ತು ಹಲವು ಯೋಜನೆಗಳನ್ನು ಹಾಕಿಕೊಂಡು ನಿರಂತರವಾಗಿ ಸಿನಿಮಾ ಬಗ್ಗೆಯೇ ಕನಸು ಕಾಣುವ ಇಂತಹ ನಟ ನಮ್ಮ ಚಿತ್ರರಂಗದಲ್ಲಿದ್ದಾರೆ ಎಂಬುದೇ ಸಂತೋಷದ ವಿಷಯ, ಅಲ್ಲವೇ? ಆ ಕಾರಣಕ್ಕಾಗಿಯಾದರೂ ರವಿಚಂದ್ರನ್‌ಗೆ ಇತ್ತೀಚಿನ ದಿನಗಳಲ್ಲಿ ಮರೀಚಿಕೆಯಾಗಿರುವ ಯಶಸ್ಸು ದೊರೆಯಬೇಕಿದೆ.

● ಶೆಣೈ

'ಸೇವಕ'ನ ರಾಣಿ ತಮನ್ನಾ!

ತೆಲುಗಿನ 'ಹ್ಯಾಪಿ ಡೇಸ್', 'ಕಾಳಿದಾಸು' ಮತ್ತು ತಮಿಳಿನ 'ಕಲ್ಲೂರಿ', 'ಪಡಿಕ್ಕಾದವನ್' ಮುಂತಾದ ಸೂಪರ್‌ಹಿಟ್ ಚಿತ್ರಗಳಲ್ಲಿ ನಟಿಸಿ ಖ್ಯಾತಿ ಪಡೆದಿರುವ ತಮನ್ನಾ ಈಗ ಕನ್ನಡಕ್ಕೆ ಎಂಟ್ರಿ ನೀಡಿದ್ದಾಳೆ. ಇತ್ತೀಚೆಗೆ ನಟ ಸೂರ್ಯ ಜನತೆ ತಮನ್ನಾ ನಟಿಸಿದ್ದ 'ಅಯಾನ್' ಚಿತ್ರ ವಿಶ್ವದಾದ್ಯಂತ ಬಿಡುಗಡೆಗೊಂಡು ಸಾಕಷ್ಟು ಹೆಸರು ಮಾಡಿತ್ತು.

ಸದ್ಯ ಕಾಲಿವುಡ್ ಮತ್ತು ಟಾಲಿವುಡ್‌ನಲ್ಲಿ ಓಡುವ ಕುದುರೆಯಾಗಿರುವ ತಮನ್ನಾಳನ್ನು 'ಸೇವಕ' ಚಿತ್ರಕ್ಕಾಗಿ ನಿರ್ದೇಶಕ ರಮೇಶ್ ಕಿಟ್ಟಿ ಕರೆತಂದಿದ್ದಾರೆ.

ಅಂದಹಾಗೆ, 'ಸೇವಕ'ನ ಸಖಿ ತಮನ್ನಾ ಕನ್ನಡ ಚಿತ್ರವೊಂದಕ್ಕೆ ಪಡೆಯುತ್ತಿರುವ ಸಂಭಾವನೆ ಕೇವಲ ಮೂವತ್ತು ಲಕ್ಷ ಮಾತ್ರ!!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604636, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore